# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 14 ಮಾರ್ಚ್ 31-ಏಪ್ರಿಲ್ 6, 1997 ಬೆಲೆ ರೂ. 2.00


# ಸಂಯುಕ್ತ ರಂಗ ತಪ್ಪು ಸಂಕೇತಗಳನ್ನು ನೀಡಬಾರದು

## -ಸುರ್ಜಿತ್

**ಬೆಲೆಯೇರಿಕೆಯ ಪ್ರಶ್ನೆಯನ್ನು ಸರಿಯಾಗಿ ಎದುರಿಸದಿದ್ದರೆ ಸಂಯುಕ್ತ ರಂಗ ಅದಕ್ಕೆ ಭಾರೀ ಬೆಲೆ ತೆರಬೇಕಾಗುತ್ತದೆ. ಆದ್ದರಿಂದ ಸಂಯುಕ್ತ ರಂಗದ ಅಂಗ ಪಕ್ಷಗಳು ಪರಿಸ್ಥಿತಿಯ ಬಗ್ಗೆ ಗಂಭೀರವಾಗಿ ಚಿಂತಿಸಿ ಕಾರ್ಮಿಕ ವರ್ಗ, ರೈತಾಪಿ ಜನಗಳು, ಕೃಷಿ ಕೂಲಿಕಾರರು, ನೌಕರರು, ಮಹಿಳೆಯರು ಹಾಗೂ ಕೋಟಿಗಟ್ಟಲೆ ಇತರ ಶ್ರಮ ಜೀವಿಗಳಿಗೆ ಪ್ರಯೋಜನಕಾರಿಯಾಗುವ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಕಳಕಳಿಯಿಂದ ಹೇಳಿದ್ದಾರೆ. ಇದರಿಂದ ಮಾತ್ರ ಬಿಜೆಪಿಯನ್ನು ಎಲ್ಲರೂ ದೂರೀಕರಿಸುವಂತೆ ಮಾಡಲು ಹಾಗೂ ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಸಾಧ್ಯ. ಇದರಲ್ಲಿ ಎಡಪಕ್ಷಗಳ ಪಾತ್ರ ಮಹತ್ವಪೂರ್ಣವಾದದ್ದಾಗಿದೆ ಎಂದಿರುವ ಅವರು ಜನಸಾಮಾನ್ಯರಿಗೆ ಪ್ರಯೋಜನ ತರುವಂತಹ ಧೋರಣೆಗಳನ್ನು ಅನುಷ್ಠಾನಕ್ಕೆ ತರಲು, ಅದೇ ವೇಳೆಗೆ ಎಡಶಕ್ತಿಗಳ ಮೂಲಭೂತ ನಿಲುವುಗಳಿಗೆ ಸಂಚಕಾರ ತರುವ ಧೋರಣೆಗಳ ವಿರುದ್ಧ ಹೋರಾಟ ನಡೆಸಬೇಕು ಎಂದು ಕರೆ ನೀಡಿದ್ದಾರೆ.**

ಸಂಯುಕ್ತ ರಂಗ ಸರಕಾರದ ಕೆಲವು ಧೋರಣೆಗಳ ಬಗ್ಗೆ ಕೆಲವು ವಿವಾದಗಳು ಇತ್ತೀಚೆಗೆ ಉಂಟಾಗಿರುವ ಸಂದರ್ಭದ ವಿಶ್ಲೇಷಣೆ ಮಾಡುತ್ತಾ ಈ ಮಾತುಗಳನ್ನಾಡಿರುವ ಸುರ್ಜಿತ್ ಇವನ್ನು ಸರಿಯಾಗಿ ಎದುರಿಸದಿದ್ದರೆ ಜನಗಳಲ್ಲಿ ಗೊಂದಲ ಉಂಟು ಮಾಡುವುದು ಸಹಜ ಎಂದಿದ್ದಾರೆ.

**ವಿವಿಧ ಕಣ್ಣೋಟಗಳು–ಸಮಾನ ಅಂಶಗಳು**

ಸಂಯುಕ್ತ ರಂಗ ಚುನಾವಣೆಗಳ ನಂತರದ ಪರಿಸ್ಥಿತಿಯ ಪರಿಣಾಮವಾಗಿ, ಕೋಮುವಾದಿ ಶಕ್ತಿಗಳ ತಕ್ಷಣದ ಸವಾಲನ್ನು ಎದುರಿಸಲು ಆರ್ಥಿಕ ನೀತಿಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಈ ರಂಗ ಮೂಡಿ ಬಂತು. ವಿವಿಧ ಕಣ್ಣೋಟಗಳ ಪಕ್ಷಗಳು ಒಟ್ಟು ಸೇರಬೇಕಾಗಿ ಬಂದಾಗ ಕೆಲವು ಸಮಾನ ಅಂಶಗಳನ್ನು ಗುರುತಿಸಿಕೊಳ್ಳುವುದು ಅಗತ್ಯ. ಈ ಉದ್ದೇಶದಿಂದಲೇ ಸಂಯುಕ್ತ ರಂಗದ 'ಸಮಾನ ಕನಿಷ್ಟ ಕಾರ್ಯಕ್ರಮ' ಮೂಡಿ ಬಂತು. ಇದನ್ನು ರೂಪಿಸುವಾಗ ಕೆಲವು ಮುಖ್ಯ ಪ್ರಶ್ನೆಗಳು ಮುಂದೆ ಬಂದವು. ಆಗಿನ ಪರಿಸ್ಥಿತಿಯಲ್ಲಿ ಹಲವು ರಾಜಿಗಳನ್ನು ಮಾಡಿಕೊಳ್ಳಬೇಕಾಗಿ ಬಂತು. ಆದರೆ ಆಗಲೂ ಕೆಲವು ಸಂಗತಿಗಳಿವೆ, ಆ ಬಗ್ಗೆ ರಾಜಿ ಸಾಧ್ಯವೇ ಇಲ್ಲ ಎಂದು ಸಿಪಿಐ(ಎಂ) ದೃಢ ನಿಲುವು ತಳೆಯಿತು ಎಂದಿರುವ ಸುರ್ಜಿತ್ ಸಾರ್ವಜನಿಕ ವಲಯದ ಶೇರುಗಳ ಮಾರಾಟಕ್ಕೆ ವಿರೋಧ, ವಿಮಾ ವಲಯವನ್ನು ತೆರೆಯುವುದಕ್ಕೆ ವಿರೋಧ ಇಂತಹ ಕೆಲವು ಪ್ರಶ್ನೆಗಳು ಎಂದಿದ್ದಾರೆ.

ಮುಂದುವರೆದು ಅವರು ಕಳೆದ ಹತ್ತು ತಿಂಗಳ ಆಗುಹೋಗುಗಳ ವಿಮರ್ಶೆ ಮಾಡುತ್ತಾ ಈ ಅವಧಿಯಲ್ಲಿ ಕೆಲವು ಸಕಾರಾತ್ಮಕ ಬೆಳವಣಿಗೆಗಳಾಗಿವೆ ಎಂದರು. ದೇಶಾದ್ಯಂತ ಕೋಮು ಶಾಂತಿ ನೆಲೆಸುವಂತಾಗಿದೆ. ಜಮ್ಮು-ಕಾಶ್ಮೀರದಲ್ಲಿನ ಯಶಸ್ವೀ ಚುನಾವಣೆಗಳು ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಲು, ಪಾಕಿಸ್ತಾನೀ ಆಳರಸರ ತಂತ್ರಗಳನ್ನು ಕಷ್ಟಸಾಧ್ಯಗೊಳಿಸಲು ನೆರವಾಗಿವೆ. ಈಶಾನ್ಯ ಭಾರತದ ಜನಗಳ ಸಮಸ್ಯೆಗಳತ್ತ ಗಮನ ಹರಿಸಲಾಗಿದೆ. ವಿವಿಧ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಲುಕಿದ ರಾಜಕಾರಣಿಗಳ ವಿರುದ್ಧ ಕಾನೂನು ಕ್ರಮಗಳು ಆರಂಭವಾಗಿವೆ. ವಿದೇಶಾಂಗ ರಂಗದಲ್ಲೂ, ಕೆಲವೆಡೆ ಚಂಚಲತೆ ಕಂಡರೂ ಒಟ್ಟಾರೆಯಾಗಿ ಸಕಾರಾತ್ಮಕ ಪ್ರಯತ್ನ ನಡೆದಿದೆ.

**ಸನ್ನಿವೇಶದ ದುರಂತ**

ಆದರೆ ಆರ್ಥಿಕ ರಂಗದಲ್ಲಿ ಮಾತ್ರ ಸಂಯುಕ್ತ ರಂಗದ ನೀತಿಗಳು ಐಎಂಎಫ್/ವಿಶ್ವ ಬ್ಯಾಂಕ್ ಹೇರಿದ ನೀತಿಗಳನ್ನೇ ಕಣ್ಣು ಮುಚ್ಚಿ ಮುಂದುವರಿಸುತ್ತಿದೆ. ಲ್ಯಾಟಿನ್ ಅಮೇರಿಕಾ ದೇಶಗಳನ್ನು ಮುಳುಗಿಸಿ ಬಿಟ್ಟ ನೀತಿಗಳಿವು ಎಂದು ಸುರ್ಜಿತ್ ಆತಂಕ ವ್ಯಕ್ತಪಡಿಸಿದ್ದಾರೆ.

ಪರಿಸ್ಥಿತಿಯ ದುರಂತ ಎಂದರೆ ಸರಕಾರ ಆರ್ಥಿಕ ರಂಗದಲ್ಲಿ ಇಂತಹ ಧೋರಣೆಗಳನ್ನು, ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ ಸಾಮಾಜಿಕ ವಲಯದಲ್ಲಿ ಬಹಳ ಹಿಂದೆ ಬಿದ್ದಿದೆ. 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ನೀಡಿದ ವಚನಗಳನ್ನು ಪಾಲಿಸುವಲ್ಲಿ ಹಿಂದೇಟು ಹಾಕುತ್ತಿದೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯದ ಐವತ್ತು ವರ್ಷಗಳ ನಂತರವೂ ಕೃಷಿ ಕೂಲಿಕಾರರು ಶೋಚನೀಯ ಸ್ಥಿತಿಯಲ್ಲಿದ್ದಾರೆ. ಅಸೆಂಬ್ಲಿಗಳು ಮತ್ತು ಪಾರ್ಲಿಮೆಂಟಿನಲ್ಲಿ ಭೂಮಾಲಕ ಶಕ್ತಿಗಳ ಪ್ರಾಬಲ್ಯದಿಂದಾಗಿ ಅವರ ಬೇಡಿಕೆಗಳತ್ತ ಗಮನವನ್ನೇ ಹರಿಸಿಲ್ಲ. 1980ರಿಂದ ಅವರ ಬೇಡಿಕೆಗಳತ್ತ ಗಮನ ಹರಿಸುವ ಒಂದು ಶಾಸನ ಸಂಸತ್ತಿನ ಮುಂದಿದೆ. ಇನ್ನೂ ಅದರ ಅಂಗೀಕಾರದ ಲಕ್ಷಣಗಳಿಲ್ಲ. ಅದೇ ರೀತಿ ಗುಪ್ತ ಮತದಾನಗಳ ಮೂಲಕ ಕಾರ್ಮಿಕ ಸಂಘಗಳ ಮಾನ್ಯತೆಯ ಬೇಡಿಕೆಯೂ ಈಡೇರದೆ ಉಳಿದಿದೆ. ಆಳುವ ಪಕ್ಷದ ಸದಸ್ಯರ ಮುಖಂಡತ್ವದಲ್ಲಿರುವ ಕಾರ್ಮಿಕ ಸಂಘಗಳಿಗೆ ಕಾರ್ಮಿಕರ ಬೆಂಬಲವಿರದಿದ್ದರೂ ಅವಕ್ಕೆ ಪೋಷಣೆ ಸಿಗುತ್ತಿದೆ. ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿಯ ಮಸೂದೆಯನ್ನು ಕೂಡಾ ಅನಗತ್ಯ ವಿವಾದಗಳಲ್ಲಿ ಸಿಲುಕಿಸಲಾಗಿದೆ. ಭ್ರಷ್ಟಾಚಾರವನ್ನು ತಡೆಯಲು ತರಬೇಕೆಂದಿರುವ ಲೋಕಪಾಲ್ ಮಸೂದೆಯಲ್ಲೂ ಬಹಳ ಆಕ್ಷೇಪಾರ್ಹ ಅಂಶಗಳಿವೆ. ಇದೇ ರೀತಿ ಕಾರ್ಯಾಂಗ ತನ್ನ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಕಂಡ ವಿಫಲತೆಯಿಂದಾಗಿ ನ್ಯಾಯಾಂಗ ಹಲವು ಸಾರ್ವಜನಿಕ ಹಿತಾಸಕ್ತಿಯ ವಿಷಯಗಳಲ್ಲಿ ಮಧ್ಯಪ್ರವೇಶಿಸುತ್ತಿರುವಾಗ ನ್ಯಾಯಾಧೀಶರ ನೇಮಕದ ವಿಷಯದಲ್ಲಿ ಜನಗಳಲ್ಲಿ ಸಂದೇಹ ಉಂಟು ಮಾಡುವಂತಹ, ತಪ್ಪು ಸಂಕೇತಗಳನ್ನು ನೀಡುವಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದೂ ಸುರ್ಜಿತ್ ಖೇದ ವ್ಯಕ್ತಪಡಿಸಿದರು.

'ಸಮಾನ ಕನಿಷ್ಟ ಕಾರ್ಯಕ್ರಮ'ದ ಅನುಷ್ಠಾನದ ಬಗ್ಗೆ ಸಂಯುಕ್ತ ರಂಗ ಚಾಲನಾ ಸಮಿತಿಯಲ್ಲಿ ಸರಿಯಾದ ಚರ್ಚೆ ನಡೆಯದಿರುವುದು ಒಂದು ಆತಂಕಕಾರಿ ಸಂಗತಿ ಎಂದಿರುವ ಸುರ್ಜಿತ್ ಬಡವರ ಪರವಾದ ಧೋರಣೆಗಳ ಅನುಷ್ಠಾನದಲ್ಲಿ ಹಾಗೂ ಸಮಾನ ಕನಿಷ್ಟ ಕಾರ್ಯಕ್ರಮದ ವಚನಗಳ ಈಡೇರಿಕೆಯಲ್ಲಿ ಸ್ಪಷ್ಟ ದಿಸೆಯಿಲ್ಲದಿರುವುದರಿಂದ ಜನಗಳಲ್ಲಿ ಭ್ರಮ ನಿರಸನ ಆರಂಭವಾಗುವ ಸಂಭವವಿದೆ. ಜನಗಳ ಅಸಂತೃಪ್ತಿಯನ್ನು ಬೆಳೆಯಗೊಟ್ಟರೆ ಅದನ್ನು ಬಿಜೆಪಿ ಬಳಸಿಕೊಳ್ಳಲು ಅವಕಾಶವಾಗುತ್ತದೆ. ಸಂಯುಕ್ತ ರಂಗ ಸರಕಾರದ ಬಹಳಷ್ಟು ಆರ್ಥಿಕ ನೀತಿಗಳ ಬಗ್ಗೆ ಬಿಜೆಪಿಗೆ ಭಿನ್ನಾಭಿಪ್ರಾಯವಿಲ್ಲದಿದ್ದರೂ ಜನಗಳ ಅಸಂತೃಪ್ತಿಯನ್ನು ತನ್ನ ಸ್ವಾರ್ಥದ ಈಡೇರಿಕೆಗೆ ಬಳಸಿಕೊಂಡು ಸಂಯುಕ್ತ ರಂಗಕ್ಕೆ ಸವಾಲು ಹಾಕಲು ಅವಕಾಶವಾಗುತ್ತದೆ. ಹೀಗಾದರೆ ಸಂಯುಕ್ತ ರಂಗ ರಚನೆಯ ಉದ್ದೇಶವೇ ವಿಫಲವಾದಂತಾಗುತ್ತದೆ ಎಂದು ಎಚ್ಚರಿಸಿರುವ ಸುರ್ಜಿತ್ ಈ ಹಿನ್ನೆಲೆಯಲ್ಲಿ ಸಂಯುಕ್ತ ರಂಗ ಅಂಗ ಪಕ್ಷಗಳಿಗೆ ಹಾಗೂ ಎಡಪಕ್ಷಗಳು ತಮ್ಮ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸಬೇಕು ಎಂದು ಕರೆ ನೀಡಿದ್ದಾರೆ. □

## ಜನ-ವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಜನಸಾಮಾನ್ಯರ ಮತ್ತೊಂದು ಪ್ರತಿಭಟನೆ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ದೇಶಾದ್ಯಂತ ಹಾಗೂ ರಾಜ್ಯಾದ್ಯಂತ ಮಾರ್ಚ್ 27ರಂದು ಕಾರ್ಮಿಕರು, ನೌಕರರು, ರೈತರು, ಕೃಷಿ ಕೂಲಿಕಾರರು, ಯುವಜನ-ವಿದ್ಯಾರ್ಥಿ-ಮಹಿಳೆಯರು ಹಾಗೂ ಇತರಎಲ್ಲಾ ಶ್ರಮಜೀವಿಗಳ ಪ್ರತಿನಿಧಿಗಳು ಎರಡು ಗಂಟೆಗಳ ರೈಲು ತಡೆ, ರಸ್ತೆ ತಡೆ ನಡೆಸಿ ಸಂಯುಕ್ತ ರಂಗ ಸರಕಾರ ಹಿಂದಿನ ರಾವ್ ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳನ್ನೇ ಮುಂದುವರೆಸುತ್ತಿರುವುದರ ವಿರುದ್ಧ ತಮ್ಮ ಆಕ್ರೋಶವನ್ನು ಮತ್ತೊಮ್ಮೆ ವ್ಯಕ್ತಪಡಿಸಿದರು.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬಂದ ವರದಿಗಳ ಪ್ರಕಾರ ಬಿಜಾಪುರದಲ್ಲಿ ರಸ್ತೆ ತಡೆ ನಡೆಸುತ್ತಿದ್ದ ಹಿರಿಯ ಸಿಪಿಐ(ಎಂ) ಮುಖಂಡ ಎನ್.ಕೆ.ಉಪಾಧ್ಯಾಯ ಹಾಗೂ ರೈತ ಮುಖಂಡ ಭೀಮಸಿ ಕಲಾದಗಿ ಮತ್ತಿತರ ನೂರಾರು ಜನಗಳನ್ನು ಬಂಧಿಸಲಾಗಿದೆ. ಘಟ್ಟಕ್ಕಳದಲ್ಲಿ ರಸ್ತೆ ತಡೆ ನಡೆಸುತ್ತಿದ್ದ 800ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಬೆಂಗಳೂರಿನಲ್ಲಿ ಚೆನ್ನೈಗೆ ಹೊರಟಿದ್ದ ಬೃಂದಾವನ್ ಎಕ್ಸ್‌ಪ್ರೆಸ್‌ನ್ನು ತಡೆಹಿಡಿಯಲಾಯಿತು. ನಗರದ ವಿವಿಧ ಕಾರ್ಖಾನೆ, ಕಛೇರಿಗಳ ನೌಕರರು, ಕಾರ್ಮಿಕರು ಸುತ್ತಮುತ್ತಲ ಹಳ್ಳಿಗಳ ರೈತರು, ಮಹಿಳೆಯರು, ವಿದ್ಯಾರ್ಥಿ-ಯುವಜನರು, ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.




## ಪ್ರಶಸ್ತಿಯಿಂದ ಮುಟ್ಟುಗೋಲಿನವರೆಗೆ! ನಾವು ಎತ್ತ ಸಾಗಿದ್ದೇವೆ?

ಇನ್ನೊಂದು ಸಾಹಿತ್ಯ ಕೃತಿಯ ಬಗ್ಗೆ ವಿವಾದ ಈಗ ರಾಜ್ಯವನ್ನು ತಟ್ಟಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಆರಿಸಿದ ಡಾ.ಪಿ.ವಿ.ನಾರಾಯಣರವರ "ಧರ್ಮ ಕಾರಣ"ವನ್ನು ಈಗ ಕರ್ನಾಟಕ ಸರಕಾರ ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಿದೆ. ಈ ನಡುವೆ ಹಲವು ಅತ್ಯಂತ ಅನಾರೋಗ್ಯಕರ ಘಟನೆಗಳು ನಡೆದು ಹೋದವು. ವೀರಶೈವ ಮಹಾ ಸಭಾ ಈ ಕೃತಿಯನ್ನು ನಿಷೇಧಿಸುವಂತೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿತು, ರಾಜ್ಯದ ಕಾಂಗ್ರೆಸ್(ಐ), ಬಿಜೆಪಿ ಜನತಾದಳದ ಮುಖಂಡರುಗಳೂ ತಾ ಮುಂದು ನಾಮುಂದು ಎಂದು ಸ್ಪರ್ಧೆಯಲ್ಲಿ ತೊಡಗಿದರು, ಭೀಮಣ್ಣ ಖಂಡ್ರೆ ವಿಧಾನಪರಿಷತ್ತಿನಲ್ಲಿ ಪುಸ್ತಕದ ಪ್ರತಿಯನ್ನು ಸುಟ್ಟರು, ವಿಶ್ವನಾಥ ರೆಡ್ಡಿ ಮುದ್ನಾಳ್ ಉಪವಾಸ ಸತ್ಯಾಗ್ರಹ ಮತ್ತು ಗಣಾಚಾರ ಪ್ರಯೋಗದ ಬೆದರಿಕೆ ಹಾಕಿದರು. ದಂಡೋಪಾಯದ ಬೆದರಿಕೆಯೂ ಬಹಿರಂಗವಾಗಿ ಬಂದಿವೆ.

ವಿವಾದದ ಪ್ರಶ್ನೆಯಿರುವಾಗ ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯಾಗುತ್ತದೆ, ಶಾಸಕರು ಇಂತಹ ಒತ್ತಾಯ ತರಬಾರದು ಎಂದು ವಿಧಾನಸಭೆಯಲ್ಲಿ ಸಿಪಿಐ(ಎಂ) ಶಾಸಕ ಶ್ರೀರಾಮ ರೆಡ್ಡಿಯವರ ಒಂಟಿದನಿಯನ್ನು ಒಟ್ಟಾಗಿ ಬದಿಗೊತ್ತಿದ ಕಾಂಗ್ರೆ ಬಿಜೆಪಿ ಮತ್ತು ಸ್ವತಃ ಜನತಾದಳದ ಘಟಾನುಘಟಿಗಳ ಒತ್ತಡಕ್ಕೆ ಕೊನೆಗೂ ಪಟೇಲ್ ಸರಕಾರ ಮತ್ತೊಮ್ಮೆ ತಲೆ ಬಾಗಿತು.

ಇದಕ್ಕೆ ಮೊದಲು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವೆಯವರು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಪತ್ರ ಬರೆದು ಪ್ರಶಸ್ತಿಯ ಮರುಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದಾಗ ಸಭೆ ಸೇರಿದ ಅಕಾಡೆಮಿಯ ಸರ್ವ ಸದಸ್ಯರ ಸಭೆ ಪ್ರಶಸ್ತಿಯನ್ನು ಮತ್ತೆ ನೀಡಲು ತೀರ್ಮಾನಿಸಿತು. ವಿವಾದ ನ್ಯಾಯಾಲಯಕ್ಕೆ ಹೋದಾಗ ಲೇಖಕರು ಪ್ರಶಸ್ತಿಯನ್ನು ನಿರಾಕರಿಸಲು ನಿರ್ಧರಿಸಿದರು. ಆದರೆ ಕಾದಂಬರಿಯಲ್ಲಿನ ಅಭಿಪ್ರಾಯವನ್ನು ಬಿಟ್ಟುಕೊಡಲೂ ನಿರಾಕರಿಸಿದರು. ಅತ್ತ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಶಾಂತರಸರು ರಾಜೀನಾಮೆ ನೀಡಿರುವುದಾಗಿ ವರದಿಯಾಗಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಎಂದು ಬರಗೂರು ರಾಮಚಂದ್ರಪ್ಪ, ಜಿ.ಎಸ್.ಶಿವರುದ್ರಪ್ಪ, ಚಿದಾನಂದಮೂರ್ತಿ ಮತ್ತಿತರ ಲೇಖಕರು, ಸಂಶೋಧಕರು ಖಂಡಿಸಿದ್ದಾರೆ.

ಇದು 12ನೇ ಶತಮಾನದ ಚನ್ನಬಸವಣ್ಣ ಮತ್ತಿತರ ಶರಣರಿಗೆ ಮಾಡಿದ ಅವಮಾನ, ಜನಗಳ ಧಾರ್ಮಿಕ ಭಾವನೆಗಳಿಗೆ ಮಾಡಿರುವ ಆಘಾತ ಎಂಬ ಯಡಿಯೂರಪ್ಪ, ಭೀಮಣ್ಣ ಖಂಡ್ರೆ ಇತ್ಯಾದಿ ವಿವಿಧ ಬಣ್ಣಗಳ ರಾಜಕಾರಣಿಗಳ ಅಭಿಪ್ರಾಯವನ್ನು ಕೂಡಾ ಎಲ್ಲರೂ ಒಪ್ಪುತ್ತಿಲ್ಲ. ನೀಲಗುಂದದ ಶ್ರೀ ಮಹಾಂತೇಶ್ವರಶಿವಾಚಾರ್ಯಸ್ವಾಮಿಗಳು ಇವರಿಗೆಲ್ಲಾ ಸರ್ವಧರ್ಮಗಳ ಸಂರಕ್ಷಣೆಯ ಗುತ್ತಿಗೆಯನ್ನು ನೀಡಿದವರಾರು ಎಂದು ಪ್ರಶ್ನಿಸಿದ್ದಾರೆ. ಸತ್ಯ ಸಂಶೋಧನೆಗೂ ಹಾಗೂ ಅವಹೇಳನೆಗೂ ಇರುವ ಅಂತರವೇ ಅವರಿಗೆ ಗೊತ್ತಿಲ್ಲವೆಂದು ಮೂದಲಿಸಿದ್ದಾರೆ. "ವೇದಕ್ಕೆ ಒರೆಯನಿಕ್ಕುವೆ... ಶಾಸ್ತ್ರಕ್ಕೆ ನಿಗಳವನಿಕ್ಕುವೆ" ಎಂದು ವಿಮರ್ಶೆ, ವಿಶ್ಲೇಷಣೆಗಳನ್ನು ಕಟುವಾಗಿ ಮಾಡಲು ಕಲಿಸಿದ ಬಸವಣ್ಣನವರ ಹೆಸರಿನಲ್ಲೇ, ವಿಚಾರ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸತ್ಯ ಸಂಶೋಧನ ಸ್ವಾತಂತ್ರ್ಯಗಳನ್ನು ಸ್ವತಃ ಚಲಾಯಿಸಿದ ಶರಣರ ಹೆಸರಿನಲ್ಲೇ ಆ ಹಕ್ಕುಗಳನ್ನು ಕಸಿದುಕೊಳ್ಳಲೆತ್ನಿಸಲಾಗುತ್ತಿದೆ ಎಂಬ ನೀಲಗುಂದ ಸ್ವಾಮಿಗಳ ಟೀಕೆ. ಈ ಆವೇಶ 850 ವರ್ಷಗಳಾದರೂ ನಮ್ಮ ಮನಸ್ಸಿನಲ್ಲಿಯ ಅಸ್ಪೃಶ್ಯರ ಬಗೆಗಿನ ಹೇಯ ಭಾವನೆ ತೊಲಗಿಲ್ಲ ಎಂಬುದಕ್ಕೆ ಸಾಕ್ಷಿ ಎಂಬ ಅವರ ವಿಮರ್ಶೆ ಗಮನಾರ್ಹ.

ಒಟ್ಟಿನಲ್ಲಿ ಪಟೇಲ್ ಸರಕಾರ ಮತ್ತೆ ಮತ್ತೆ ಸಂಕುಚಿತ ದೃಷ್ಟಿಕೋನದ ಜನಗಳ, ಗುಂಪುಗಳ ಬೆದರಿಕೆಗಳಿಗೆ ತಲೆಬಾಗುವ ಪ್ರವೃತ್ತಿಯನ್ನು ತೋರುತ್ತಿದೆಯೆಂಬುದಂತೂ ಸ್ವಯಂವೇದ್ಯ. ತುರ್ತು ಪರಿಸ್ಥಿತಿ ಕಾಲದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡಲು ಮುಂದಾದವರೊಂದಿಗೆ, ಅದನ್ನು ವಿರೋಧಿಸಿದವರೂ ಕೈ ಮಿಲಾಯಿಸಿದ್ದು ದಿನ ಬೆಳಗಾದರೆ 'ರಥ ಯಾತ್ರೆ'ಗಳು ಮತ್ತಿತರ ಹಲವು ರೀತಿಗಳಲ್ಲಿ ನಿರ್ದಿಷ್ಟ ಜನ ವಿಭಾಗಗಳ ಭಾವನೆಗಳನ್ನು ಚುಚ್ಚುತ್ತಿರುವವರ ಜತೆಗೂಡಿರುವುದು, ಇವರೆಲ್ಲರ ಗೋಸುಂಬೆತನವನ್ನು ಎದುರಿಸುವಲ್ಲಿ ರಾಜ್ಯ ಸರಕಾರ ಮತ್ತೆ ವಿಫಲವಾಗಿರುವುದು ರಾಜ್ಯದ ಪ್ರಜಾಪ್ರಭುತ್ವವಾದಿಗಳಿಗೆಲ್ಲಾ ಬಹಳ ದುಃಖದ ಸಂಗತಿಯೇ ಸರಿ.


ಆಲಮಟ್ಟಿ ಆಣೆಕಟ್ಟು: ತಜ್ಞರ ಸಮಿತಿ ಏನು ಹೇಳಿದೆ? ➢ 3

ಜನರ ನೋವಿಗೆ ಸ್ಪಂದಿಸುವ 'ನಿರಂತರ' ➢ 4

ನೇಣುಗಂಬದ ನೆರಳಲ್ಲಿ...... ➢ 8

ವಿದ್ಯುತ್ ವಲಯದ ವ್ಯಥೆಗಳು...... ➢ 5






# ಆಳುವವರನ್ನು ಎಚ್ಚರಿಸಿದ ಕೃಷಿ ಕೂಲಿಕಾರರು

ಭಾರತದ ಜನ ಸಮೂಹದ ಅತಿ ಬಡವ ಹಾಗೂ ಅತ್ಯಂತ ನಿರ್ಲಕ್ಷಿತ ವಿಭಾಗವಾದ ಕೃಷಿಕೂಲಿಕಾರರ ಧ್ವನಿಯಾಗಿ ಸಾವಿರಾರು ಕೃಷಿ ಕಾರ್ಮಿಕರು ಮಾರ್ಚ್ 12 ರಂದು ಸಂಸತ್ ಚಲೋ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲೇ ಕೃಷಿಕಾರ್ಮಿಕರಿಗಾಗಿ ಕೇಂದ್ರೀಯ ಕಾನೂನನ್ನು ರಚಿಸುವಂತೆ ಒತ್ತಾಯಿಸುವ ರಣಕಹಳೆಯನ್ನು ದೆಹಲಿಯ ಬೀದಿಗಳಲ್ಲಿ ಮೊಳಗಿಸಿದರು.

ಕೃಷಿ ಕೂಲಿಕಾರರ ಜೀವನದಲ್ಲಿ ಹೊಸ ಬೆಳಕನ್ನು ಬೀರಬಹುದಾದ ಕೇಂದ್ರ ಕಾನೂನನ್ನು ಮಾಡುವುದಾಗಿ ಹಿಂದೆ ಅಧಿಕಾರ ನಡೆಸಿದ ಅನೇಕ ಪಕ್ಷಗಳ ಸರಕಾರಗಳು ಆಶ್ವಾಸನೆ ಕೊಟ್ಟಿದ್ದವು. ಈಗ ಅಧಿಕಾರದಲ್ಲಿರುವ ಸಂಯುಕ್ತ ರಂಗ 'ಸಮಾನ ಕನಿಷ್ಠ ಕಾರ್ಯಕ್ರಮ' ಕೂಡ ಈ ವಿಚಾರದಲ್ಲಿ ಭರವಸೆ ನೀಡಿದೆ. ಆದರೆ ಇವೆಲ್ಲ ಭರವಸೆಗಳಾಗಿಯೇ ಉಳಿದಿವೆಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲ.

ಬಹುವಾಗಿ ಉತ್ತರ ಭಾರತದ ಅನೇಕ ರಾಜ್ಯಗಳಿಂದ ಬಂದಿದ್ದ ಗ್ರಾಮೀಣ ಬಡವರುಳ್ಳ ಮಾರ್ಚ್ 12ರ ರ್ಯಾಲಿ ಈ ಆಶ್ವಾಸನೆಯನ್ನು ದೇವೇಗೌಡ ಸರಕಾರಕ್ಕೆ ನೆನಪಿಸಿತು ಹಾಗೂ ಇದನ್ನು ಈಡೇರಿಸದಿದ್ದರೆ ದೇಶದ ಉದ್ದಗಲಕ್ಕೆ ತೀಕ್ಷ್ಣ ಆಂದೋಲನವನ್ನು ನಡೆಸುವುದಾಗಿ ಎಚ್ಚರಿಕೆ ನೀಡಿತು.

ಕೃಷಿ ಕಾರ್ಮಿಕರ ಐದು ಕೇಂದ್ರೀಯ ಸಂಘಟನೆಗಳಾದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯೂಯು), ಭಾರತೀಯ ಕಿಸಾನ್‌ಮಜ್ದೂರ್ ಯೂನಿಯನ್(ಬಿಕೆಎಂಯು), ಅಖಿಲ ಭಾರತ ಕೃಷಿ ಶ್ರಮಿಕ ಯೂನಿಯನ್, ಸಂಯುಕ್ತ ಕಿಸಾನ್ ಸಭಾ ಮತ್ತು ಹಿಂದ್‌ಖೇತ್ ಮಜ್ದೂರ್ ಸಭಾ ಇವುಗಳು ರ್ಯಾಲಿಯನ್ನು ಸಂಘಟಿಸಿದ್ದವು.

ರ್ಯಾಲಿಯಲ್ಲಿ ಪಾಲ್ಗೊಂಡ ಬಹುತೇಕ ಜನರು ಪಂಜಾಬಿನ ವಿವಿಧ ಜಿಲ್ಲೆಗಳಿಂದ ಬಂದವರಾಗಿದ್ದರು. ಕೆಂಬಾವುಟ ಹಾಗೂ ಬ್ಯಾನರ್‌ಗಳನ್ನು ಹಿಡಿದಿದ್ದ ಪ್ರದರ್ಶನಕಾರರು ಫಿರೋಜ್‌ಷಾ ರಸ್ತೆಯಲ್ಲಿ ಹೊರಟು ಸಂಸತ್ ರಸ್ತೆಯ ಪೋಲೀಸ್ ಠಾಣೆ ಸಮೀಪ ಬಂದಾಗ ಮುಂದೆ ಹೋಗದಂತೆ ಅವರನ್ನು ಪೋಲೀಸರು ತಡೆದರು. ಅಲ್ಲೇ ನಡೆದ ಸಾರ್ವಜನಿಕ ಸಭೆಯಲ್ಲಿ ಅನೇಕ ಮುಖಂಡರು ಮಾತನಾಡಿದರು.

ಹಿರಿಯ ಕಿಸಾನ್ ಮುಖಂಡ ಮತ್ತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ|| ಹರ್ಕಿಶನ್ ಸಿಂಗ್ ಸುರ್ಜಿತ್, ಅಖಿಲ ಭಾರತಕಿಸಾನ್ ಸಭಾಪ್ರಧಾನಕಾರ್ಯದರ್ಶಿ ಹಾಗೂ ರಾಜ್ಯಸಭೆ ಸದಸ್ಯ ಎಸ್. ರಾಮಚಂದ್ರನ್ ಪಿಳ್ಳೆ, ಎಐಎಡಿಬ್ಲ್ಯೂಯು ಜಂಟಿ ಕಾರ್ಯದರ್ಶಿ ಹಾಗೂ ಲೋಕಸಭಾ ಸದಸ್ಯ ಹನನ್‌ಮುಲ್ಲಾ ಪ್ರಮುಖ ಭಾಷಣಕಾರರಾಗಿದ್ದರು.

"ನಿಮ್ಮ ಜೀವನದಲ್ಲಿ ಬದಲಾವಣೆ ತರುವಂಥ ಸುದೀರ್ಘ ಹೋರಾಟಕ್ಕೆ ಸನ್ನದ್ಧರಾಗಿ" ಎಂದು ಕಾಂ|| ಸುರ್ಜಿತ್ ಕೃಷಿ ಕೂಲಿಗಾರರಿಗೆ ಕರೆ ನೀಡಿದರು.

ಕೃಷಿ ಕಾರ್ಮಿಕರ ಹೋರಾಟಕ್ಕೆ ಕಿಸಾನ್ ಸಭಾದ ಸಂಪೂರ್ಣ ಬೆಂಬಲವಿದೆ ಎಂದು ಸೌಹಾರ್ದತತೆ ವ್ಯಕ್ತಪಡಿಸಿದ ಎಐಕೆಎಸ್ ಮುಖಂಡ ರಾಮಚಂದ್ರನ್ ಪಿಳ್ಳೆ ಘೋಷಿಸಿದರು.

**ನಾಯಿಗೆ ಗಾಯವಾದರೆ ಬೊಬ್ಬೆ ಆದರೆ.........**

'ನಮ್ಮ ದೇಶದಲ್ಲಿ ಪ್ರಾಣಿಗಳನ್ನು ರಕ್ಷಿಸಲು ಕಾನೂನು ಇದೆ. ಪ್ರತಿಸಲ ಎಲ್ಲೋ ಒಂದು ನಾಯಿಗೆ ಗಾಯವಾದರೆ ಮೇನಕಾ ಗಾಂಧಿ ಲಬೊ ಲಬೊ ಎಂದು ಬೊಂಬ್ಡಾ ಹೊಡೆಯುತ್ತಾರೆ. ಆದರೆ 10 ಕೋಟಿ ಮಾನವ ಜೀವಿಗಳಿಗಾಗಿ ಕಾನೂನು ಇಲ್ಲ' ಎಂದು ಹನನ್ ಮುಲ್ಲಾ ಹೇಳಿದರು. ಕೃಷಿ ಕಾರ್ಮಿಕರಿಗಾಗಿ ಇನ್ನೂ ಸಮಗ್ರ ಕಾನೂನನ್ನು ರಚಿಸದಿರುವುದನ್ನು ಅವರು ಈ ರೀತಿಯಾಗಿ ಟೀಕಿಸಿದರು.

ಬಿ.ಕೆ.ಎಂ.ಯು ಪ್ರಧಾನ ಕಾರ್ಯದರ್ಶಿ ಪಿ.ಕೆ.ಕೊಡಿಯಾನ್, ಎಐಎಡಿಬ್ಲ್ಯೂಯು ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ ಮತ್ತು ಎಐಕೆಎಸ್ ಕಾರ್ಯದರ್ಶಿ ಮಹಮುದ್ ಯಾಕೂಬ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷೀಯ ಮಂಡಳಿಯ ಸದಸ್ಯರು ಹಾಗೂ ಸುರ್ಜಿತ್, ಹನನ್‌ಮುಲ್ಲಾ, ಪಿಳ್ಳೆ ಅವರಲ್ಲದೆ ವಿಜಯ ರಾಘವನ್, ಭಾನ್‌ಸಿಂಗ್ ಭೌರಾ, ಮೋಹನ ಸಿಂಗ್ ರಜಪೂತ್ ಮತ್ತು ಡಿಡಿ ಶಾಸ್ತ್ರಿ ಅವರೂ ಮಾತನಾಡಿದರು.

# "ಪ್ರತಿದಿನವೂ ಹೊಸ ವಿಷಯ ಅರಿವಿಗೆ ಬಂತು"

**ಇತ್ತೀಚೆಗೆ ನಡೆದ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ)ನ ೯ನೇ ಅಖಿಲ ಭಾರತ ಸಮ್ಮೇಳನದಲ್ಲಿ ಮೊದಲ ಬಾರಿಗೆ ಭಾಗವಹಿಸಿದ ಕರ್ನಾಟಕ ವಿದ್ಯಾರ್ಥಿ ಪ್ರತಿನಿಧಿಯೊಬ್ಬರ ಅನಿಸಿಕೆಗಳು.**

ದಿ.21.2.97 ರಿಂದ 24.2.97 ರವರೆಗೆ ಭಾರತದಲ್ಲಿಯೇ ಎರಡನೇ ಅತಿ ದೊಡ್ಡ ಜಿಲ್ಲೆಯಾದ ಪಶ್ಚಿಮ ಬಂಗಾಳದ ಮಿಡ್ನಾಪುರದಲ್ಲಿ ಎಸ್‌ಎಫ್‌ಐನ ಅಖಿಲ ಭಾರತ ಸಮ್ಮೇಳನ ನಡೆಯಿತು. ಕರ್ನಾಟಕದಿಂದ ತೆರಳಿದ ಪ್ರತಿನಿಧಿ ಮತ್ತು ವೀಕ್ಷಕರಲ್ಲಿ ನಾನೊಬ್ಬ ವೀಕ್ಷಕಳಾಗಿ ಭಾಗವಹಿಸಿದ್ದೆ. ಈ ಮೊದಲು ಪಶ್ಚಿಮ ಬಂಗಾಳದ ಬಗ್ಗೆ ಕೆಲವು ವಿಷಯಗಳನ್ನು ಓದಿದ್ದರೂ ಪ್ರತ್ಯಕ್ಷ ನೋಡಿದ ಅನುಭವವಿಲ್ಲದ್ದರಿಂದ ಪ್ರತಿದಿನವೂ ಹೊಸ ವಿಷಯ ಅರಿಯಲು ಅನುಕೂಲವಾಯಿತು. ಪ್ರತಿನಿಧಿಗಳಿಗೋಸ್ಕರ ನೀಡಿದ ಗೌರವಾದರದ ಸ್ವಾಗತ, ಅಚ್ಚುಕಟ್ಟಾದ ವ್ಯವಸ್ಥೆ ಅವಿಸ್ಮರಣೀಯ.

ಸುಭಾಷ್ ಚಂದ್ರ ಬೋಸ್‌ರ ಜನ್ಮ ಶತಾಬ್ದಿ, ಭಾರತಕ್ಕೆ ಸ್ವಾತಂತ್ರ ಬಂದು 50 ವರ್ಷದ ಪರ್ವಕಾಲ, ಅಲ್ಲದೇ ತೆಭಾಗ ಚಳುವಳಿಯ ಸುವರ್ಣ ಮಹೋತ್ಸವ ಇನ್ನಿತರ ಸಾಧನೆ ಹೋರಾಟದ ಹಿನ್ನೆಲೆಯಲ್ಲಿ ಎಸ್‌ಎಫ್‌ಐನ 9ನೇ ಸಮ್ಮೇಳನವನ್ನು ಈ ಜಿಲ್ಲೆಯಲ್ಲಿ ಸಂಘಟಿಸಲು ಸಾಧ್ಯವಾದುದನ್ನು ಮನಗಾಣಬಹುದು.

ಮಾರ್ಚ್ 21ರ ಮಧ್ಯಾಹ್ನ 1.30ಕ್ಕೆ ಖುದಿರಾಮ ಬೋಸ್‌ರ ಪ್ರತಿಮೆಯ ಬಳಿ ಪಂಜು ಬೆಳಗುವ ಮೂಲಕ ಬೃಹತ್ ಮೆರವಣಿಗೆ ಪ್ರಾರಂಭವಾಗಿ ಜಿಲ್ಲಾ ಕೇಂದ್ರದ ಪ್ರಮುಖ ರಸ್ತೆಗಳಲ್ಲಿ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ರ್ಯಾಲಿ ಸಾಗಿತು. 3 ಗಂಟೆಗೆ ಯು.ಜಿ.ಸಿ. ಬಿಲ್ಡಿಂಗ್ ಮಿಡ್ನಾಪುರ ಕಾಲೇಜು ಮೈದಾನದಲ್ಲಿ ಹುತಾತ್ಮ ಸಂಗಾತಿಗಳಿಗೆ ಗೌರವ ಅರ್ಪಿಸುವುದರೊಂದಿಗೆ ಆಕಾಶದಲ್ಲಿ ಧ್ವಜ ಸುರುಳಿ ಬಿಚ್ಚುತ್ತಾ ಹಾರಾಡುತ್ತಿದ್ದಂತೆ ಪ್ರಾರಂಭೋತ್ಸವದ ಹಾಡು, ಶಾಂತಿಯ ದ್ಯೋತಕವಾಗಿ ಬಿಳಿ ಪಾರಿವಾಳಗಳನ್ನು, ಬಲೂನನ್ನು ಹಾರಿಬಿಡಲಾಯಿತು. 'ಜಾಗರಣಾ' ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಪ್ರಮುಖವಾಗಿ ಮೂರು ವೇದಿಕೆಯಲ್ಲಿ ಮೂಡಿಬಂದಿತು. ಸಾವಿರಾರು ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣರು. ದೇಶದ ಸ್ವಾತಂತ್ರ್ಯ ಇತಿಹಾಸ ಪ್ರತಿಬಿಂಬಿಸುವ, ಭಾವೈಕ್ಯ ಮೂಡಿಸುವ ಈ ಕಾರ್ಯಕ್ರಮವನ್ನು ನೋಡಿದ ನಮ್ಮನ್ನೊಳಗೊಂಡು ಎಲ್ಲರೂ ಆನಂದಿಸುವುದರ ಜೊತೆಗೆ ಮುಂದೆಯೂ ಕೂಡ ನಮ್ಮ ದೇಶದ ಐಕ್ಯತೆ ಚಿರಾಯುವಾಗುವಂತೆ ನೋಡಿಕೊಳ್ಳುವಲ್ಲಿ ಸಮಾಜದ ಮುಖ್ಯ ಪ್ರವಾಹದಲ್ಲಿದ್ದ ಈ ಜಾಗರಣದಿಂದ ಜಾಗೃತಿ ಮೂಡಿದ್ದು ಖಂಡಿತ. ಹೃದಯದ ಪರಿವರ್ತನೆಗೆ ಇಂಥ ಜಾಗರಣ ಅವಶ್ಯಕ. ಈ ಸಮಾರಂಭದಲ್ಲಿ ಪ್ರಗತಿಪರ ಸಂಘಟನೆಗಳ ಮುಖಂಡರೆಲ್ಲರೂ ಭಾಗವಹಿಸಿದ್ದು ಅಪಾರ ಜನಸ್ತೋಮ ಕಾರ್ಯಕ್ರಮ ವೀಕ್ಷಿಸಿತು.

ಡಾ। ಅಶೋಕ್ ಮೈತ್ರರಿಂದ ಉದ್ಘಾಟನಾ ಭಾಷಣ ನೆರವೇರಿತು. ನಂತರದ ಪ್ರತಿನಿಧಿ ಅಧಿವೇಶನದ ಮೊದಲ ಭಾಗವಾಗಿ ಕಾ|| ಬ್ರತಿನ್ ಸೇನ್ ಗುಪ್ತಾ ರಾಷ್ಟ್ರೀಯ, ಅಂತರ್ರಾಷ್ಟ್ರೀಯ ವಿದ್ಯಮಾನಗಳು ಹಾಗೂ ಸಂಘಟನೆ ಸ್ಥಿತಿಗತಿ ಕುರಿತು ವರದಿ ಮಂಡಿಸಿದರು.

ಮಾರ್ಚ್ 22ರಂದು ನಮಗೊಂದು ಅಪೂರ್ವ ಅವಕಾಶ ಅಂದರೆ ಎಲ್ಲ ರಾಜ್ಯದ ಸಂಗಾತಿಗಳು ಚರ್ಚೆಯಲ್ಲಿ ಪಾಲ್ಗೊಂಡು ಶಿಸ್ತುಬದ್ಧರಾಗಿ ವಿಷಯ ನಿರೂಪಿಸುವುದು, ಆಯಾ ರಾಜ್ಯದ ಸ್ಥಿತಿಗತಿಗಳ ಮೇಲ್ನೋಟ, ಸಂಘಟನೆಯನ್ನು ಬಲಗೊಳಿಸಲು ಸಲಹೆಗಳನ್ನು ನೀಡುತ್ತಾ ವಿಮರ್ಶೆ-ಸ್ವವಿಮರ್ಶೆಯೊಂದಿಗೆ ಮಾತನಾಡುತ್ತಿದ್ದರು. ಮಧ್ಯದಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮ, ರಾಷ್ಟ್ರೀಯ ಸಂಗತಿಗಳ ಕುರಿತು, ನಮ್ಮ ಬೇಡಿಕೆ ಕುರಿತು 'ನಿರ್ಣಯ' ಮಂಡಿಸಲಾಯಿತು. ಅಖಿಲ ಭಾರತ ಪ್ರಜಾಸತ್ತಾತ್ಮಕ ಜಾತ್ಯಾತೀತ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳು, ಹಿರಿಯ ಸಂಗಾತಿಗಳ ಸ್ವಾಗತ ಸಮಿತಿ, ವರ್ಕಿಂಗ್ ಕಮಿಟಿ ಮುಖ್ಯಸ್ಥರಾದ ದೀಪಕ್ ಸರ್ಕಾರ್, ಸ್ವಾತಂತ್ರ್ಯ ಹೋರಾಟಗಾರ ಸುಧೀರ್ ಪ್ರಧಾನ್, ಬಾಂಗ್ಲಾ ಮತ್ತು ಬರ್ಮಾ ವಿದ್ಯಾರ್ಥಿ ಮುಖಂಡರು, ಸುಜನ್ ಚಕ್ರವರ್ತಿ ಮುಂತಾದವರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು. ಮಧ್ಯಾಹ್ನದ ವೇಳೆಯಲ್ಲಿ ವಿದ್ಯಾರ್ಥಿನಿಯರಿಂದ ಸಭೆ ಜರುಗಿ ಪ್ರತ್ಯೇಕವಾಗಿ ಚರ್ಚಿಸಿ, ಎಸ್‌ಎಫ್‌ಐನಲ್ಲಿ ವಿದ್ಯಾರ್ಥಿನಿ ಮುಖಂಡರನ್ನು ತಯಾರು ಮಾಡುವುದು ಹಾಗೂ ಸಮಸ್ಯೆ ಕುರಿತಂತೆ ಚರ್ಚಿಸಲಾಯಿತು. ಮರಿಯಂ ಧವಳೆ ಈ ಚರ್ಚೆ ನಡೆಸಿಕೊಟ್ಟರು.

ಫೆ.23ರಂದು ಚರ್ಚೆ ಮುಗಿಯುತ್ತಿದ್ದಂತೆ 'ವಿಶೇಷ ಸಭೆ'ಯಲ್ಲಿ ಅಂದರೆ 'ಸ್ವಾತಂತ್ರ್ಯ ಸುವರ್ಣ ಮಹೋತ್ಸವ' ಸಂದರ್ಭದ ಕುರಿತು ಸೀತಾರಾಂ ಯೆಚೂರಿ, ಲಕ್ಷ್ಮಿ ಸೆಹಗಲ್, ಬಿಮನ್ ಬಸು, ನಿಲೋತ್ಪಲ ಬಸು ಮಾತನಾಡಿದರು. ಇವರೆಲ್ಲರ ಮಾತಿನ ಸಾರಾಂಶವೇನೆಂದರೆ "ದೇಶ ಅವ್ಯವಸ್ಥೆಯಿಂದ ಕೂಡಿದ್ದು, ಇಂದು ನಮ್ಮ ಆಸೆಗಳು ಈಡೇರಿಲ್ಲವಾದ್ದರಿಂದ, ಸಂಘಟನೆ ಮೂಲಕ ಸೃಜನಾತ್ಮಕ ಸಮಾಜ ನಿರ್ಮಿಸಲು ವಿದ್ಯಾರ್ಥಿ ಯುವಜನರು-ದುಡಿಯುವ ಜನರು ಒಂದಾಗಿ ಕೆಲಸ ಮಾಡಬೇಕು. ಸಾಮಾಜಿಕವಾಗಿ ಹಿಂದುಳಿದವರಿಗೆ ಶಿಕ್ಷಣ ನೀಡಿ, ವೈಜ್ಞಾನಿಕ ಶಿಕ್ಷಣಕ್ಕಾಗಿ ಹೋರಾಡಬೇಕು, ನಮ್ಮ ದೇಶದ ರಾಜಕೀಯ ಸ್ಥಿತಿ ಅನುಲಕ್ಷಿಸಿ ಜನವಿರೋಧಿಗಳಿಂದ ದೇಶ ರಕ್ಷಿಸಬೇಕು. ನಾವು ನಮ್ಮ ದೇಶದ ಅವಶ್ಯಕತೆಯನ್ನು ತುಂಬುವವರಾಗಬೇಕು. ನಾವು ಏನನ್ನು, ಯಾವುದನ್ನು ಪ್ರತಿನಿಧಿಸುತ್ತಿದ್ದೇವೆಂಬುದನ್ನು ಅರಿತಿರಬೇಕು. ಇರುವ ಸ್ವಲ್ಪ ಸಮಯದಲ್ಲಿ ದೇಶದ ಹಿಂದಿನ ಕನಸನ್ನು ಭವಿಷ್ಯತ್ತಿನಲ್ಲಿ ಸಾಕಾರಗೊಳಿಸಲು ಇತಿಹಾಸದಿಂದ ಪಾಠ ಕಲಿಯುವುದರ ಜೊತೆಗೆ ಹೋರಾಟಮಯ ಜೀವನವನ್ನು ರೂಪಿಸಿಕೊಳ್ಳಿರಿ" ಎಂದು ಕರೆಯಿತ್ತರು.

ಕೊನೆಯ ದಿನ ಎಸ್‌ಎಫ್‌ಐ ನ ಹೊಸ ಪದಾಧಿಕಾರಿಗಳ ಆಯ್ಕೆಯ ನಂತರ ಕೋರ್ಟ್ ಮೈದಾನದಲ್ಲಿ ಎಸ್‌ಎಫ್‌ಐ ನ ಅಖಿಲ ಭಾರತ ಸಮ್ಮೇಳನದ ಸಮಾರೋಪ ಸಮಾರಂಭ. ಪ.ಬಂಗಾಳದ ಮುಖ್ಯಮಂತ್ರಿ ಕಾಂ|| ಜ್ಯೋತಿಬಸುರವರು ಲಕ್ಷಾಂತರ ಜನತೆಯನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಬಾಂಗ್ಲಾ-ಬರ್ಮಾ ದೇಶದ

ಪುಟ 6ಕ್ಕೆ

# ಸಮರ್ಪಿತ ಹೋರಾಟಗಾರ, ಪ್ರಭಾವಿ ಭಾಷಣಕಾರ.....

ಮಾರ್ಚ್ 19, 1997 ಸಂಸತ್ತಿನ ಸೆಂಟ್ರಲ್ ಹಾಲ್. ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ, ಸ್ಪೀಕರ್, ಪ್ರತಿಪಕ್ಷ ಮುಖಂಡರು, ಸಂಸತ್ ಸದಸ್ಯರು, ಕೇಂದ್ರ ಮಂತ್ರಿಗಳು ಮೊದಲಾದವರು ಪಾಲ್ಗೊಂಡ ಸಮಾರಂಭ.

1996ನೇ ಸಾಲಿನ 'ಶ್ರೇಷ್ಠ ಸಂಸದೀಯ ಪಟು' ಪ್ರಶಸ್ತಿಯನ್ನು ಪ್ರಧಾನ ಮಾಡಲು ಈ ಸಮಾರಂಭ.

ರಾಷ್ಟ್ರಪತಿ ಡಾ|| ಶಂಕರ್ ದಯಾಳ ಶರ್ಮರಿಂದ ಈ ಪ್ರಶಸ್ತಿಯನ್ನು ಸ್ವೀಕರಿಸಿದವರು.........

ಭಾರತದ ದುಡಿಯುವ ಜನರ ಪಕ್ಷವಾದ ಸಿಪಿಐ(ಎಂ)ನ ಧುರೀಣ ಸೋಮನಾಥ ಚಟರ್ಜಿ.

ಸತತ 25 ವರ್ಷಗಳಿಂದ ಸಂಸತ್ ಸದಸ್ಯರಾಗಿ ಈಗ ಲೋಕಸಭೆಯಲ್ಲಿ ಸಿಪಿಐ(ಎಂ)ನ ಮುಖಂಡರಾಗಿರುವ ಕಾಂ|| ಸೋಮನಾಥ ಚಟರ್ಜಿ ಬಗ್ಗೆ ಸಮಾರಂಭದಲ್ಲಿ ಕೇಳಿಬಂದ ಮಾತುಗಳು....

**ರಾಷ್ಟ್ರಪತಿ ಡಾ|| ಶರ್ಮ:** ಬದ್ಧತೆ, ಸಮರ್ಪಣೆ ಹಾಗೂ ಪ್ರಾಮಾಣಿಕತೆಯಿಂದ ಚಟರ್ಜಿ ಜನರನ್ನು ಪ್ರತಿನಿಧಿಸಿ ದ್ದಾರೆ. ಯಾವುದೇ ಪ್ರಾದೇಶಿಕ, ವಿಭಾಗೀಯ ಅಥವಾ ಗುಂಪು ಹಿತಾಸಕ್ತಿಗಳನ್ನು ಮೀರಿದ ರಾಷ್ಟ್ರೀಯ ದೃಷ್ಟಿಕೋನ ಅವರದ್ದಾಗಿದೆ....

**ಉಪರಾಷ್ಟ್ರಪತಿ ಕೆ.ಆರ್. ನಾರಾಯಣನ್:** ಕಾನೂನು ಮತ್ತು ನ್ಯಾಯಶಾಸ್ತ್ರ ನಾಗರೀಕ ಹಕ್ಕುಗಳ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳು, ಟ್ರೇಡ್ ಯೂನಿಯನ್ ಆಂದೋಲನ, ಸಮಾಜ ಕಲ್ಯಾಣ ಹಾಗೂ ಸಮಾಜ ಸೇವೆ, ಶೈಕ್ಷಣಿಕ ಚಟುವಟಿಕೆಗಳು, ಬಡವರು ಹಾಗೂ ಶೋಷಿತ ಜನ ಸಮುದಾಯದವರ ಕಲ್ಯಾಣ ಹೀಗೆ ವಿವಿಧ ಕ್ಷೇತ್ರಗಳಲ್ಲಿನ ವ್ಯಾಪಕ ಅನುಭವದೊಂದಿಗೆ ಚಟರ್ಜಿ ಗಾಢ ಪ್ರಭಾವ ಬೀರಿದ್ದಾರೆ.

**ಪ್ರಧಾನಿ ಎಚ್.ಡಿ.ದೇವೇಗೌಡ:** ಚಟರ್ಜಿ ಒಬ್ಬ ಸಕ್ರಿಯ ಸಂಸತ್ ಸದಸ್ಯ. ಒಬ್ಬ ಪ್ರಭಾವಶಾಲಿ ಭಾಷಣಕಾರ, ಯಾವಾಗಲೂ ರಾಷ್ಟ್ರಹಿತವನ್ನು ದೃಷ್ಟಿಯಲ್ಲಿಟ್ಟುಕೊಳ್ಳುವ ಮುತ್ಸದ್ಧಿ.

**ಲೋಕಸಭಾ ಸ್ಪೀಕರ್ ಪಿ.ಎ.ಸಂಗ್ಮಾ:** ಸೋಮನಾಥ ಚಟರ್ಜಿ ಒಬ್ಬ ಮಹಾನ್ ವ್ಯಕ್ತಿ. ಅವರು ನನ್ನ ರಾಜಕೀಯ ಗುರು. ಹಲವು ಪಾರ್ಲಿಮೆಂಟರಿ ಸಮಿತಿಗಳ ಅಧ್ಯಕ್ಷ ಹಾಗೂ ಸದಸ್ಯರಾಗಿ ಗಳಿಸಿದ ಅಪಾರ ಅನುಭವದ ಹಿನ್ನೆಲೆಯಲ್ಲಿ ತಮ್ಮ ಸಂಸದೀಯ ಜೀವನದಾದ್ಯಂತ ಸೋಮನಾಥ ಚಟರ್ಜಿ ಬಹಳ ಬೇಡಿಕೆಯಲ್ಲಿರುವ ವ್ಯಕ್ತಿ.

ಅಂತರ್ ಸಂಸದೀಯ ಸಂಘದ(ಐಪಿಯು) ಸಮ್ಮೇಳನಗಳಲ್ಲಿ ಚಟರ್ಜಿಯವರ ನಿರ್ವಹಣೆ ಅಂತರ್ರಾಷ್ಟ್ರೀಯ ಪ್ರೇಕ್ಷಕರ ಮೇಲೆ ಪರಿಣಾಮಕಾರಿ ಪ್ರಭಾವ ಬೀರುತ್ತಿದೆ.

ಸದನದ ಕಲಾಪಗಳನ್ನು ನಡೆಸುವುದು, ನಿಯಮಾವಳಿಗಳ ಅನುಸರಣೆ, ಸದನದ ಘನತೆ ಮತ್ತು ವ್ಯಕ್ತಿಗತವಾಗಿ ಸಂಸತ್ ಸದಸ್ಯರ ಘನತೆಯನ್ನು ಕಾಪಾಡುವುದು ಮೊದಲಾದ ವಿಚಾರ ಗಳಲ್ಲಿ ಸೋಮನಾಥ ಚಟರ್ಜಿಯವರು ಮಾದರಿ ಪುಸ್ತಕ ಇದ್ದಂತೆ.

- ವಿಶ್ವ

# ಆಲಮಟ್ಟಿ ಆಣೆಕಟ್ಟು ವಿವಾದ: ತಜ್ಞರ ಸಮಿತಿ ಏನು ಹೇಳಿದೆ?

ಸಂಯುಕ್ತ ರಂಗ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ವಿವಿಧ ರಾಜ್ಯಗಳ ನಡುವಿನ ನದಿ ನೀರಿನ ವಿವಾದಗಳನ್ನು ಪರಿಹರಿಸುವ ಪ್ರಯತ್ನದ ಭಾಗವಾಗಿ ಆಲಮಟ್ಟಿ ಆಣೆಕಟ್ಟಿನ ವಿವಾದವನ್ನು ಪರಿಹರಿಸಲು ಅಸ್ಸಾಂ, ಬಿಹಾರ್, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳು ಒಂದು ತಜ್ಞರ ಸಮಿತಿಯನ್ನು ನೇಮಿಸಿದರು. ಅಸ್ಸಾಂ ಸರಕಾರದ ನೀರಾವರಿ ಕಾರ್ಯದರ್ಶಿ ಹಾಗೂ ಮುಖ್ಯ ಇಂಜಿನಿಯರ್ ಪಿ.ಸಿಯೋಗ್, ಬಿಹಾರ ಸರಕಾರದ ಜಲ ಶಾಸ್ತ್ರ ಸೆಲ್‌ನ ನಿರ್ದೇಶಕ ಗಗನ್ ಪ್ರಸಾದ್, ಬಿಹಾರದ ನಿವೃತ್ತ ಚೀಫ್ ಇಂಜಿನಿಯರ್ ಎಸ್.ಸಿ.ಸಿನ್ಹಾ, ತಮಿಳುನಾಡು ಸರಕಾರದ ತಾಂತ್ರಿಕ ಸಲಹೆಗಾರ ಪಿ.ಬಾಲಕೃಷ್ಣ, ಪಶ್ಚಿಮ ಬಂಗಾಳ ಸರಕಾರದ ನೀರಾವರಿ ಮತ್ತು ನೀರು ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಎಸ್.ಕೆ.ರಾಯ್ ಹಾಗೂ ಕಾರ್ಯದರ್ಶಿ ಡಿ.ಪಿ.ಘೋಷಾಲ್ ಈ ಆರು ಮಂದಿ ತಜ್ಞರ ತಂಡ ಸಂಬಂಧಪಟ್ಟ ಸ್ಥಳಗಳ ನಿರೀಕ್ಷಣೆ ಮತ್ತು ಅಧ್ಯಯನ ನಡೆಸಿದ ನಂತರ ತನ್ನ ವರದಿಯನ್ನು ಸಲ್ಲಿಸಿದೆ. ಇದನ್ನು ತಿರಸ್ಕರಿಸಿ ಈಗ ಕರ್ನಾಟಕ ವಿಧಾನಸಭೆ ಒಂದು ನಿರ್ಣಯವನ್ನು ಅಂಗೀಕರಿಸಿದ್ದರೆ, ಕರ್ನಾಟಕದ ನಿಲುವಿನ ವಿರುದ್ಧ ಆಂಧ್ರಪ್ರದೇಶ ಸುಪ್ರೀಂಕೋರ್ಟ್‌ಗೆ ಮೊರೆಯಿಟ್ಟಿದೆ. ಕರ್ನಾಟಕ ಕೂಡಾ ಆಂಧ್ರಪ್ರದೇಶದ ಕೆಲವು ಕಾಮಗಾರಿಗಳ ವಿರುದ್ಧ ಸುಪ್ರೀಂಕೋರ್ಟ್‌ಗೆ ಹೋಗಿದೆ. ಈ ನಡುವೆ ಪ್ರಧಾನಮಂತ್ರಿಗಳು ಎರಡೂ ರಾಜ್ಯಗಳ ಮುಖಂಡರು ಪರಸ್ಪರ ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಬರಬೇಕು ಎಂದು ಸಲಹೆ ಮಾಡಿದ್ದಾರೆ.

ಈ ತಜ್ಞರ ಸಮಿತಿ ಪರಿಶೀಲಿಸಿದ ಪ್ರಶ್ನೆ ಯಾವುದು? ಪ್ರಮುಖ ಪ್ರಶ್ನೆಯೆಂದರೆ ಕರ್ನಾಟಕ ಸರಕಾರ ಕೃಷ್ಣಾ ನದಿಗೆ ಕಟ್ಟುತ್ತಿರುವ ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು 512.2 ಮೀಟರುಗಳಿಂದ 524.256 ಮೀಟರುಗಳಿಗೆ ಹೆಚ್ಚಿಸುತ್ತಿರುವುದರಿಂದ ತನ್ನ ನೀರಾವರಿ ಹಾಗೂ ವಿದ್ಯುತ್ ಅವಶ್ಯಕತೆಗಳಿಗೆ ಅಡ್ಡಿ ಬರುತ್ತದೆ, ಇದು ಬಚಾವತ್ ತೀರ್ಪಿನ ವ್ಯಾಪ್ತಿಯೊಳಗಿಲ್ಲ ಎಂದು ಆಂಧ್ರಪ್ರದೇಶ ಸರಕಾರದ ದೂರು. ಇದಕ್ಕೆ ಕರ್ನಾಟಕದ ಪ್ರತಿ ದೂರೆಂದರೆ ಆಂಧ್ರಪ್ರದೇಶ ಶ್ರೀಶೈಲಂ ಎಡದಂಡೆ ಕಾಲುವೆ, ತೆಲುಗು ಗಂಗಾ ಕಾಲುವೆ, ಶ್ರೀಶೈಲಂ ಬಲದಂಡೆ ಕಾಲುವೆ ಇತ್ಯಾದಿ ದೊಡ್ಡ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಇದು ಮೇ 31, 2000ದ ನಂತರ ಬಚಾವತ್ ತೀರ್ಪಿನ ಪುನರ್ವಿಮರ್ಶೆಯಾಗುವಾಗ ಕೃಷ್ಣಾ ಹೆಚ್ಚುವರಿ ನೀರಿನಲ್ಲಿ ಕರ್ನಾಟಕದ ಪಾಲನ್ನು ತಟ್ಟಬಹುದು ಎಂದು. ಅಲ್ಲದೆ ಜಲನ್ಯಾಯ ಮಂಡಳಿ ರಾಜ್ಯಕ್ಕೆ ನೀಡಿರುವ 700 ಟಿಎಂಸಿ ನೀರು ಹಾಗೂ ಸ್ಕೀಮ್ 'ಬಿ'ಯಲ್ಲಿ ನೀಡಿರುವ ಹೆಚ್ಚುವರಿ 165 ಟಿಎಂಸಿ ನೀರನ್ನು ಸಂಗ್ರಹಿಸಲು ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು 524.256 ಮೀಟರ್‌ಗೆ ಹೆಚ್ಚಿಸಬೇಕಾಗುತ್ತದೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಹಲವು ಕಾಲುವೆಗಳನ್ನು ಈ ರೀತಿ ಭವಿಷ್ಯದ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಸಾಮರ್ಥ್ಯದೊಂದಿಗೆ ಕಟ್ಟಲಾಗಿದೆ ಎಂಬುದು ಕರ್ನಾಟಕದ ವಾದ.

ಈ ಬಗ್ಗೆ ಎರಡೂ ರಾಜ್ಯಗಳ ಅಧಿಕಾರಿಗಳೊಂದಿಗೆ ಸಮಾಲೋಚನೆ ಹಾಗೂ ಅಧ್ಯಯನದ ನಂತರ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನೆರವು ಪಡೆದು ತಮ್ಮ ವರದಿಯನ್ನು ರೂಪಿಸಿ ಮಂಡಿಸಿರುವುದಾಗಿ ಹೇಳಿರುವ ಈ ಆರು ಜನ ತಜ್ಞರ ತಂಡದ ಅಭಿಪ್ರಾಯ ಹೀಗಿದೆ:

*"ದೇಶದ ಒಟ್ಟು ಹಿತಾಸಕ್ತಿಗಳನ್ನು ಗಮನಿಸಿ ಅತ್ಯಂತ ಜಾಗರೂಕತೆಯಿಂದ ಮುಂದುವರೆಯುವುದು, ಸದ್ಯದ ಪರಿಸ್ಥಿತಿಗಳಿಗೆ ಅಗತ್ಯವಾದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಲಮಟ್ಟಿ ಆಣೆಕಟ್ಟಿನ ಸಂಗ್ರಹ ಸಾಮರ್ಥ್ಯವನ್ನು ರಚಿಸುವ ಮೊದಲು ವಿವಿಧ ಕೃಷ್ಣಾ ವ್ಯವಸ್ಥೆಗಳ ಕಾರ್ಯ ನಿರ್ವಹಣೆಗಳನ್ನು ಕಾದು ನೋಡುವುದು ಅಪೇಕ್ಷಣೀಯ.*

*.... ಈಗಿನ 173 ಟಿಎಂಸಿ ವಾರ್ಷಿಕ ಹರಿವನ್ನು ನಿಭಾಯಿಸಲು 519.6 ಮೀಟರ್ ಎತ್ತರ ಸಾಕಷ್ಟಾಗುತ್ತದೆ.*

*ಈ ಮೇಲಿನ ಸೂಚನೆ ಆಲಮಟ್ಟಿ ಆಣೆಕಟ್ಟಿನ ಸಮಸ್ಯೆಯನ್ನು ಪರಿಹರಿಸಲು ಕೈಗೊಳ್ಳಬೇಕಾದ ಮೊದಲ ಕ್ರಮ ಎಂದು ಸಮಿತಿ ಭಾವಿಸುತ್ತದೆ. ಆಂಧ್ರಪ್ರದೇಶ ಕೈಗೆತ್ತಿಕೊಂಡಿರುವ ಹೊಸ ಕಾಮಗಾರಿಗಳ ಬಗ್ಗೆ ಕರ್ನಾಟಕ ಎತ್ತಿದ ಪ್ರಶ್ನೆಗಳು ಮುಂತಾದ ಪ್ರಶ್ನೆಗಳೂ ಇವೆ. ಅಲ್ಲದೆ ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಂದ ಇನ್ನಷ್ಟು ಪ್ರಶ್ನೆಗಳೂ ಬರಬಹುದು. ಇವನ್ನೆಲ್ಲಾ ಪರಿಹರಿಸಲು ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಲ್ಲಿನ ಇಡೀ ಕೃಷ್ಣಾ ಕಣಿವೆ ಪ್ರದೇಶವನ್ನು ಒಂದೇ ನಿಯಂತ್ರಣ ಮಂಡಳಿಯಡಿಯಲ್ಲಿ ತರಬೇಕು, ಈ ಮಂಡಳಿಗೆ ವಿವಿಧ ಪ್ರಶ್ನೆಗಳನ್ನು ಪರಿಹರಿಸಲು ಸಾಕಷ್ಟು ಅಧಿಕಾರಗಳು ಇರಬೇಕು ಎಂದು ಸೂಚಿಸಬಯಸುತ್ತೇವೆ. ಇಂತಹ ನಿಯಂತ್ರಣ ಮಂಡಳಿ ನಮ್ಮ ದೇಶದಲ್ಲಿ ಹೊಸದೇನೂ ಅಲ್ಲ. ದಾಮೋದರ ಕಣಿವೆ, ತುಂಗಭದ್ರಾ ಇತ್ಯಾದಿಗಳಲ್ಲಿ ರಚಿಸಿದ ಮಂಡಳಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ, ಒಟ್ಟಾರೆ ದೇಶದ ಹಿತಾಸಕ್ತಿಗಳನ್ನು ಈಡೇರಿಸಿವೆ ಎಂಬುದು ನಮಗೆ ಗೊತ್ತಿದೆ. ಗಂಗಾ ನೀರಿನ ಪ್ರಶ್ನೆಯಂತಹ ಅಂತರ್‌ರಾಷ್ಟ್ರೀಯ ಪ್ರಶ್ನೆಗಳಲ್ಲೂ ಜಂಟಿ ಮಾಪನ, ಉಸ್ತುವಾರಿಗಳಿಂದ ಸಮಸ್ಯೆ ಪರಿಹರಿಸುವ ಪ್ರಯತ್ನಗಳು ನಡೆದಿವೆ. ಕೃಷ್ಣ ಕಣಿವೆಯಲ್ಲೂ ಇಂತಹ ಒಂದು ಹೆಜ್ಜೆ ಎಲ್ಲಾ ಸಂಬಂಧಪಟ್ಟ ರಾಜ್ಯಗಳ ಹಿತಾಸಕ್ತಿಗಳನ್ನು ಕಾಪಾಡಿ ಒಂದು ರಾಜ್ಯದ ವಿರುದ್ಧ ಇನ್ನೊಂದು ರಾಜ್ಯದ ಭಯಗಳನ್ನು ದೂರೀಕರಿಸಿ ಎಲ್ಲಾ ಪ್ರಶ್ನೆಗಳ ಸೌಹಾರ್ದಯುತ ಇತ್ಯರ್ಥ ಸಾಧ್ಯವಾಗುತ್ತದೆ.*

ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು ಈಗ 512.2 ಮೀಟರುಗಳಿಂದ 519.6 ಮೀಟರುಗಳವರೆಗೆ ಎತ್ತರಿಸಬಹುದು, ಆದರೆ 524.256 ಮೀಟರುಗಳವರೆಗೆ ಈಗ ಎತ್ತರಿಸುವ ಅಗತ್ಯವಿಲ್ಲ ಎಂದಿರುವ ತಜ್ಞರ ತಂಡ ಇದು ಈ ಕುರಿತು ವಿವಾದವನ್ನು ಪರಿಹರಿಸಲು ಮೊದಲ ಕ್ರಮ ಎಂದು ಹೇಳಿದೆಯಷ್ಟೇ ಅಲ್ಲ, ಆಂಧ್ರಪ್ರದೇಶ ಶ್ರೀಶೈಲಂ ಬಲದಂಡೆ ಹಾಗೂ ಎಡದಂಡೆ ಕಾಲುವೆಗಳು ಹಾಗೂ ತೆಲುಗು ಗಂಗಾದ ಯೋಜನೆಗಳಲ್ಲಿ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವಾಗ ಯಾವುದೇ ವಿಧಾಯಕ ಹಕ್ಕುಗಳನ್ನು ಮುಂದಿಟ್ಟಿಲ್ಲ ಎಂದು ಒತ್ತಿ ಹೇಳಿದೆ. ಮೇ 31, 2000ದ ನಂತರ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳು ಹೆಚ್ಚುವರಿ ಕೃಷ್ಣಾ ನದಿ ನೀರಿನ ಬಳಕೆಯ ಬಗ್ಗೆ ಚರ್ಚೆ ಆರಂಭಿಸುವಾಗ ಆಂಧ್ರಪ್ರದೇಶ ಈ ರೀತಿ ಹೆಚ್ಚುವರಿ ನೀರನ್ನು ಬಳಸಿಕೊಂಡ ಪ್ರಶ್ನೆ ಬರಬಹುದು ಎಂದೂ ಅದು ಗಮನಿಸಿದೆ.

## ಕರ್ನಾಟಕದಲ್ಲಿ ಕಳೆದ ವಾರ

**ಮಾರ್ಚ್ 21**

- ಮಾರ್ಚ್ 20ರಂದು ಆರಂಭವಾದ ಕೆಪಿಸಿ ಇಂಜಿನಿಯರುಗಳ ಮುಷ್ಕರ ಹಿಂದಕ್ಕೆ
- ಆಲಮಟ್ಟಿ ಆಣೆಕಟ್ಟಿನ ಕಾಮಗಾರಿಗಳನ್ನು ಯಾವುದೇ ಕಾರಣಕ್ಕೆ ನಿಲ್ಲಿಸದಿರಲು ಕರ್ನಾಟಕ ವಿಧಾನಸಭೆಯ ನಿರ್ಣಯ.

**ಮಾರ್ಚ್ 22**

- ಆಂಧ್ರದ 5 ಯೋಜನೆಗಳಿಗೆ ತಡೆ ಕೋರಿ ಸುಪ್ರೀಂ ಕೋರ್ಟಿನಲ್ಲಿ ಕರ್ನಾಟಕದ ಅರ್ಜಿ.
- "ಧರ್ಮಕಾರಣ"ದ ಲೇಖಕರು ಕ್ಷಮೆ ಕೇಳಬೇಕು ಇಲ್ಲವೇ 'ದಂಡೋಪಾಯದ ಕ್ರಮವನ್ನು ಎದುರಿಸಬೇಕು' ಎಂದು ಮಾಜಿ ಸಚಿವ ವಿಶ್ವನಾಥ ರೆಡ್ಡಿ ಮುದ್ನಾಳ್ 'ಎಚ್ಚರಿಕೆ'.

**ಮಾರ್ಚ್ 23**

- ಪರಸ್ಪರ ಚರ್ಚೆಗಳ ಮೂಲಕವೇ ಆಲಮಟ್ಟಿ ಕುರಿತಾದ ವಿವಾದವನ್ನು ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಪ್ರಧಾನಿ ಸಲಹೆ.
- ಕಾಲೇಜು ಶಿಕ್ಷಕರ ಪರೀಕ್ಷಾ ಬಹಿಷ್ಕಾರ ತಮ್ಮ ಬೇಡಿಕೆಗಳ ಬಗ್ಗೆ ಸರಕಾರ ಖಚಿತ ಭರವಸೆಯೊಂದಿಗೆ ಮಾತುಕತೆಗೆ ಆಹ್ವಾನಿಸುವವರೆಗೆ ನಿಲ್ಲದು ಎಂದು ಅಧ್ಯಾಪಕರ ಸಂಘಟನೆ ನಿರ್ಧಾರ.

**ಮಾರ್ಚ್ 24**

- ಹೋಳಿ ಸಂದರ್ಭದಲ್ಲಿ ಬೆಳಗಾವಿಯಲ್ಲಿ ಗುಂಪು ಘರ್ಷಣೆ. ಬೆಂಗಳೂರು ಜಿಲ್ಲಾ ಕೇಂದ್ರ ಸರಕಾರ ಬ್ಯಾಂಕ್‌ನಲ್ಲಿನ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಕುರಿತು ಸಿಬಿಐ ತನಿಖೆಗೆ ಸರಕಾರದ ನಿರ್ಧಾರ.
- 'ಫ್ರಾಂಕ್ ಕಿರಿಯರ ವಿಶ್ವಕೋಶ'ದಲ್ಲಿನ ತಪ್ಪುಗಳು, ಲೋಪಗಳನ್ನು ಕುರಿತಂತೆ ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿಯವರ ಪ್ರಸ್ತಾಪ - ಈ ವಿಶ್ವ ಕೋಶವನ್ನು ಹಿಂದಕ್ಕೆ ತೆಗೆದುಕೊಂಡಿರುವುದಾಗಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಸಚಿವರ ಪ್ರಕಟಣೆ.

**ಮಾರ್ಚ್ 25**

- ಕೆಇಬಿ ಸಿಬ್ಬಂದಿಗೆ ಉಚಿತ ವಿದ್ಯುತ್ತಿನಿಂದ ವರ್ಷಕ್ಕೆ 3 ಕೋಟಿ ರೂ. ನಷ್ಟವಾಗುತ್ತಿದೆಯೆಂದು ಇಂಧನ ಖಾತೆ ಸಚಿವರು.
- ರಂಗ ಸರಕಾರಕ್ಕೆ ಬೆಂಬಲ ವಾಪಸು ಪಡೆಯಬೇಕು ಎಂದು ಮತ್ತೊಮ್ಮೆ ರಾಜ್ಯ ಕಾಂಗ್ರೆಸ್ ಮುಖಂಡರು - ದೆಹಲಿಗೆ ಕಾಂಗ್ರೆಸ್ ನಿಯೋಗ ಕಳಿಸಲು ನಿರ್ಧಾರ.

**ಮಾರ್ಚ್ 26**

- ರಾಜ್ಯದ 1634 ಕೇಂದ್ರಗಳಲ್ಲಿ 659395 ವಿದ್ಯಾರ್ಥಿಗಳು ಕುಳಿತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ. ಇವರಲ್ಲಿ ಬಾಲಕಿಯರ ಸಂಖ್ಯೆ 2.54 ಲಕ್ಷ
- 'ಧರ್ಮ ಕಾರಣ' ಕಾದಂಬರಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರಕಾರ ತೀರ್ಮಾನಿಸಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು.

**ಮಾರ್ಚ್ 27**

- ಖಾಸಗಿ ನರ್ಸಿಂಗ್ ಹೋಮ್‌ಗಳ ನಿಯಂತ್ರಣಕ್ಕೆ ಹೊಸದಾಗಿ ಕಾಯ್ದೆ ತರುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪ್ರಕಟಣೆ.

# ಆಟೋರಿಕ್ಷಾ ಚಾಲಕರ ರ್‍ಯಾಲಿಗೆ ಜಿಲ್ಲಾ ಆಡಳಿತದಿಂದ ತಡೆ

ಮಂಗಳೂರು: ಮಾರ್ಚ್ 11 ರಂದು ಕೆಂಬಾವುಟವನ್ನು ಹೊತ್ತ ರಿಕ್ಷಾಗಳು ಬೃಹತ್ ರ್‍ಯಾಲಿಗಾಗಿ ತಯಾರಾಗಿ ನಿಂತಿದ್ದವು. 96 ಆಟೋರಿಕ್ಷಾಗಳನ್ನು ಫ್ಲಾನ್‌ಮೀಟರ್ ಹಾಕಲಿಲ್ಲ ಎಂಬ ಕಾರಣವನ್ನು ನೀಡಿ 4 ದಿನಗಳ ಕಾಲ ಅಕ್ರಮ ಬಂಧನ ಮಾಡಿ ನಂತರ ನ್ಯಾಯಾಲಯದಲ್ಲಿ 500% ರೂಪಾಯಿ ದಂಡ ವಸೂಲ್ ಮಾಡಿರುವುದನ್ನು ವಿರೋಧಿಸಿ ಫ್ಲಾಗ್ ಮೀಟರ್ ಅಳವಡಿಸಲು ಆರ್ಥಿಕ ಸಾಲ ನೀಡುವ ಭರವಸೆಯನ್ನು ಜಾರಿಗೊಳಿಸಬೇಕು, ಫ್ಲಾಗ್ ಮೀಟರ್ ಅಳವಡಿಸಲು ಇನ್ನಷ್ಟು ಕಾಲವಕಾಶ ನೀಡಬೇಕು, ಫ್ಲಾಗ್ ಮೀಟರ್ ಮಂಗಳೂರಿನ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಾಗಬೇಕು, ರಿಪೇರಿ ವ್ಯವಸ್ಥೆ ಲಭ್ಯವಿರಬೇಕು. ಸರಿಯಾದ ದರ ನಿಗದಿ ಪಡಿಸಬೇಕೆಂದು ಒತ್ತಾಯಿಸಿ ಪ್ರತಿಭಟನಾ ರ್‍ಯಾಲಿಗೆ ದ.ಕ.ಜಿಲ್ಲಾ ಆಟೋರಿಕ್ಷಾ ಚಾಲಕರಸಂಘ(ಸಿಐಟಿಯು)ಕರೆನೀಡಿತ್ತು.

ಆದರೆ ಪೂರ್ವಗ್ರಹ ಪೀಡಿತರಾಗಿರುವ ಜಿಲ್ಲಾಡಳಿತ ಸಿಐಟಿಯುವಿನ ಜನಾಭಿಪ್ರಾಯ ಮೂಡಿಸುವ ಆಂದೋಲನ ತನ್ನ ಸರ್ವಾಧಿಕಾರಕ್ಕೆ ತೊಂದರೆ ಎಂಬ ಕಾರಣಕ್ಕಾಗಿ ಆಟೋರಿಕ್ಷಾ ಚಾಲಕರನ್ನು ಗದರಿಸಿ ಚೆಲ್ಲಾಪಿಲ್ಲಿ ಮಾಡಿದರು. ಮೆರವಣಿಗೆಗೆ ಪರ್ಮಿಷನ್ ಪಡೆದಿಲ್ಲ, ರ್‍ಯಾಲಿ ಮಾಡಲು ಬಿಡುವುದಿಲ್ಲವೆಂದು ಪೋಲೀಸರು ತಮ್ಮ ಅಧಿಕಾರ ಚಲಾವಣೆ ಮಾಡಲು ಪ್ರಾರಂಭಿಸಿದರು. ಸಂಘದ ಮುಖಂಡರು ಪೋಲೀಸ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದಾಗ ಅರ್ಜಿ ಬರೆದು ಕೊಡಿ, ನಿಮಗೆ ರ್‍ಯಾಲಿ ಮಾಡಲು ಅವಕಾಶ ಕೊಡುತ್ತೇವೆ ಎಂದರು. ಮುಖಂಡರು ಅರ್ಜಿ ಬರೆದುಕೊಟ್ಟು ರ್‍ಯಾಲಿಗೆ ತಯಾರಿ ನಡೆಸಲು ಪ್ರಾರಂಭ ಮಾಡಿದಾಗ ಡಿವೈಎಸ್‌ಪಿ ಪುನಃ ಮಧ್ಯ ಪ್ರವೇಶ ಮಾಡಿ ರ್‍ಯಾಲಿ ಮಾಡಲು 'ಬಿಡುವುದಿಲ್ಲ, ನಡೆದುಕೊಂಡು ಹೋಗಿ ಮನವಿ ನೀಡಿರಿ ಎಂದರು. ಪುನಃ ನಡೆದುಕೊಂಡು ಹೋಗಿ ಮನವಿ ನೀಡಲು ಹೊರಟಾಗ ಇಲ್ಲ ನೀವು ಮಾರ್ಗಕ್ಕೆ ಇಳಿಯಲೇ ಬಾರದು, ಜಿಲ್ಲಾಧಿಕಾರಿ, ಜಿಲ್ಲಾ ಪೋಲೀಸ್ ಅಧಿಕಾರಿಗಳು ನಿಮಗೆ ಮೆರವಣಿಗೆ ನಡೆಸಲು ಅವಕಾಶ ಕೊಡಬಾರದು, ನಿಮ್ಮ ಮನವಿಯನ್ನು ಸ್ವೀಕರಿಸಲು ಅವರು ನಿರಾಕರಿಸುತ್ತಾರೆ. ನೀವು ಮೆರವಣಿಗೆ ತೆಗೆದದ್ದೇ ಆದರೆ ಕಾನೂನುಕ್ರಮ ಜಾರಿಗೊಳಿಸಬೇಕಾಗುತ್ತದೆ ಎಂದು ಹೇಳುತ್ತಾ ಆಟೋರಿಕ್ಷಾ ರ್‍ಯಾಲಿಯನ್ನು ಪೋಲೀಸರಪಡೆಯನ್ನುಉಪಯೋಗಿಸಿತಡೆದರು.

ಪೋಲೀಸರ ಮತ್ತುಜಿಲ್ಲಾಡಳಿತದಸಂವಿಧಾನ ವಿರೋಧಿ ಧೋರಣೆಯನ್ನು ವಿರೋಧಿಸಿನೆಹರೂಮೈದಾನದಲ್ಲಿಸೇರಿರುವಆಟೋ ಚಾಲಕರ ಸಭೆಯನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಬಿ.ಮಾಧವರವರು ಮಾತನಾಡುತ್ತಾ ಕಾನೂನನ್ನು ಬಡ ಚಾಲಕರ ಮೇಲೆ ಚಲಾಯಿಸುವ ಬದಲು ಪೋಲೀಸರು ಕಳ್ಳರ ಮೇಲೆ ದರೋಡೆಕೋರರ ಮೇಲೆ ಮಾಡಲಿ, ಕೋಟಿ ಕೋಟಿ ಹಣವನ್ನು ತಿಂದು ಭ್ರಷ್ಟಾಚಾರ ನಡೆಸುವವರ ಮೇಲೆ ಪ್ರಯೋಗಿಸಲಿ, ಬಡವರ ಮೇಲೆ ದಬ್ಬಾಳಿಕೆ ಮಾಡಿ ಅವರ ಸಂವಿಧಾನ ಬದ್ಧ ಹಕ್ಕುಗಳನ್ನು ಮೊಟಕುಗೊಳಿಸುವ ದೌರ್ಜನ್ಯವನ್ನು ವಿರೋಧಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಮುಂದಿನ ದಿನದಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದೆ ಎನ್ನುತ್ತಾ ಅವರು ಜಿಲ್ಲಾಡಳಿತದ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಪ್ರತಿಭಟನಾಸಭೆಯನ್ನುದ್ದೇಶಿಸಿ ಆಟೋ ಚಾಲಕರ ಮುಖಂಡರಾದ ಪ್ರಕಾಶ್, ಇರ್ಫನ್, ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಯಾದವಶೆಟ್ಟಿ, ಸಿಪಿಐ (ಎಂ) ಮಂಗಳೂರು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಸಹಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡಿದರು.

ಪ್ರತಿಭಟನಾ ರ್‍ಯಾಲಿಯ ನೇತೃತ್ವವನ್ನು ಸಂಘದ ಮುಖಂಡರುಗಳಾದ ಸತೀಶ್ ಕುಮಾರ್, ಸುಧನ್ ಕುಮಾರ್, ಉಮಾ, ಸಿರೀಲ್ ಡಿಸೋಜಾ,ದೀಪಕ್, ಕಾಮತ್, ಸಿ.ನಾರಾಯಣ, ಶೇಖರ್‌ಅಂಜನ್ ರವರುಗಳು ವಹಿಸಿದ್ದರು.

ಜಯಂತಿ ನಾಯಕ್ ಸ್ವಾಗತಿಸಿದರು, ಜಗದೀಶ್ ಸುವರ್ಣ ವಂದಿಸಿದರು.

ವರದಿ: ವಸಂತ ಆಚಾರಿ

# ಹರಿಹರದಲ್ಲಿ ಕಾಲರಾ: ಮುಂಜಾಗ್ರತೆಗೆ ಒತ್ತಾಯಿಸಿ ಸಿಐಟಿಯು ಮೆರವಣಿಗೆ

ತೀವ್ರವಾಗಿ ಹಬ್ಬುತ್ತಿರುವ ಕಾಲರಾ ವ್ಯಾದಿಯನ್ನು ತಡೆಗಟ್ಟಲು ಮುಂಜಾಗ್ರತೆ ಕ್ರಮ ಕೈಗೊಳ್ಳಲು ಒತ್ತಾಯಿಸಿ ಮೈಸೂರು ಕಿರ್ಲೋಸ್ಕರ್ ಎಂಪ್ಲಾಯಿಸ್ ಅಸೋಸಿಯೇಷನ್‌ರವರು ಮಾರ್ಚ್ 19 ರಂದು ಕಿರ್ಲೋಸ್ಕರ್ ಫ್ಯಾಕ್ಟರಿಯಿಂದ ಬೃಹತ್ ಮೆರವಣಿಗೆ ಹೊರಟು ತಹಶೀಲ್ದಾರ್‌ರವರ ಕಛೇರಿ ತಲುಪಿ ಮನವಿಯನ್ನು ಸಲ್ಲಿಸಿದರು.

ಬೃಹತ್ ಸಭೆಯನ್ನು ಉದ್ದೇಶಿಸಿ ಮೈಸೂರು ಕಿರ್ಲೋಸ್ಕರ್ ಎಂಪ್ಲಾಯೀಸ್ ಅಸೋಸಿಯೇಷನ್ನಿನ ಪ್ರಧಾನ ಕಾರ್ಯದರ್ಶಿ ಸಿ.ಎಂ.ಜಯಾನಂದ್, ಪದಾಧಿಕಾರಿ ಕೆ.ನಾರಾಯಣ ಸಾ, ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎ.ಎಸ್.ಮೂರ್ತಿ ಮಾತನಾಡಿ ಕಾಲರಾ ವ್ಯಾದಿಯಿಂದ ಆದ ಸಾವು ನೋವು ವಿವರಿಸಿದರು.

ಮನವಿಯನ್ನು ಸ್ವೀಕರಿಸಿದ ತಹಸಿಲ್ದಾರವರಿಂದ ತುರ್ತು ಪರಿಹಾರಕ್ಕೆ ಆಶಾದಾಯಕ ಪ್ರತಿಕ್ರಿಯೆ ಬಾರದ್ದರಿಂದ ಅತೃಪ್ತಿಗೊಂಡ ಕಾರ್ಮಿಕರು ಮೆರವಣಿಗೆಯಲ್ಲಿ ಪುರಸಭೆಯನ್ನು ತಲುಪಿ, ನಗರ ಸಭಾ ಆಯುಕ್ತರನ್ನು ಭೇಟಿ ಮಾಡಿ ಪರಿಹಾರಕ್ಕೆ ಮನವಿ ಮಾಡಿದಾಗ ಸೌಜನ್ಯ ತೋರದೆ ದರ್ಪದಿಂದ ತನ್ನ ಘನತೆಗೆ ತಕ್ಕದಲ್ಲದ ರೀತಿಯಲ್ಲಿ ವರ್ತಿಸಿದಾಗ ಉದ್ರಿಕ್ತಗೊಂಡ ಕಾರ್ಮಿಕರು ಈ ಅಧಿಕಾರಿಯ ಉದ್ಧಟತನವನ್ನು ಕಟುವಾಗಿ ಖಂಡಿಸಿದರು.

ಸ್ಥಳದಲ್ಲಿದ್ದ ಪುರಸಭೆ ಸದಸ್ಯ ಡಿ.ಜಿ. ರಘುನಾಥ್, ಶಮೀನ್ ಭಾನುರವರು ನೀರಿನ ಅಸಮರ್ಪಕ ವ್ಯವಸ್ಥೆ, ಸ್ವಚ್ಛತೆಯ ಕೊರತೆಯನ್ನು ಎತ್ತಿ ಹಿಡಿದರು, ಮಾತಿನ ಚಕಮಕಿ ನಂತರ ಆಯುಕ್ತರು ಸಮರ್ಪಕ ಮುಂಜಾಗ್ರತೆ ಬಗ್ಗೆ ವಿವರಿಸಿ ಭರವಸೆ ನೀಡಿದರು.

ಕೊನೆಯಲ್ಲಿ ಆಗಮಿಸಿದ ಪುರಸಭಾಧ್ಯಕ್ಷ ಕೆ.ಕೆ.ಅನ್ವರ್ ಸಾಬ್‌ರವರು ಶುದ್ಧ ನೀರಿನ ಸರಬರಾಜು, ಹೋಟೆಲಿನಲ್ಲಿ ಕುಡಿಯಲು ಬಿಸಿ ನೀರು, ಕೊಯ್ದು ಮಾರುವ ಹಣ್ಣಿನ ಅಂಗಡಿಗಳ ನಿಷೇಧ, ಚರಂಡಿ ಕಾಲುವೆಗಳಿಗೆ ಔಷಧಿ ಸಿಂಪಡಿಕೆ, ಜನಜಾಗೃತಿಗಾಗಿ ಕರಪತ್ರ ಮತ್ತಿತರೆ ವ್ಯವಸ್ಥೆ ಬಗ್ಗೆ ಆದ್ಯತೆ ನೀಡಲಾಗುವುದೆಂದರು.

ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಕೆ.ಪಿ.ರವಿಕುಮಾರ್‌ರವರು ಭದ್ರತೆ-ಶಾಂತಿ ಪಾಲನೆಯ ಉಸ್ತುವಾರಿ ವಹಿಸಿದ್ದರು.

# ಬಸ್ ಪ್ರಯಾಣ ದರ ಏರಿಕೆ ವಿರುದ್ಧ ವಿದ್ಯಾರ್ಥಿ-ಯುವ ಜನರಿಂದ - ಪ್ರತಿಭಟನೆ

ದಾವಣಗೆರೆ-ರಾಜ್ಯ ಸರಕಾರ ಶೇ 35 ರಷ್ಟು ಸಾರಿಗೆ ಪ್ರಯಾಣ ದರವನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ ದಾವಣಗೆರೆಯಲ್ಲಿ ಎಸ್‌ಎಫ್‌ಐ-ಡಿವೈಎಫ್‌ಐ ಸಂಘಟನೆಗಳು ಮಾರ್ಚ್ 3 ರಂದು ಉಪವಿಭಾಗಾಧಿಕಾರಿಗಳ ಕಛೇರಿ ಎದುರು ಒಂದು ಘಂಟೆಗಳ ಪ್ರತಿಭಟನಾ ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದವು.

ಈಗಾಗಲೇ ಬೆಲೆ ಏರಿಕೆಯ ವರ್ತುಲದಲ್ಲಿ ಸಿಕ್ಕಿ ಬಳಲುತ್ತಿರುವಾಗ ರಾಜ್ಯ ಸರಕಾರ ಪುನಃ ವಿದ್ಯುತ್, ಸಾರಿಗೆ ಬೆಲೆಗಳನ್ನು ಏರಿಸಿ ಜನಸಾಮಾನ್ಯರ ಬದುಕಿನ ಮೇಲೆ ಬರೆ ಎಳೆದಿದೆ. ಇದರ ಪರಿಣಾಮ ವಿದ್ಯಾರ್ಥಿ-ಯುವಜನರ ಮೇಲೂ ತೀವ್ರ ಪರಿಣಾಮ ಬೀರುತ್ತಿರುವುದರಿಂದ ಕೂಡಲೇ ಬಸ್ ದರಗಳನ್ನು ಇಳಿಸಲು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.

ನಂತರ ನಡೆದ ಸಭೆಯನ್ನುದ್ದೇಶಿಸಿ ಎಸ್‌ಎಫ್‌ಐ ಉಪಾಧ್ಯಕ್ಷ ಪಿ.ಮಂಜುನಾಥ್, ಡಿವೈಎಫ್‌ಐ ಸಹಕಾರ್ಯದರ್ಶಿ ಬಿ.ಎಸ್.ವೆಂಕಟೇಶ್ ಮಾತನಾಡಿದರು.

# ಜನರ ನೋವಿಗೆ ಸ್ಪಂದಿಸುವ 'ನಿರಂತರ'

'ಐಕ್ಯರಂಗ'ದಲ್ಲಿ ಮಂಗಳೂರಿನಲ್ಲಿ ಪ್ರಕಟವಾಗುತ್ತಿರುವ ಗೋಡೆ ಪತ್ರಿಕೆಯ ಬಗ್ಗೆ ಓದಿದವರು ಗೋಡೆ ಪತ್ರಿಕೆ ಹಾಗೆಂದರೇನು? ಎಂದು ಪ್ರಶ್ನಿಸಿದ್ದಾರೆ. ಗೋಡೆಪತ್ರಿಕೆ, ಅದು ಒಳಗೊಳ್ಳುವ ವಿಷಯ, ಇದರ ಉದ್ದೇಶವನ್ನು ಈ ಲೇಖನದಲ್ಲಿ ಬಿಡಿಸಿಡಲಾಗಿದೆ. ಗೋಡೆಪತ್ರಿಕೆ ಕಡಿಮೆ ವೆಚ್ಚದಲ್ಲಿ ಸರಳ ರೀತಿಯಲ್ಲಿ ಜನರನ್ನು ಮುಟ್ಟಬಹುದಾದ ಮಾಧ್ಯಮ. ಇದು ಮಂಗಳೂರಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಎಲ್ಲ ಕಡೆ ಕುಡಿಯೊಡೆಯಬೇಕು ಎಂಬುದು 'ಐಕ್ಯರಂಗ'ದ ಆಶಯ. ಅದಕ್ಕಾಗಿ ಈ ವಿವರ ಲೇಖನ.

## ಗೋಡೆಪತ್ರಿಕೆ ಹಾಗೆಂದರೇನು?

ಸಿದ್ಧವಾಗುವುದು ಒಂದೇ ಪತ್ರಿಕೆ. ಆದರೆ ಓದುಗರು 500 ಕ್ಕೂ ಹೆಚ್ಚು. ಇದು ಪತ್ರಿಕೋದ್ಯಮದಲ್ಲಿ ವಿನೂತನ ದಾಖಲೆ. ಅತ್ಯಂತ ಹೆಚ್ಚು ಜನಪ್ರಿಯ ಎಂದು ಗುರುತಿಸಲ್ಪಟ್ಟ ಪತ್ರಿಕೆಗಳ ಓದುಗರ ಸಂಖ್ಯೆ ಗರಿಷ್ಠ ಒಂದು ಪತ್ರಿಕೆ 10 ಜನ. ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ಓದುಗರನ್ನು ಪಡೆದಿರುವ 'ಮಲಯಾಳಂ ಮನೋರಮಾ'ದ ಒಂದು ಪ್ರತಿಯ ಓದುಗರ ಸಂಖ್ಯೆಯೇ ಹತ್ತನ್ನು ದಾಟಿಲ್ಲ. ಹಾಗಾದರೆ ಇದು ಯಾವ ಪತ್ರಿಕೆ? ಅಥವಾ 'ಪತ್ರಿಕೆಗಳ ಪತ್ರಿಕೆ'?

ಮಂಗಳೂರಿನ ಪುಟ್ಟ ಕೋಣೆಯಲ್ಲಿ ಈ ಬೃಹತ್ತಾದ ಘಟನೆ ಸಂಭವಿಸಿದೆ. ಈ ಪತ್ರಿಕೆ ಬೇಕು ಎಂದರೂ ಒಂದು ಪ್ರತಿಗಿಂತ ಹೆಚ್ಚು ಕಾಣ ಸಿಗುವುದಿಲ್ಲ. ಅಂಗಡಿಯಲ್ಲಿ ಮಾರಾಟಕ್ಕೆ ಬರುವುದಿಲ್ಲ. ಈ ಪತ್ರಿಕೆ ಹಣ ಕೊಟ್ಟು ಕೊಂಡು ಓದಿ ಎನ್ನುವುದಿಲ್ಲ. ಎಲ್ಲ ಪತ್ರಿಕೆಗಳೂ ಜನರ ಬಳಿಗೆ ಹೋದರೆ ಈ ಪತ್ರಿಕೆ ತಾನಿರುವ ಕಡೆಗೇ ಜನರನ್ನು ಬರ ಮಾಡಿಕೊಳ್ಳುತ್ತದೆ.

ಇದೇ 'ನಿರಂತರ' - ಗೋಡೆ ಪತ್ರಿಕೆ. ಎಸ್‌ಎಫ್‌ಐ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಗಳ ಕಚೇರಿ ಇರುವ 'ವಿಕಾಸ' ದಲ್ಲಿ ಪ್ರತಿ 15 ದಿನಕ್ಕೊಮ್ಮೆ ಅರಳುವ ಪತ್ರಿಕೆ.


ಈ ಪುಟ್ಟ ಕೋಣೆಯೊಳಗೆ ಫಿಡಲ್ ಕ್ಯಾಸ್ಟ್ರೋ ತನ್ನ ದೇಶದ ಜೊತೆಗೆ ನಾವಿದ್ದೇವೆ ಎಂದು ಸಾರಿ ಭಾರತ ಕಳಿಸಿದ ಟನ್‌ಗಟ್ಟಲೆ ಗೋಧಿಗೆ ಹೃದಯ ತುಂಬಿ ಕೃತಜ್ಞತೆ ಹೇಳುತ್ತಾರೆ. 'ರಾಮ್ ಕೆ ನಾಮ್' ಚಿತ್ರ ಪ್ರಸಾರವಾಗದ್ದರ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತದೆ, ಹೆಜ್ಜಾಲದಲ್ಲಿ ಪೋಲೀಸರ ಅಮಾನುಷ ಫೈರಿಂಗ್‌ಗೆ ಬಲಿಯಾದವರಿಗೆ ಕಣ್ಣೀರು ಮಿಡಿಯುತ್ತದೆ. ಪದ್ಮಲತಾಳನ್ನು ಧರ್ಮಸ್ಥಳ ಬಲಿ ತೆಗೆದುಕೊಂಡ ಕಥೆಯನ್ನು ಬಿಡಿಸಿಡುತ್ತದೆ. ಪಶ್ಚಿಮ ಬಂಗಾಳದ ಬಗ್ಗೆ ಉತ್ಸಾಹದಿಂದ ಹಾಡುತ್ತದೆ. ಅಕ್ಷರ ಕಲಿಕೆಯ ಬಗ್ಗೆ ಮನವರಿಕೆ ಮಾಡಿಕೊಡುತ್ತದೆ.

ಇದೇ 'ನಿರಂತರ' ಗೋಡೆ ಪತ್ರಿಕೆ. ಗೋಡೆ ಪತ್ರಿಕೆ ಹಾಗೆಂದರೇನು? ಎಂದು ಎಲ್ಲರೂ ಆಶ್ಚರ್ಯ ಪಡಬಹುದು. ಗೋಡೆಯಲ್ಲಿ ಕಾಣಸಿಕೊಳ್ಳುವ ಪತ್ರಿಕೆಯೆ ಗೋಡೆ ಪತ್ರಿಕೆ. ನೋಟೀಸ್ ಬೋರ್ಡ್ ನಿಮಗೆ ಗೊತ್ತಲ್ಲ. ಯಾರಿಗಾದರೂ ಏನಾದರೂ ವಿಷಯ ತಿಳಿಸುವುದಿದ್ದರೆ, ಮುಷ್ಕರಗಳ ಬಗ್ಗೆ ಹೇಳುವುದಿದ್ದರೆ ನೋಟೀಸ್ ಬೋರ್ಡ್‌ನಲ್ಲಿ ಕರಪತ್ರ, ಭಿತ್ತಿಪತ್ರ ಹಾಕುತ್ತೀರಿ. ಮೀಟಿಂಗ್ ಇದೆ ಎಂಬುದರ ಬಗ್ಗೆ ಬರೆದು ತಿಳಿಸುತ್ತೀರಿ. ಈ ಗೋಡೆ ಪತ್ರಿಕೆ ಒಂದು ರೀತಿಯಲ್ಲಿ ನೋಟೀಸ್ ಬೋರ್ಡ್‌ನಂತೆ, ಆದರೆ ನೋಟೀಸ್ ಬೋರ್ಡ್‌ಗಿಂತ ಭಿನ್ನ.

ನೋಟೀಸ್‌ಬೋರ್ಡ್‌ನಲ್ಲಿ ಮುಷ್ಕರ, ಬಂದ್, ಮೀಟಿಂಗ್ ಇತ್ಯಾದಿ ಬಗ್ಗೆ ಸೂಚನೆ ಮಾತ್ರ ಇದ್ದರೆ ಗೋಡೆ ಪತ್ರಿಕೆಯಲ್ಲಿ ಪತ್ರಿಕೆಯ ರೀತಿಯಲ್ಲಿಯೇ ಸುದ್ದಿ, ಲೇಖನ, ಸಂಪಾದಕೀಯ, ಕಥೆ, ಕವನ, ಹರಟೆ, ನುಡಿಮುತ್ತು, ಪುಸ್ತಕ ವಿಮರ್ಶೆ, ಚಲನಚಿತ್ರ, ರಂಗಭೂಮಿ ವಿಮರ್ಶೆ, ಕ್ವಿಜ್ ಎಲ್ಲವೂ ಇರುತ್ತವೆ.

ಒಂದು ನಿರ್ದಿಷ್ಟ ಜಾಗದಲ್ಲಿ ಸಾಕಷ್ಟು ವಿಶಾಲವಾಗಿ ಈ ಎಲ್ಲಾ ಸುದ್ದಿ ಲೇಖನಗಳನ್ನು ಹಾಕಲಾಗುತ್ತದೆ. 15 ದಿನಕ್ಕೊಮ್ಮೆ ನಿರಂತರ ಬದಲಾಗುತ್ತದೆ. ತಿಂಗಳಿಗೆ ಹೀಗೆ ಎರಡು ಸಂಚಿಕೆಗಳು. ನಿರಂತರಕ್ಕೆ ಎರಡು ಸಂಪಾದಕೀಯ ಮಂಡಳಿ ಇವೆ. ಮೂರು ಜನರನ್ನುಳ್ಳ ಒಂದೊಂದು ಸಮಿತಿ ಸುಮಾರು ಹತ್ತು ದಿನಗಳ ಮುಂಚೆ ಮುಂದಿನ ಸಂಚಿಕೆಯಲ್ಲಿ ಏನು ಬರಬೇಕು ಎಂಬುದನ್ನು ನಿರ್ಧರಿಸುತ್ತದೆ. ಯಾವ ವಿಷಯ, ಯಾರಿಂದ ಬರೆಸಬೇಕು ಎಂದು ತೀರ್ಮಾನ ಮಾಡಿ ಗೋಡೆಯ ಮೇಲೆ ಆ ಪತ್ರಿಕೆಯಲ್ಲಿ ಆ ಲೇಖನಕ್ಕೆ ಸಿಗುವ ಜಾಗ ಎಷ್ಟು ಎಂದು ಅಳತೆ ಮಾಡಿ ಅದಕ್ಕೆ ಬಣ್ಣದ ಕಾಗದವನ್ನು ಕತ್ತರಿಸಿ ಲೇಖಕರಿಗೆ ರವಾನಿಸುತ್ತದೆ. ಲೇಖಕರು ಲೇಖನ ಬರೆದು ತಾವೇ, ಅಥವಾ ಸುಂದರ ಕೈ ಬರಹ ಇದ್ದವರ ಬಳಿ ಆ ಲೇಖನವನ್ನು ಬರೆಸಿ, ಪುನಃ ನಿಗದಿತ ದಿನಾಂಕದಂದು ವಾಪಸ್ ಮಾಡು ತ್ತಾರೆ. ಹೀಗೆ ಎಲ್ಲರಿಂದ ಬಂದ ಲೇಖನವನ್ನು ಗೊತ್ತುಪಡಿಸಿದ ದಿನ ಗೋಡೆಗೆ ಅಂಟಿಸಿದರೆ ಓಹ್! ಒಂದು ಪತ್ರಿಕೆ ಸಿದ್ಧ.

ವಿಮಾನೌಕರರ ಸಂಘದ ಮುಂದಾಳು ಮಂಗಳೂರು ಪ್ರಾದೇಶಿಕ ಕಾರ್ಯದರ್ಶಿ ನಾಗೇಶ್ ಕುಮಾರ್, 'ಪಟ್ಟಾಂಗ' ಪತ್ರಿಕೆಯ ಪತ್ರಕರ್ತ, ಕಾಲೇಜು ದಿನಗಳಲ್ಲಿ ಗೋಡೆ ಪತ್ರಿಕೆಗಳನ್ನು ಸಂಪಾದಿಸಿರುವ ಅನುಭವವಿರುವ ತಾರಾ ನಾಥ್ ಕಾಫಿಕಾಡ್, ಕೆನರಾ ಬ್ಯಾಂಕ್ ಉದ್ಯೋಗಿ, ಬರಹದಲ್ಲಿ ತುಂಬಾ ಪ್ರೀತಿ ಇರುವ ಬಾಲಕೃಷ್ಣ ಅಡೆಂಜ, ಇದುವರೆಗೂ ಕಾಲೇಜಿನ ಉಪನ್ಯಾಸಕರಾಗಿದ್ದು ಈಗ ನಿರಂತರದ ಅನುಭವದೊಂದಿಗೆ ಪತ್ರಕರ್ತರಾಗಿರುವ ಕಮಲಾಕ್ಷ, ಭಾರತ ವಿದ್ಯಾರ್ಥಿ ಫೆಡರೇಷನ್‌ನ ಮೂಲಕ ಬಂದು ನಿರಂತರಕ್ಕೆ ಉತ್ಸಾಹದ ಚಾಲನೆ ನೀಡಿ ಈಗ ಇಲ್ಲಿನ ಜನಪ್ರಿಯ ಪತ್ರಿಕೆಯಲ್ಲಿ ಪತ್ರಕರ್ತರಾಗಿರುವ ಸುಕೇಶ್‌ಕುಮಾರ್, ಹೀಗೆ ಹತ್ತು ಹಲವು ರಂಗಗಳಿಂದ ಬಂದವರು ಒಂದಾಗಿ 'ನಿರಂತರ' ನಡೆಸುತ್ತಿದ್ದಾರೆ. ಡಿವೈಎಫ್‌ಐನ ಜಿಲ್ಲಾ ಅಧ್ಯಕ್ಷ ಕೃಷ್ಣಪ್ಪ ಕೊಂಚಾಡಿ, ಯಾದವ ಶೆಟ್ಟಿ, ವಸಂತ ಆಚಾರಿ ಈ ಪತ್ರಿಕೆಯ ಪ್ರಮುಖ ಸಲಹೆಗಾರರು.



ಮೊದಲ ಸಂಚಿಕೆಯನ್ನು ಗೋದಾವರಿ ಪರುಳೇಕರ್ ಅವರಿಗೆ ಅರ್ಪಿಸಿದ ನಿರಂತರ ಆಗ ಜಿಲ್ಲೆಯಲ್ಲಿ ನಡೆಯುತ್ತಿದ್ದ ಚಂಡಿಕಾಯಾಗದ ಹಿಂದೆ ಇರುವ ಧರ್ಮಾಂಧ ಮನಸ್ಸುಗಳನ್ನು ಬಯಲಿಗೆಳೆದಿದೆ. ಸೌಂದರ್ಯ ಸ್ಪರ್ಧೆ ಮುಗಿದ ನಂತರ ಸ್ಪರ್ಧೆ ವಿರುದ್ಧ ನಡೆಸಿದ ಹೋರಾಟ ಸಾಧಿಸಿದ್ದೇನು ಎಂದು ವಿಶ್ಲೇಷಿಸಿದೆ. ಹೆಜ್ಜಾಲದಲ್ಲಿ ಪೋಲೀಸರ ಗುಂಡಿಗೆ ಬಲಿಯಾದವರಿಗೆ, ಜಿಲ್ಲೆಯ ಜನಪ್ರಿಯ ಸಾಹಿತಿ, ಹೋರಾಟಗಾರ ಕೆ.ಪಿ.ರಾವ್ ಅವರಿಗೆ ತನ್ನ ಸಂಚಿಕೆಗಳನ್ನು ಅರ್ಪಣೆ ಮಾಡಿದೆ.

ಅಂತರ್ರಾಷ್ಟ್ರೀಯ ಮಹಿಳಾ ದಿನ ಎಂದರೆ ಏನು? ಈ ದಿನ ಏಕಾಗಿ ಎಂಬುದನ್ನು ತಿಳಿಸಿದೆ. ವಿಜ್ಞಾನ ದಿನಕ್ಕಾಗಿ ಕಲ್ಕತ್ತಾದಲ್ಲಿ ಇರುವ ವಿಜ್ಞಾನ ಪಾರ್ಕ್‌ನ ಬಗ್ಗೆ, ನೇತಾಜಿ ಸುಭಾಷ್ ಚಂದ್ರಬೋಸ್‌ರ ಜನ್ಮ ಶತಾಬ್ದಿ ಅಂಗವಾಗಿ ಅವರ ಸೈನ್ಯದಲ್ಲಿದ್ದ ಲಕ್ಷ್ಮಿ ಸೈಗಲ್ ಅವರ ಪರಿಚಯ, ಬಜೆಟ್ ಮಂಡನೆ ಯಾದಾಗ ಬಜೆಟ್‌ನ ವಿಮರ್ಶೆ ನಡೆಸಿದೆ.

ಜಿಲ್ಲೆಯ ಜನಪ್ರಿಯ ಕಾರ್ಮಿಕ ಮುಖಂಡ ಬಿ.ಮಾಧವರಿಗೆ ಸನ್ಮಾನ ನಗರದಲ್ಲಿ ಇಟ್ಟುಕೊಂಡಾಗ ಅವರ ಹೋರಾಟದ ಬಗ್ಗೆ ಪರಿಚಯ, ಸಂದರ್ಶನ, ಚಿತ್ರ ಸಂಪುಟವನ್ನು ನೀಡಿದೆ. ಸಿಐಟಿಯು ಜಿಲ್ಲಾ ಸಮ್ಮೇಳನದಲ್ಲಿ ಕೆಂಪುಧ್ವಜ ಹಿಡಿ ಯುವ ಅವಕಾಶ ಸಿಕ್ಕ ಮುತ್ತಪ್ಪನವರನ್ನು 'ನಿರಂತರ' ತಂಡ ಸಂದರ್ಶಿಸಿದೆ. ಹೀಗಾಗಿ ಮುತ್ತಪ್ಪ ಯಾವ ತಪ್ಪೂ ಇಲ್ಲದೆ ನೇಣು ಗಂಬದವರೆಗೆ ಹೋಗಿ ವಾಪಾಸು ಬಂದ ಕಥೆಯನ್ನು ಬೆಳಕಿಗೆ ತಂದಿದೆ.

ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯು ಜಿಲ್ಲಾ ಸಮ್ಮೇಳನ, ಎಸ್‌ಎಫ್‌ಐನ ರಾಷ್ಟ್ರಸಮ್ಮೇಳನದ ಬಗ್ಗೆ ಲೇಖನ, ಚಿತ್ರ ಸಂಪುಟ ಪ್ರಕಟಿಸಿದೆ.

'ನಿರಂತರ' ಕೇವಲ ಓದುಗರಿಗೆ ವಿಷಯ ತಿಳಿಸುವುದು ಮಾತ್ರವಲ್ಲ, ಓದುಗರೂ 'ನಿರಂತರ'ದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತದೆ. 'ಕ್ವಿಜ್' ಇಂತಹ ಒಂದು ಅಂಕಣ. ಮೂರು ನಾಲ್ಕು ದಶಕದ ಹಿಂದಿನ ಇಎಂಎಸ್ ಚಿತ್ರವನ್ನು ಹಾಕಿ ಇವರು ಯಾರು ಎಂದು ಪ್ರಶ್ನಿಸುತ್ತದೆ. ಜಿಲ್ಲೆಯಲ್ಲಿ ಹತ್ತು ವರ್ಷಗಳ ಹಿಂದೆ ನಡೆದ ಪ್ರತಿಭಟನೆಯೊಂದರ ಛಾಯಾ ಚಿತ್ರ ಹಾಕಿ ಇದು ಯಾವ ಘಟನೆ, ಈ ಚಿತ್ರದಲ್ಲಿರುವವರು ಯಾರು ಎಂದು ಗುರುತಿಸಿ ಎಂದು ಹೇಳುತ್ತದೆ. ವಿಜ್ಞಾನ ಚಳವಳಿಯ ಎಂ.ಸಿ.ಪರಮೇಶ್ವರನ್ ಅವರ ಚಿತ್ರ ಹಾಕಿ ಇವರ ಪರಿಚಯ ಕೇಳುತ್ತದೆ. ಉತ್ತರ ಗೊತ್ತಾದರೆ ಓದುಗರು ಪಕ್ಕದಲ್ಲಿಯೇ ಇಟ್ಟಿರುವ ನಿರಂತರ ಪೆಟ್ಟಿಗೆಗೆ ಉತ್ತರ ಬರೆದು ಹಾಕುತ್ತಾರೆ. ಗೊತ್ತಿಲ್ಲ ಎಂದರೆ ಮುಂದಿನ ಸಂಚಿಕೆಗೆ ಕಾಯುತ್ತಾರೆ. ಎಂ.ಪಿ. ಪರಮೇಶ್ವರನ್ ಬಗ್ಗೆ ಮಾತ್ರ ಹೇಳದೆ ಜೊತೆಗೆ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ (ಕೆಎಸ್‌ಎಸ್‌ಪಿ)ನ ಪರಿಚಯವನ್ನೂ ಮಾಡಿಕೊಡಲಾಗುತ್ತದೆ.

ಕಯ್ಯೂರು ಇಂದು ಏನಾಗಿದೆ, ಕಂಪ್ಯೂಟರ್ ಲೋಕದಲ್ಲಿ ಸುರ್ಜಿತ್ ಕಾಲ ಕಳೆದದ್ದು, ಜ್ಯೋತಿಬಸು ಅವರ ಬಗ್ಗೆ ತಯಾರಾಗುತ್ತಿರುವ ಚಿತ್ರ, ಸೋಮನಾಥ ಚಟರ್ಜಿ

ಪುಟ 7 ನೋಡಿ

## 'ನಿರಂತರ'ಕ್ಕೆ ಮೂರು ವರ್ಷದ ಸಂಭ್ರಮ

'ನಿರಂತರ'ಕ್ಕೆ ಈಗ ಮೂರರ ಹರಯ. ಮಂಗಳೂರಿನ ಹಂಪನ ಕಟ್ಟೆಯ ಪಿರೇರಾ ಲಾಡ್ಜ್‌ನಲ್ಲಿ ಈ ಎಲ್ಲಾ ಸಂಘಟನೆಗಳ ಕಚೇರಿ ಇದ್ದಾಗ ಆರಂಭವಾದ 'ನಿರಂತರ' ಕೊನೆಗೆ ಈ ಕಚೇರಿ ಬಿಟ್ಟು ದೂರದ ಮತ್ತೊಂದು ಕಚೇರಿಗೆ ಹೋಗಬೇಕಾಗಿ ಬಂದಾಗ ಪ್ರಕಟಣೆಯನ್ನು ಸ್ಥಗಿತಗೊಳಿಸಿತು. ನಂತರ ಮತ್ತೆ ವಿಕಾಸಗೊಂಡದ್ದು 'ವಿಕಾಸ' ಕಚೇರಿಗೆ ಬಂದಾಗ.

ಪಿರೇರಾ ಲಾಡ್ಜ್‌ನಲ್ಲಿ ಎರಡು ವರ್ಷ ನಿರಂತರವಾಗಿ 'ನಿರಂತರ' ಪ್ರಕಟವಾಗಿದೆ. ಕೃಷ್ಣಪ್ಪ ಕೊಂಚಾಡಿ, ವಸಂತ ಆಚಾರಿ ಸಂಪಾದಕರಾಗಿ ಯಾದವಶೆಟ್ಟಿ ಸಹ ಸಂಪಾದಕರಾಗಿದ್ದ ಪತ್ರಿಕೆಗೆ ಕಿಷನ್‌ರಾಜ್ ಹಾಗೂ ವಾಸುದೇವ ಉಚ್ಚಿಲ್ ಸಲಹೆಗಾರರಾಗಿದ್ದರು.

'ನಿರಂತರ' ಎಂಬುದು ಜ್ಞಾನ ದೀವಿಗೆಯಾಗಬೇಕು, ಹಲವಾರು ಮೂಲಗಳಿಂದ ಇಲ್ಲಿ ಜ್ಞಾನ ಶಾಖೆಗಳು ತೊರೆಗಳಂತೆ ಹರಿದು ನಿರಂತರವಾಗಿ ಪ್ರವಹಿಸಬೇಕು' ಎಂದು ನಿರಂತರ ಮೊದಲ ಸಂಚಿಕೆಯ ಸಂಪಾದಕೀಯದಲ್ಲಿ ಕೃಷ್ಣಪ್ಪ ಕೊಂಚಾಡಿ ಆಶಿಸಿದ್ದರು.

'ಜನಸಾಮಾನ್ಯರ ಮಧ್ಯೆ ಸದಾ ದುಡಿಯುತ್ತಿರುವ ನಮ್ಮ ಕಾರ್ಯಕರ್ತರು ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಬುದ್ಧರಾಗಿ ಬಂಡವಾಳಶಾಹಿ ಸಾಂಸ್ಕೃತಿಕ ಮೌಲ್ಯಗಳಿಗೆ ಪರ್ಯಾಯವಾದ ಜನಪರ ಸಾಂಸ್ಕೃತಿಕ ಕಣ್ಣೋಟದ ಪ್ರಭೆ ಹರಡಲು ಈ ನಿರಂತರ ಎಂದು ಮೊದಲ ಸಂಚಿಕೆ ಸಂಪಾದಕೀಯ ಸ್ಪಷ್ಟಪಡಿಸಿತ್ತು.

ನಿರಂತರ ಹಲವು ಸಲಹೆಗಳನ್ನು ಮೈಗೂಡಿಸಿಕೊಳ್ಳುತ್ತಲೇ ಬಂದಿದೆ. ಮಂಗಳೂರಿನ 'ವಿಕಾಸ್' ಕಚೇರಿಗೆ ಭೇಟಿಕೊಟ್ಟು 'ನಿರಂತರ' ಓದಿದ ಡಿವೈಎಫ್‌ಐ ರಾಜ್ಯಕಾರ್ಯದರ್ಶಿ ಎಸ್.ವೈ ಗುರುಶಾಂತ್ ಅವರು 'ಇಂತಹ ಒಳ್ಳೆಯ ನಿರಂತರವನ್ನು ಸಾರ್ವಜನಿಕವಾಗಿಯೂ ಒಂದು ದಿನ ಪ್ರದರ್ಶಿಸಬೇಕು' ಎಂದು ಸಲಹೆ ನೀಡಿದ್ದರು. 'ನಿರಂತರ' ಸಂಪಾದಕೀಯ ಮಂಡಲಿ ತಡ ಮಾಡಲಿಲ್ಲ. ಈ ಸಲಹೆಯನ್ನು ಸ್ವೀಕರಿಸಿ ಕಾರ್ಯತತ್ಪರವಾಯಿತು. ಎಲ್ಲಿಗೆಂದರೂ ಕೊಂಡೊಯ್ಯಬಹುದಾದ ವಿಶಾಲ ಕ್ಯಾನ್‌ವಾಸ್ ಸಿದ್ಧಗೊಳಿಸಿ ಅದರಲ್ಲಿ ನಿರಂತರದ ಹಳೆಯ ಸಂಚಿಕೆಗಳನ್ನು ಗೋಡೆಯಲ್ಲಿಯಂತೆಯೇ ಪುನರ್ ಸೃಷ್ಟಿಸಿ ಸಿಐಟಿಯು ಜಿಲ್ಲಾ ಸಮ್ಮೇಳನ ನಡೆದ ತೊಕ್ಕೊಟ್ಟಿನಲ್ಲಿ, ಎಸ್‌ಎಫ್‌ಐ ಜಿಲ್ಲಾ ಸಮ್ಮೇಳನ ನಡೆದ ಎನ್‌ಜಿಒ ಸಭಾಂಗಣಕ್ಕೆ ಕೊಂಡೊಯ್ದಿತು. ನೂರಾರು ಜನರು ಇದನ್ನು ನೋಡಿ ಸಂತಸಗೊಂಡರು.

ನಿರಂತರ ಸುಲಭದಲ್ಲಿ ರೂಪಿಸಬಹುದಾದ ಅತ್ಯಂತ ಕಡಿಮೆ ಖರ್ಚಿನಲ್ಲಿ ತಯಾರು ಮಾಡಬಹುದಾದ ಪತ್ರಿಕೆ. ದಕ್ಷಿಣ ಕನ್ನಡದಲ್ಲಿ ಇದು ಸಾಧ್ಯವಾಗುವುದಾದರೆ ಜಿಲ್ಲೆಯ ಪ್ರಮುಖ ಕೇಂದ್ರಗಳಂತೆ ಇಡೀ ರಾಜ್ಯದಲ್ಲಿ ಇಂತಹ ನೂರಾರು ಗೋಡೆ ಪತ್ರಿಕೆಗಳು ಅರಳಬಾರದೇಕೆ?

## ಹೊಸ ಆಲೋಚನೆಗೆ 'ನಿರಂತರ' ಸಂವಾದ

ಸಂವಾದ 'ನಿರಂತರ' ಗೋಡೆ ಪತ್ರಿಕೆಯ ಮಹತ್ವದ ಕಾರ್ಯಕ್ರಮ. ಪತ್ರಿಕೆಯ ಪ್ರತೀ ಸಂಚಿಕೆಯನ್ನು ಜಿಲ್ಲೆಯ ಪ್ರಮುಖ ಪತ್ರಕರ್ತರು, ಸಾಹಿತಿ, ವ್ಯಂಗ್ಯ ಚಿತ್ರಕಾರರು ಬಿಡುಗಡೆ ಮಾಡುತ್ತಾರೆ. ಬಿಡುಗಡೆಯ ನಂತರ ಅವರೊಂದಿಗೆ ಸಂವಾದ.

ಮೊದಲ ಪತ್ರಿಕೆ ಬಿಡುಗಡೆ ಮಾಡಿದ ನಂತರ ಇಲ್ಲಿಯ ಹಿರಿಯ ಪತ್ರಕರ್ತ ಮಂಜುನಾಥ ಭಟ್, ಜಿ.ಎನ್.ಮೋಹನ್ ಅವರೊಂದಿಗೆ ನಡೆಸಿದ ಸಂವಾದ ಇತ್ತೀಚಿನ ಇಂಗ್ಲಿಷ್ ಪತ್ರಿಕೆಗಳ ಬೆಲೆ ಇಳಿಕೆ ಸ್ಪರ್ಧೆ, ಜಾಹಿರಾತು ಮತ್ತು ಸುದ್ದಿ ಪ್ರಮಾಣ, ವಿದೇಶಿ ಪತ್ರಿಕೆಗಳು, ಕಾವಿ ಪತ್ರಿಕೋದ್ಯಮದ ಬಗ್ಗೆ ಚರ್ಚಿಸಿತು. ಎರಡನೆಯ ಸಂಚಿಕೆಯನ್ನು ಖ್ಯಾತ ವ್ಯಂಗ್ಯಚಿತ್ರಕಾರ ಹರಿಣಿ ಎಂದೇ ಖ್ಯಾತರಾದ ಹರಿಶ್ಚಂದ್ರ ಶೆಟ್ಟಿ ಬಿಡುಗಡೆ ಮಾಡಿ ಕಲಾಕೃತಿಗಳ ಮೇಲೆ ಕೋಮುವಾದಿಗಳ ದಾಳಿಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಪತ್ರಕರ್ತ ಚಿದಂಬರ ಬೈಕಂಪಾಡಿ ಜಿಲ್ಲೆಯ ಪರಿಸರದ ಬಗ್ಗೆ ಚರ್ಚಿಸಿದರು.

'ರಾಮ್‌ಕೆ ನಾಮ್' ಸಾಕ್ಷ್ಯಚಿತ್ರವನ್ನು ದೂರದರ್ಶನದಲ್ಲಿ ಪ್ರಸಾರ ಮಾಡಬೇಕೆಂದು ನ್ಯಾಯಾಲಯ ನೀಡಿದ ತೀರ್ಪಿನಿಂದ ಕೋಮು ಸೌಹಾರ್ದತೆಗೆ ಸಿಕ್ಕ ಜಯವನ್ನು 'ನಿರಂತರ' ರಾಮ್ ಕೆನಾಮ್ ಚಿತ್ರ ಪ್ರಸಾರ ಮಾಡುವ ಮೂಲಕ ಆಚರಿಸಿತು.

ಪ್ರತಿ ಸಂಚಿಕೆ ಒಂದು ಸಂವಾದದ ಮೂಲಕ ಜಿಲ್ಲೆಯಲ್ಲಿಯೂ ಜನಪರ ಆಲೋಚನೆಗಳನ್ನು ರೂಪಿಸಲು ಪ್ರಯತ್ನಿಸುತ್ತಿದೆ. ಈಗ ಈ ಸಂವಾದ ಜಿಲ್ಲೆಯ ಪ್ರಮುಖ ಸಾಹಿತ್ಯಕ ಕಾರ್ಯಕ್ರಮವೂ ಆಗಿದೆ.

# ಕರ್ನಾಟಕ ಸರ್ಕಾರದ ಮನೆ ಮುರುಕತನ

ರಾಜ್ಯದ ಮುಂಗಡ ಪತ್ರದಲ್ಲಿ ಬಡವರಿಗೆ ಹೆಚ್ಚಿಗೆ ಏನೂ ನೀಡದ, ಕರ್ನಾಟಕ ಸರಕಾರ ದುಡಿವ ಜನತೆಯ ಹೊಟ್ಟೆಯ ಮೇಲೆ ಹೊಡವ ನಿರ್ಧಾರ ವನ್ನು ತೆಗೆದುಕೊಳ್ಳುವ ಹುನ್ನಾರ ನಡೆಸುತ್ತಿದೆ.

ರಾಜ್ಯ ಸರಕಾರಿ ಸ್ವಾಮ್ಯದ ಐದು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ನಿರ್ಧಾರ ಅದು. ರಾಜ್ಯ ಬಜೆಟ್‌ನಲ್ಲಿ ಇವುಗಳಿಗೆ ನೆರವು ನೀಡುವ ನಿರ್ಧಾರ ತೆಗೆದುಕೊಳ್ಳುವ ಬದಲು ಇಂತಹ ನಿರ್ಧಾರವನ್ನು ಕರ್ನಾಟಕ ಸರಕಾರ ತೆಗೆದುಕೊಳ್ಳುತ್ತಿದೆ. ಈ ಐದು ಉದ್ದಿಮೆಗಳೆಂದರೆ 1. ಮೈಸೂರು ಲ್ಯಾಂಪ್ಸ್ 2.ಮೈಸೂರು ಇಲೆಕ್ಟ್ರಿಕಲ್ಸ್, 3. ಮೈಸೂರು ಅಸಿಟೇಜ್ ಅಂಡ್ ಕೆಮಿಕಲ್ಸ್, 4. ಕರ್ನಾಟಕ ಟೆಲಿಕಾಂ ಲಿಮಿಟೆಡ್ ಮತ್ತು 5. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್.

ಈ ಎಲ್ಲಾ ಐದು ಉದ್ದಿಮೆಗಳೂ ನಷ್ಟದಲ್ಲಿರುವುದು ನಿಜ. ಆದರೆ ಯಾಕೆ ಇವು ನಷ್ಟದಲ್ಲಿವೆ ಎಂಬುದು ಪ್ರಶ್ನೆ. ರಾಜ್ಯ ಸರಕಾರಿ ಸ್ವಾಮ್ಯದ ಉದ್ದಮೆಗಳೆಂದರೆ ಅವುಗಳ ನಿರ್ವಹಣೆ ರಾಜ್ಯ ಸರಕಾರದ್ದೇ ಎಂಬುದು ಸ್ಪಷ್ಟವಲ್ಲವೇ? ಈ ಉದ್ದಿಮೆಗಳು ಲಾಭದಾಯಕವಾಗಿ ನಡೆಯುವಂತೆ ನಿರ್ವಹಿಸುವುದು ಅದರ ಕರ್ತವ್ಯ. ಈ ಉದ್ದಮೆಗಳನ್ನು ಲಾಭದಾಯಕವಾಗಿ/ ಪರಿಣಾಮಕಾರಿಯಾಗಿ ನಿರ್ವಹಿಸುವ ಪ್ರಯತ್ನಗಳನ್ನು ರಾಜ್ಯ ಸರಕಾರ ಮಾಡಲೇ ಇಲ್ಲ. ಹೀಗಿರುವಾಗ ಈ ಉದ್ದಿಮೆಗಳು. ನಷ್ಟದಲ್ಲಿದ್ದರೆ ಅದಕ್ಕೆ ಯಾರು ಜವಾಬ್ದಾರರು? ರಾಜ್ಯ ಸರಕಾರವೇ. ಈಗ ತನ್ನ ತಪ್ಪುಗಳಿಗೆ ಈ ಉದ್ದಿಮೆಗಳಿಗೆ ಶಿಕ್ಷೆ ನೀಡುವುದು ಯಾವ ನ್ಯಾಯ?

ಇಂತಹ ಖಾಸಗೀಕರಣದ ಪರಿಣಾಮಗಳು ಏನು? ಅಪಾರ ಬೆಲೆಯ ಈ ಸಾರ್ವಜನಿಕ ಆಸ್ತಿಗಳನ್ನು ಮೂರು ಕಾಸಿಗೆ ಮಾರಲಾಗುತ್ತದೆ. ಇದರಿಂದ ರಾಜ್ಯದ ಜನತೆಗೆ ನಷ್ಟ. ಈ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಅನಿಶ್ಚಿತತೆಯ ಸಮಸ್ಯೆ ನಿರುದ್ಯೋಗದ ಸಮಸ್ಯೆಗಳು ಕಾಡುತ್ತವೆ. ಪರೋಕ್ಷವಾಗಿ ಈ ಉದ್ದಿಮೆಗಳಿಂದಾಗಿ ಉದ್ಯೋಗ ಕಂಡುಕೊಂಡವರಿಗೂ ಇದರಿಂದ ಹಾನಿಯಾಗುತ್ತದೆ. ಇಷ್ಟೆಲ್ಲ ನಷ್ಟಗಳಾಗುವುದಾದರೂ ಸರಕಾರಕ್ಕೆ ಅದರ ಕಡೆ ಲಕ್ಷ್ಯವಿಲ್ಲ.

ಕರ್ನಾಟಕ ಸರಕಾರದ ಅತ್ಯಂತ ಬೇಜವಾಬ್ದಾರಿ ಕ್ರಮ ಇದಾಗುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ.

## ವಾರದ ಆರ್ಥಿಕ ಟಿಪ್ಪಣಿಗಳು

ಡಿ.ಎಸ್.ಮಡೆ

# ಭಾರತೀಯ ಬಾಸ್‌ಮತಿಗೆ ಯುರೋಪಿನ ಶಾಪ

ಜಗತ್ತಿನ ಮಾರುಕಟ್ಟೆಗಳಲ್ಲಿ ಭಾರತೀಯ ಬಾಸ್‌ಮತಿ ಅಕ್ಕಿಗೆ ಬೆಲೆ ಏರುತ್ತಿತ್ತು. ಜೊತೆಗೆ ಬೇಡಿಕೆಯೂ ಅಪಾರವಾಗಿ ಹೆಚ್ಚುತ್ತಿತ್ತು. ಇಂತಹ ಸಮಯದಲ್ಲೇ ಯುರೋಪಿನ ಸಮುದಾಯ "ಕಾಪಿಲೆಟಿಸ್ ರಿಕವರಿ ಸ್ಕೀಮ್" ಎಂಬ ತನ್ನ ಯೋಜನೆಯಡಿ ಹಲವು ನಿರ್ಬಂಧಗಳನ್ನು ಈ ಅಕ್ಕಿಯ ಮೇಲೆ ಹೇರಿದೆ. ಯುರೋಪಿನ ಸಮುದಾಯದ ಈ ಸಮಿತಿಯ ಸಭೆಯಲ್ಲಿ ಇಂತಹ ತೀರ್ಮಾನ ತೆಗೆದು ಕೊಳ್ಳಲಾಯಿತು. ಸಮಿತಿಯಲ್ಲಿ ಹಲವು ಸದಸ್ಯರು ಉಪಸ್ಥಿತರಿರಲಿಲ್ಲ. ಉಪಸ್ಥಿತ ರಿದ್ದವರು ಇಂತಹ ನಿರ್ಧಾರದ ಪರ ವಿದ್ದರೆಂದೂ ಅಲ್ಲ, ಆದರೆ ಅವರು ವಿರೋಧಿಸಲೂ ಇಲ್ಲ. ಅಂತೂ ಇಂತಹ ನಿರ್ಧಾರವನ್ನಂತೂ ತೆಗೆದು ಕೊಳ್ಳಲಾಯಿತು. ಈ ನಿರ್ಬಂಧಗಳು ಬರುವ ಮೇ 15 ರಿಂದ ಒಂದು ವರ್ಷದ ವರೆಗೆ ಜಾರಿಯಲ್ಲಿರುತ್ತವೆ. ಈ ನಿರ್ಬಂಧದಿಂದಾಗಿ ಇಲ್ಲಿಯವರೆಗೆ ಸುಂಕರಹಿತವಿದ್ದ ಈ ಅಕ್ಕಿಯ ಆಮದು ಈಗ 300 ಡಾಲರುಗಳು (ಪ್ರತಿ ಟನ್ನಿಗೆ) ಸುಂಕಕ್ಕೆ ಒಳಗಾಗುತ್ತದೆ.

ಮುಕ್ತ ಮಾರುಕಟ್ಟೆ ನೀತಿಯನ್ನು ಪ್ರತಿಪಾದಿಸುವವರು ಜಗತ್ತಿನ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಲಾಭಕ್ಕಾಗಿ ಎಂತೆಂತಹ ನಿರ್ಬಂಧಗಳನ್ನು ಹೇರುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು. ಅವರಿಗೆ ಬೇಕಾದಾಗ ಮುಕ್ತ ಮಾರುಕಟ್ಟೆ.ಅವರ ವ್ಯಾಪಾರದಲ್ಲಿ ಲಾಭಗಳಿಗೆ ತೊಂದರೆ ಆಗುವುದಿದ್ದರೆ ಹಲವು ನಿರ್ಬಂಧಗಳು!

ವಿಶ್ವ ವ್ಯಾಪಾರ ಸಂಸ್ಥೆಯ ಸದಸ್ಯನಾಗಲು ಹಲವು ಶರತ್ತುಗಳನ್ನು ಒಪ್ಪಿಕೊಂಡಿರುವ ಭಾರತ ಸರಕಾರ ಇಂತಹ ನೀತಿಗಳ ವಿರುದ್ಧ ಧ್ವನಿಯೆತ್ತುವ/ಹೋರಾಡುವ ಸಾಹಸವನ್ನಂತೂ ತೋರಿಲ್ಲ.

ಮುಕ್ತ ಮಾರುಕಟ್ಟೆ ಯಾರಿಗೆ? ಸಾಮ್ರಾಜ್ಯಶಾಹಿಗಳು ಕೊಳ್ಳೆ ಹೊಡೆಯಲು ಮಾತ್ರ ಮುಕ್ತ ಮಾರುಕಟ್ಟೆಯೆ?

# 2903 ಕೋಟಿ ರೂಪಾಯಿಗಳ ಅಬ್ಕಾರಿ ಕಳ್ಳತನ

ದೇಶದ ಅತ್ಯುಚ್ಚ ಲೆಕ್ಕ ಪರಿಶೋಧಕ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ (ಸಿಎಜಿ) ಅವರು ಅಬ್ಕಾರಿ ಸಂಗ್ರಹಣೆಯಲ್ಲಿ 2903 ಕೋಟಿ ರೂಪಾಯಿಗಳನ್ನು ಕೈ ಬಿಟ್ಟಿರುವುದನ್ನು ಕಂಡು ಹಿಡಿದಿದ್ದಾರೆ.

1997-98 ರ ಬಜೆಟ್ಟಿನಲ್ಲಿ ಬಂಡವಾಳಿಗರಿಗೆ ಅಬ್ಕಾರಿ ಸುಂಕದ ರಿಯಾಯಿತಿ ತೋರಿದ ಕೇಂದ್ರ ಅರ್ಥ ಮಂತ್ರಿ ಪಿ. ಚಿದಂಬರಂ ಇಂತಹ ಕಳ್ಳತನ ಮಾಡಿದವರ ಮೇಲೆ ಎಂತಹ ಕ್ರಮ ಕೈಗೊಳ್ಳುತ್ತಾರೋ ನೋಡಬೇಕು.

ಸಿಎಜಿಯವರ ವರದಿಯ ಪ್ರಕಾರ 1995-96 ರ ಸಾಲಿನಲ್ಲಿ 36 ಸರಕುಗಳ ಮೇಲೆ ಅಬ್ಕಾರಿ ಕಂದಾಯ ಸಂಗ್ರಹಣೆ ಅಂದಾಜಿಗಿಂತ ಕಡಿಮೆ ಆಗಿದೆ.

ಸುಮಾರು 185 ವ್ಯಾಪಾರಿಗಳಿಗೆ ಅವರಿಗೆ ಸರಕು ಸಂಗ್ರಹಣೆಗೆ ಅನುಕೂಲ ವಿಲ್ಲದಿದ್ದಾಗ್ಯೂ ರಿಜಿಸ್ಟ್ರೇಷನ್ ನೀಡಲಾಯಿತು.

ಹಾಗೆಯೇ 146 ಪ್ರಕರಣಗಳಲ್ಲಿ ಈ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ಗಳನ್ನು ರದ್ದು ಪಡಿಸಿದ ಮೇಲೂ ಯಾವುದೇ ಕ್ರಮಗಳನ್ನು ಕೈಗೊಳ್ಳಲೇ ಇಲ್ಲ. ಅವರ ಕಾಗದ ಪತ್ರಗಳು ನ್ಯೂನವಾಗಿದ್ದರೂ ಅದನ್ನು ಪರೀಕ್ಷಿಸಲಿಲ್ಲ.

ಇದಲ್ಲದೆ ಹಲವರಿಗೆ ಅಕ್ರಮವಾಗಿ ರಿಯಾಯಿತಿಗಳನ್ನೂ ನೀಡಲಾಯಿತು.

ರಫ್ತು ಘಟಕಗಳು ನಡೆಸಿದ ಅಕ್ರಮಗಳ ಮೊತ್ತವೇ 549 ಕೋಟಿ ರೂಪಾಯಿಗಳು.

ಇಂತಹ ಮೋಸಗಳನ್ನು ಪತ್ತೆ ಹಚ್ಚಿ ಅವರುಗಳಿಂದ ಸುಂಕ ವಸೂಲಿ ಮಾಡುವ ಬದಲು ಅವರಿಗೇ ಮತ್ತೆ ರಿಯಾಯ್ತಿಗಳನ್ನು ನೀಡಲಾಗುತ್ತದೆ. ಬದಲಿಗೆ ಜನ ಸಾಮಾನ್ಯರ ಮೇಲೆ ಆಡಳಿತಾತ್ಮಕ ಬೆಲೆ ಹೆಚ್ಚಳದ ಮೂಲಕ ಸಹಾಯಧನಗಳ ಕಡಿತದ ಮೂಲಕ ಹೊರೆ ಹೇರಲಾಗುತ್ತದೆ.

ಇದಲ್ಲವೇ ಉದಾರೀಕರಣ?

# ರಫ್ತೆಂಬ ಮೋಸ

ರಫ್ತು ದೇಶದ ವಿದೇಶಿ ವ್ಯಾಪಾರದ ಮುಖ್ಯ ಅಂಶವೆಂಬುದು ಸರ್ವವಿದಿತ. ಇದಕ್ಕಾಗಿ ಸರಕಾರ ಹಲವು ರಿಯಾಯಿತಿ/ಅನುಕೂಲಗಳನ್ನು ನೀಡುತ್ತದೆ. ಆದರೆ ರಫ್ತಿನ ಹೆಸರಿನಲ್ಲಿ ಎಂತೆಂತಹ ಮೋಸ ನಡೆಯುತ್ತದೆ ಎಂಬುದು ಬಹಳ ಗಂಭೀರ ವಿಷಯ.

ಸಿಎಜಿಯವರ ಒಂದು ವರದಿ ರಫ್ತಿನ ಹೆಸರಿನಲ್ಲಿ ನಡೆವ ಮೋಸವನ್ನು ಬಯಲಿಗೆಳೆದಿದೆ. ರಫ್ತಿನ ಹೆಸರಿನಲ್ಲಿ ಸರಕಾರಿ ಖಜಾನೆಗೆ 1991-92 ರ ಸಾಲಿನಿಂದ 1995-96 ರ ಸಾಲಿನವರೆಗೆ ಆಗಿರುವ ಮೋಸ 1400 ಕೋಟಿ ರೂಪಾಯಿಗಳಷ್ಟಂತೆ.

ರಫ್ತುದಾರರಿಗೆ ಅವಶ್ಯವಾದ ಯಂತ್ರೋಪಕರಣಗಳನ್ನು ಆಮದು ಮಾಡಲು ಆಮದು ಸುಂಕ ವಿನಾಯಿತಿ ನೀಡಲಾಗುತ್ತದೆ. ಅವರು ಆಮದಾದ ನಿರ್ದಿಷ್ಟ ಅವಧಿಯಲ್ಲಿ ಆಮದಿನ ಬೆಲೆಯಷ್ಟು ರಫ್ತು ಮಾಡಬೇಕೆಂಬ ಷರತ್ತಿನ ಮೇಲೆ.

ಹೀಗೆ 1,13,000 ಕೋಟಿ ರೂಪಾಯಿಗಳ ಬೆಲೆಯ ಲೈಸೆನ್ಸ್ ನೀಡಲಾಗಿದೆಯಂತೆ. ಆದರೆ ಬರೀ 58000 ಕೋಟಿ ರೂಪಾಯಿಗಳ ಲೈಸೆನ್ಸ್ ಪಡೆದವರು ಮಾತ್ರ ರಫ್ತು ಮಾಡುತ್ತಿದ್ದಾರಂತೆ.

ಇಲ್ಲಿ ಆಮದು ಸುಂಕ ರಿಯಾಯಿತಿಯಿಂದ ಸರಕಾರದ ಬೊಕ್ಕಸಕ್ಕೆ ನಷ್ಟವಷ್ಟೆ ಅಲ್ಲ. ದೇಶೀ ಉದ್ದಿಮೆಗೂ ಇದರಿಂದ ನಷ್ಟ. ಯಾಕೆಂದರೆ ರಫ್ತು ಮಾಡದಿರುವ ಸರಕು ದೇಶೀ ಮಾರುಕಟ್ಟೆಗೇ ಬಂದು ದೇಶೀ ಸರಕಿಗೆ ಸ್ಪರ್ಧೆ ನೀಡುತ್ತದೆ.

ಸಿಎಜಿ ನಡೆಸಿದ ಒಂದು ಸರ್ವೇಕ್ಷಣೆಯ ಪ್ರಕಾರ 2011 ಕಂಪನಿಗಳಲ್ಲಿ ಶೇ 32 ರಷ್ಟು ಕಂಪನಿಗಳು ತಮ್ಮ ರಫ್ತು ನಿರ್ಬಂಧನೆಯನ್ನು ಸಾಧಿಸಿಲ್ಲ. ದೇಶೀ ಅಕ್ರಿಲಿಕ್ ಫೈಬರ್ ಮತ್ತು ಕಾಗದ ಉದ್ದಿಮೆಗಳು ಇಂತಹ ಅಕ್ರಮಗಳಿಂದ ತೀರ ಸಂಕಷ್ಟದ ಪರಿಸ್ಥಿತಿಯಲ್ಲಿವೆಯಂತೆ.

ರಫ್ತಿನ ಹೆಸರಿನಲ್ಲಿ ಇಂತಹ ಮೋಸಗಳು ನಡೆಯುತ್ತಿದ್ದರೂ ಇನ್ನೂ ಇವರಿಗೆ ರಿಯಾಯಿತಿ/ವಿಶೇಷ ಸವಲತ್ತುಗಳು!! ಇದೇ ಉದಾರೀಕರಣದ ಪರಿ.

# ವಿದ್ಯುತ್‌ವಲಯದ ವ್ಯಥೆಗಳು

ಯಾವುದೇ ದೇಶದ ಔದ್ಯಮೀಕರಣ/ಅಭಿವೃದ್ಧಿಗೆ ವಿದ್ಯುತ್ ಬಹಳ ಮುಖ್ಯವಾದದ್ದು. ವಿದ್ಯುತ್ ಕೊರತೆ ಅನುಭವಿಸುವ ದೇಶ ಗಾಢಾಂದಕಾರದ ರುಚಿ ಕಾಣಬೇಕಾಗುತ್ತದೆ. ಆದ್ದರಿಂದ ದೇಶದ ಅಭಿವೃದ್ಧಿಯನ್ನು ಯೋಜಿಸುವವರು ವಿದ್ಯುತ್ತಿಗೆ ಅತಿಹೆಚ್ಚು ಪ್ರಾಮುಖ್ಯತೆ ನೀಡಬೇಕಾಗುತ್ತದೆ.

ಇಂದು ಭಾರತ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ. ಇಂತಹ ಸಮಯದಲ್ಲಿ ಉದಾರೀಕರಣ ಬಂದಿರುವುದರಿಂದ ಖಾಸಗಿಯವರು ಅದರಲ್ಲೂ ಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶದಲ್ಲಿ ಹಲವು ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮಾತು ಪ್ರಚಲಿತದಲ್ಲಿದೆ. ಈ ನೀತಿ ಎಂತ ಮುರುಕ ನೀತಿ ಎಂಬುದು ಎನ್ರಾನ್, ಕೊಜೆಂಟ್ರಿಕ್ಸ್‌ಗಳಿಂದ ಆಗುತ್ತಿರುವ ಅವಾಂತರಗಳಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಈ ಉದಾರೀಕರಣ ಬಂದು ಆರು ವರ್ಷಗಳೇ ಸಂದಿದ್ದರೂ ಈ ಬಹುರಾಷ್ಟ್ರೀಯ ಕಂಪನಿಗಳು(ಇವರಿಗೆ ಕನಿಷ್ಟ ಪ್ರತಿಫಲದ ಕೌಂಟರ್ ಗ್ಯಾರಂಟಿ ಯನ್ನು ಸಹ ಕೇಂದ್ರ ಸರಕಾರ ನೀಡಿದೆ) ಒಂದೇ ಒಂದು ಯೂನಿಟ್ ವಿದ್ಯುತ್ ಉತ್ಪಾದಿಸಲಾಗಿಲ್ಲ. ದೇಶದ ವಿದ್ಯುತ್ ವಲಯದಲ್ಲಿ ಹಲವು ಸಮಸ್ಯೆಗಳಿವೆ. ಉದಾರೀಕರಣದಿಂದಾಗಿ ಈ ವಲಯ ಅಲ್ಲೋಲ ಕಲ್ಲೋಲವಾಗಿದೆ.

ಈ ವಲಯದ ಸಮಸ್ಯೆಗಳನ್ನು ಚರ್ಚಿಸಲು ಮಾರ್ಚಿ 3 ಮತ್ತು 4 ರಂದು ನವದೆಹಲಿಯಲ್ಲಿ ಕೇಂದ್ರ ಶಕ್ತಿ ಪ್ರಾಧಿಕಾರ (ಸೆಂಟ್ರಲ್ ಎನರ್ಜಿ ಅಥಾರಿಟಿ-ಸಿಇಎ) ಮಾಜಿ ಸದಸ್ಯರ ಕೇಂದ್ರ ಯೋಜನಾ ಆಯೋಗದ ತಜ್ಞರುಗಳ ಕಾರ್ಯಾಗಾರ ವೊಂದನ್ನು ದೆಹಲಿ ವಿಜ್ಞಾನ ವೇದಿಕೆ ಮತ್ತು ವಿದ್ಯುತ್ತಿನ ಮೇಲಿನ 'ರಾಷ್ಟ್ರೀಯ ಕಾರ್ಯ ಗುಂಪು' ಮತ್ತು ಜನತೆಯ ಪುನರುಜ್ಜೀವನ ಮತ್ತು ಸಶಕ್ತೀಕರಣದ ಕ್ರಿಯಾ ಸಮಿತಿ ಏರ್ಪಡಿಸಿದ್ದವು. ಕೇಂದ್ರ ಯೋಜನಾ ಆಯೋಗದ ಸದಸ್ಯ(ಶಕ್ತಿ/ವಿದ್ಯುತ್)ಡಾ|| ಎಂ.ಆರ್ ಶ್ರೀನಿವಾಸನ್, ಕೇಂದ್ರ ಎನರ್ಜಿ ಪ್ರಾಧಿಕಾರದ ಹಿಂದಿನ ಅಧ್ಯಕ್ಷ ಎಂ.ಪಿ.ದೇಗ್ ಸಹ ಮಾತನಾಡಿದರು.

ಡಾ|| ಶ್ರೀನಿವಾಸನ್ ಮಾತನಾಡುತ್ತಾ ಕೇಂದ್ರ ಯೋಜನಾ ಆಯೋಗವನ್ನೇ ಶಕ್ತಿ ಹೀನ ಗೊಳಿಸಲಾಗಿದೆ ಎಂದರು. ಇದರಿಂದಾಗಿ ಯೋಜನೆ ಎನ್ನುವುದು ಪಟ್ಟಭದ್ರರ ಹಿತಕಾಯುವಂತಾಗಿದೆ. ಹಾಗೆಯೇ ರಾಜ್ಯ ವಿದ್ಯುತ್ ಮಂಡಳಿಗಳನ್ನು ನಿರ್ಜೀವ ಗೊಳಿಸುತ್ತಿರುವುದನ್ನು ಅವರು ಟೀಕಿಸಿದರು. ಹಲವು ಯೋಜನೆಗಳನ್ನು ತುಟ್ಟಿಯಾದ ಹೈಡ್ರೋಕಾರ್ಬನ್‌ಗಳ ಬಳಕೆಯಿಂದ ತಿರುಚುತ್ತಿರುವುದನ್ನೂ ಅವರು ಟೀಕಿಸಿದರು. ಸದ್ಯದ ವಿದ್ಯುತ್ ನೀತಿಗಳನ್ನು ಬದಲಾಯಿಸದೇ ಹೋದಲ್ಲಿ ದೇಶ ದೊಡ್ಡ ತೊಂದರೆಗೊಳಗಾಗುತ್ತದೆ ಎಂದರು. ಸಿಇಎ ಒಪ್ಪಿಗೆ ನೀಡಿದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ವಿಪರೀತ ವಿಳಂಬವಾಗುತ್ತಿದೆ ಎಂದರು.

ದೇಶದ ವಿದ್ಯುತ್ ಸಮಸ್ಯೆಗಳನ್ನು ಅನಾವಶ್ಯಕವಾಗಿ ಅತಿಶಯ ಗೊಳಿಸ ಲಾಗುತ್ತಿದೆ ಎಂಬ ನಿರ್ಧಾರಕ್ಕೆ ಕಾರ್ಯಗಾರ ಬಂದಿತು. ವಿವಿಧ ವಿದ್ಯುತ್ ಮಂಡಳಿಗಳು/ ಪ್ರಾಧಿಕಾರಗಳನ್ನು ನಿರ್ವೀರ್ಯಗೊಳಿಸುವ ಬದಲು ಅವುಗಳನ್ನು ಸಶಕ್ತಗೊಳಿಸು ವುದರಿಂದ ಈ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದೆಂಬ ಅಭಿಪ್ರಾಯಕ್ಕೆ ಕಾರ್ಯಾಗಾರ ಬಂದಿತು. ಉತ್ಪಾದನೆಗಿಂತ ಹಂಚಿಕೆಯಲ್ಲಿನ ನಷ್ಟದಿಂದ ವಿದ್ಯುತ್ ಕೊರತೆ ಉಂಟಾಗುತ್ತಿದೆ. ಒಂಭತ್ತನೇ ಯೋಜನೆ ಈ ಸಮಸ್ಯೆಯ ಬಗ್ಗೆ ಗಮನ ಹರಿಸ ಬೇಕು. ಖಾಸಗೀಕರಣ ಇದಕ್ಕೆ ಸರಿಯಾದ ಉತ್ತರವಲ್ಲ.

ಕಾರ್ಯಾಗಾರ 'ವಿದ್ಯುತ್ ಕಾಯಿದೆ'ಯ ಕರಡನ್ನು ವಿರೋಧಿಸಿತು. ಕನಿಷ್ಟ ರಾಷ್ಟ್ರೀಯ ಕ್ರಿಯಾ ಯೋಜನೆ ವಿದ್ಯುತ್ ವಲಯಗಳಲ್ಲಿ ಸರಕಾರದ ಪಾತ್ರವನ್ನೇ ನಗಣ್ಯಗೊಳಿಸುತ್ತಿರುವುದನ್ನೂ ಅದು ವಿರೋಧಿಸಿತು. ಈ ಕ್ರಮಗಳನ್ನು ಜನ ಪ್ರತಿನಿಧಿ ಸಭೆಗಳಲ್ಲಿ ಮತ್ತು ಹೊರಗೆ ಚರ್ಚಿಸದೇ ಹೋದಲ್ಲಿ ದೇಶ ಸಮಸ್ಯೆಗಳ ಕೂಪದಲ್ಲಿ ಬೀಳುತ್ತದೆ ಎಂದು ಅದು ಎಚ್ಚರಿಸಿತು.

**ಈ ಕಾರ್ಯಾಗಾರದ ಕೆಲವು ಮುಖ್ಯ ಶಿಫಾರಸ್ಸುಗಳು**

- *ವಿದ್ಯುತ್ ಬಿಕ್ಕಟ್ಟನ್ನು ಅನಾವಶ್ಯಕವಾಗಿ ಅತಿಶಯಗೊಳಿಸಲಾಗುತ್ತಿದೆ. ಖಾಸಗೀ ಕರಣದ ಪ್ರತಿಪಾದನೆಗಾಗಿ ಇದನ್ನು ಮಾಡ ಲಾಗುತ್ತಿದೆ. ಸರಿಯಾದ ನೀತಿಗಳಿಂದ ಈ ಬಿಕ್ಕಟ್ಟನ್ನು ಪರಿಹರಿಸಲು ಸಾಧ್ಯ.*
- *ವಿದ್ಯುತ್ ವಲಯವನ್ನು ಖಾಸಗಿಯವರಿಗೆ ಮತ್ತು ವಿದೇಶಿಯರಿಗೆ ತೆರೆಯುವುದರಿಂದ ದೇಶೀ ತಂತ್ರಜ್ಞಾನ ಪರಿಣತಿ ನಿರ್ಲಕ್ಷ್ಯಕ್ಕೊಳಗಾಗುತ್ತದೆ. ಬೆಲೆಗಳು ಗಗನಕ್ಕೇರುತ್ತವೆ. ಆದ್ದರಿಂದ ಇದನ್ನು ಪ್ರತಿರೋಧಿಸಬೇಕು.*
- *ಸಿಇಎ ಯಂತಹ ಸಂಸ್ಥೆಗಳನ್ನು ಇನ್ನೂ ಸಶಕ್ತಗೊಳಿಸಬೇಕು.*
- *ವಿದ್ಯುತ್ ವಲಯದಲ್ಲಿ ತೀವ್ರ ಸುಧಾರಣೆಗಳು ಆಗಬೇಕು. ವಿದ್ಯುತ್ತನ್ನು ಲೆಕ್ಕವಿಡದೇ ಕೃಷಿ ನೀರಾವರಿಗೆ ನೀಡುವುದನ್ನು ಕೈ ಬಿಡಬೇಕು. ಯಾಕೆಂದರೆ ಇದರಿಂದ ವಿದ್ಯುತ್ ಕಳವು ಹೆಚ್ಚುತ್ತದೆ.*
- *ವಿದ್ಯುತ್ ದರದ ಸುಧಾರಣೆಯೂ ಆಗಿ ಅವಶ್ಯವಿದ್ದರೆ ಕೃಷಿಗೆ ಸಹಾಯಧನದ ಮೂಲಕ ವಿದ್ಯುತ್ ನೀಡಬೇಕು. ವಿದ್ಯುತ್ ಹಂಚಿಕೆ ಯಲ್ಲಿನ ನಷ್ಟವನ್ನು ತಡೆಯಬೇಕು.*
- *ವಿದ್ಯುತ್ ಕೊರತೆ ಅತಿಬೇಡಿಕೆ ಸಮಯದಲ್ಲಿ ಮಾತ್ರ ಕಂಡು ಬರುತ್ತದೆ. ಇದನ್ನು ಶೀಘ್ರವಾಗಿ ಚಲಿಸುವ/ನಿಲ್ಲಿಸುವ ಸಾಧ್ಯತೆಯಿರುವ ಜನ ವಿದ್ಯತ್ ಯೋಜನೆಗಳಿಂದ ಎದುರಿಸ ಬಹುದು. ಆದರೆ ಭಾರತದಲ್ಲಿ ಈ ಮೂಲವನ್ನು ಸರಿಯಾಗಿ ಬಳಸಿಕೊಂಡಿಲ್ಲ.*
- *ಭಾರತ ದೇಶದಲ್ಲೇ ಅತಿದೊಡ್ಡ ವಿದ್ಯುತ್ ವ್ಯವಸ್ಥೆಯನ್ನು ಹೊಂದಿದೆ. ಸ್ವಾತಂತ್ರ್ಯಾನಂತರ ದೇಶ ಅತ್ಯುತ್ತಮ ವಿದ್ಯುತ್ ಯಂತ್ರಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಆದರೆ ಈಗಿನ ನೀತಿಗಳು ಈ ಸಾಮರ್ಥ್ಯ ಗಳನ್ನೆಲ್ಲ ನಿರ್ಲಕ್ಷಿಸುತ್ತಿದೆ. ವಿದೇಶಿ ಉತ್ಪಾದಕ ರಿಗೆ ಮಣೆ ಹಾಕಲಾಗುತ್ತಿದೆ.*
- *ಖಾಸಗಿಯವರು ಸರಕಾರಿ ವಲಯದ ಉತ್ಪಾದನೆಗೆ ತಮ್ಮದನ್ನೂ ಸೇರಿಸುವಂತಾಗಬೇಕೇ ಹೊರತು ಪೂರ್ತಿ ಯಾಗಿ ಖಾಸಗಿಯವರ ಮೇಲೆ ಅವಲಂಬಿಸುವಂತಾಗಬಾರದು.*
- *ರಾಜ್ಯ ವಿದ್ಯುತ್ ಮಂಡಳಿಗಳಲ್ಲಿ ಅಶಿಸ್ತು, ಭ್ರಷ್ಟಾಚಾರ, ಗ್ರಾಹಕ ಸೇವೆಯಲ್ಲಿ ಕೊರತೆ ಇವೆಲ್ಲ ದೌರ್ಬಲ್ಯಗಳಿರುವುದು ನಿಜ. ಆದರೆ ಮಂಡಳಿಗಳನ್ನೇ ನಿರ್ಜೀವ ಗೊಳಿಸು ವುದರಿಂದ ಸಮಸ್ಯೆಗಳ ಪರಿಹಾರವಾಗು ವುದಿಲ್ಲ. ಇದನ್ನು ಲಾಭದಾಯಕ ಗೊಳಿಸುವ ಅವಶ್ಯಕತೆ ಇದೆ ಮತ್ತು ಅದು ಸಾಧ್ಯ.*
- *ಕೇಂದ್ರ ಸರಕಾರ ತಂದಿರುವ 'ಸಮಾನ ಕನಿಷ್ಟ ರಾಷ್ಟ್ರೀಯ ಕ್ರಿಯಾ ಯೋಜನೆ'ಯ ಕರಡಿನಲ್ಲಿ ಹಲವು ಗಂಭೀರ ದೋಷಗಳಿವೆ.*
- *250 ಮೇಗಾವ್ಯಾಟ್‌ಗಳಿಗಿಂತ ಕಡಿಮೆ ಉತ್ಪಾದನೆ ಇರುವ ಯೋಜನೆಗಳನ್ನು ಸಿಇಎಯ ಪರಿಶೀಲನೆಯಿಂದ ಹೊರಗಿಡುವುದು ಪ್ರತಿಗಾಮಿ ಕ್ರಮ.*
- *ವಿದ್ಯುತ್ ವಿತರಣೆಯನ್ನು ಖಾಸಗೀಕರಣ ಗೊಳಿಸುವುದರಿಂದ ಲಾಭವನ್ನು ಮಾತ್ರ ಖಾಸಗೀಕರಿಸಿ ಉಳಿದ ಸಮಸ್ಯೆಗಳನ್ನೆಲ್ಲ ನಿರ್ಲಕ್ಷಿಸಿದಂತಾಗುತ್ತದೆ.*
- *ಈ ವಲಯದಲ್ಲಿ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಗಳನ್ನು ಸೃಷ್ಟಿಸಲಾಗಿದ್ದು ಸಮಸ್ಯೆಗಳು ಬಹಳ ಸಂಕೀರ್ಣವಾಗಿವೆ. ಖಾಸಗೀಕರಣ ಈ ಸಮಸ್ಯೆಗಳಿಗೆ ಉತ್ತರ ನೀಡಲಾರದು.*

*ಈ ಎಲ್ಲಾ ವಿಷಯಗಳನ್ನು ರಾಷ್ಟ್ರ ಮಟ್ಟದಲ್ಲಿ ಚರ್ಚಿಸುವ ಅವಶ್ಯಕತೆ ಇದೆ.*




# ಬಿಹಾರದಲ್ಲಿ ಭೂಮಾಲಿಕರ ಅಟ್ಟಹಾಸ

ಬಿಹಾರದಲ್ಲಿ ಭೂಮಾಲಿಕರು ಮತ್ತೆ ತಮ್ಮ ಕರಾಳ ನರ್ತನವನ್ನು ಆರಂಭಿಸಿದ್ದಾರೆ. ಜಮೀನುದಾರರ ಅಟ್ಟಹಾಸಕ್ಕೆ 11 ಜನರು ಬಲಿಯಾಗಿದ್ದಾರೆ.

ಬಿಹಾರದ ಭೂ ಮಾಲಿಕರು ಬಡಜನರ, ಕೃಷಿ ಕೂಲಿಕಾರರ ನ್ಯಾಯಯುತ ಹೋರಾಟಗಳನ್ನು ದಮನಿಸಲು ಖಾಸಗಿ ಸೇನೆಗಳನ್ನು ರಚಿಸಿಕೊಂಡಿದ್ದಾರೆ. ರಣವೀರ ಪಡೆ ಎಂಬುದು ಅವುಗಳ ಪೈಕಿ ಒಂದರ ಹೆಸರು.

ಮಾರ್ಚ್ 23 ರ ರಾತ್ರಿ ರಣವೀರ ಪಡೆಯ ಶಸ್ತ್ರಸಜ್ಜಿತ ಗುಂಪೊಂದು ಬಿಹಾರದ ಹಬೀಸಪುರ ಗ್ರಾಮದ ಮೇಲೆ ದಾಳಿ ಮಾಡಿ ಒಂದು ಎಡಪಂಥೀಯ ಸಂಘಟನೆಯ 11 ಬೆಂಬಲಿಗರನ್ನು ಗುಂಡಿಕ್ಕಿ ಕೊಂದು ಹಾಕಿತು. ಹತ್ಯಾಕಾಂಡಕ್ಕೆ ಬಲಿಯಾದವರೆಲ್ಲರೂ ಪರಿಶಿಷ್ಟ ಜಾತಿಗೆ ಸೇರಿದವರು.

ತನ್ನದು ತುಳಿತಕ್ಕೊಳಗಾದವರ ಪರ ಸರಕಾರ ಎಂದು ಲಾಲೂಪ್ರಸಾದ್ ಯಾದವ್ ಎಷ್ಟೇ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರೂ ಕೊಬ್ಬಿದ ಭೂಮಾಲಿಕರ ಸೊಕ್ಕನ್ನುಅಡಗಿಸಲುಅವರಿಗೆಸಾಧ್ಯವಾಗಿಲ್ಲ.

ರಣವೀರ ಸೇನಾ ಪಡೆಯಿಂದ ಹತರಾದವರ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ, ಸರಕಾರಿ ನೌಕರಿ ಹಾಗೂ ವೃದ್ಧಾಪ್ಯ ವೇತನವನ್ನು ನೀಡುವುದಾಗಿ ಜನತಾದಳ ಸರಕಾರದ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ. ಇದು ತಾತ್ಕಾಲಿಕ ಪರಿಹಾರವೇ ಹೊರತು, ಬಿಹಾರವನ್ನು ಕಿತ್ತು ತಿನ್ನುತ್ತಿರುವ ಭೂ ಸಮಸ್ಯೆಗೆ ಶಾಶ್ವತ ಪರಿಹಾರವಲ್ಲ ಎಂಬುದನ್ನು ಲಾಲೂ ಅರಿಯಬೇಕು. ಭೂ ಸುಧಾರಣೆ ಕಾನೂನನ್ನು ಜಾರಿಗೆ ತರಲು ರಾಜ್ಯ ಹಿಂದೆ ಬಿದ್ದಿರುವುದೇ ಬಿಹಾರದಲ್ಲಿ ಆಗಾಗ ಜಮೀನುದಾರರು ಮತ್ತು ಭೂ ರಹಿತರ ನಡುವೆ ಘರ್ಷಣೆ ನಡೆಯಲು ಪ್ರಮುಖ ಕಾರಣವಾಗಿದೆ.

ರಾಜ್ಯದಲ್ಲಿ ಭಯದ ವಾತಾವರಣವನ್ನು ಸೃಷ್ಟಿಸುವ ಭೂಮಾಲಿಕರ ಖಾಸಗಿ ಸೇನೆಗಳನ್ನು ನಿಶ್ಶಸ್ತ್ರಗೊಳಿಸುವಂತೆ ಕೇಂದ್ರ ಸರಕಾರ ಬಿಹಾರ ಸರಕಾರ ಕ್ಕೆ ನೀಡಿರುವ ನಿರ್ದೇಶನವೇ ಇದೆ. ಆದರೂ ರಾಜ್ಯ ಸರಕಾರ ಅದನ್ನು ಅನುಷ್ಠಾನಗೊಳಿಸಿಲ್ಲ.

ಹಬೀಸಪುರ ಹತ್ಯಾಕಾಂಡ ಪಾಳೇಗಾರಿ ಹಾಗೂ ಕೋಮುವಾದಿಶಕ್ತಿಗಳಕೃತ್ಯ ಎಂದು ಮುಖ್ಯಮಂತ್ರಿಲಾಲೂಪ್ರಸಾದ್ ಯಾದವ್ ವರ್ಣಿಸಿದ್ದಾರೆ. ಹೌದು ಅದರಲ್ಲಿ ಅನುಮಾನವೇ ಇಲ್ಲ. ಆದರೆ ಪೂರ್ಣ ಅಧಿಕಾರ ಹೊಂದಿರುವ ನಿಮಗೆ ಆ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಡಲು ಇರುವ ಅಡ್ಡಿಯಾದರೂ ಏನು ಲಾಲೂಜಿ?

### ಬಿಜೆಪಿ ಶಾಮೀಲು?

ಹಬೀಸ್‌ಪುರ ಗ್ರಾಮದ ದಲಿತರ ಮೇಲೆ ಧಾಳಿ ಮಾಡಿದ ರಣವೀರ ಸೇನೆಯ ಹಂತಕರಿಗೆ ಬಿಹಾರದ ಬಿಜೆಪಿ ಮುಖಂಡರಿಬ್ಬರ ಪೋಷಣೆ, ಆಶ್ರಯ ವಿದೆ ಎಂಬುದು ಹಂತಕನ ವಿಚಾರಣೆಯಿಂದ ಬೆಳಕಿಗೆ ಬಂದಿರುವುದಾಗಿ ಬಿಹಾರ ಸರಕಾರ ಹೇಳಿಕೊಂಡಿದೆ. ಪಾಟ್ನಾದ ಮಾಜಿ ಬಿಜೆಪಿ ಎಂಪಿ ಹಾಗೂ ಒಬ್ಬ ಹಾಲಿ ಶಾಸಕ ರಣವೀರ ಪಡೆಗೆ ಎಲ್ಲಾ ರೀತಿಯ ಬೆಂಬಲ, ನೆರವು ನೀಡುತ್ತಿರುವುದಾಗಿ ಹೇಳಲಾಗಿದೆ. ಬಿಜೆಪಿಯ ಒಬ್ಬ ಉಪಾಧ್ಯಕ್ಷರು ಈ ಹತ್ಯಾಕಾಂಡಕ್ಕೂ ಬಿಜೆಪಿಗೂ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಆದರ ರಣವೀರ ಸೇನೆಯೊಂದಿಗೆ ಸಂಬಂಧದ ಬಗ್ಗೆ ಏನೂ ಹೇಳಿಲ್ಲ.

# ಬೇಹುಗಾರಿಕೆ ಪ್ರಕರಣದಲ್ಲಿ ಕಾಂಗ್ರೆಸ್(ಐ) ಮುಖಂಡ

ಬೇಹುಗಾರಿಕೆ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡನೇ? ಹೌದು. ಕೊಚ್ಚಿ ಬಂದರು ಪ್ರದೇಶಗಳ ನಕ್ಷೆ ತಯಾರಿಸಲು ಫ್ರಾನ್ಸ್‌ನ ಬೇಹುಗಾರಿಕೆ ತಂಡಕ್ಕೆ ಸಹಾಯ ನೀಡಿದ ಆರೋಪಕ್ಕೊಳಗಾಗಿರುವ ಕೇರಳದ ಕಾಂಗ್ರೆಸ್ ಮುಖಂಡ ಪ್ರೊಫೆಸರ್ ಕೆ.ವಿ.ಥಾಮಸ್ ವಿರುದ್ಧ ನ್ಯಾಯಾಲಯದಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ.

ಮಾಜಿ ಸಂಸತ್ ಸದಸ್ಯರಾದ ಥಾಮಸ್ ಕೇರಳ ಪ್ರದೇಶ ಕಾಂಗ್ರೆಸ್ (ಐ) ಖಜಾಂಚಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಹೌದು. ಆರೋಪ ಪಟ್ಟಿ ಸಲ್ಲಿಕೆಯಾಗಿರುವ ಹಿನ್ನೆಲೆಯಲ್ಲಿ ಅವರು ಈ ಎರಡೂ ಹುದ್ದೆಗಳಿಗೆ ರಾಜಿನಾಮೆ ನೀಡಿದ್ದಾರೆ.

ಕೊಚ್ಚಿ ಬಂದರು ಪ್ರದೇಶದ ಗುಪ್ತ ಸಮೀಕ್ಷೆಗೆ ಫ್ರೆಂಚ್ ಗೂಢಚಾರರ ತಂಡ 1995ರಲ್ಲಿ ಕೊಚ್ಚಿಗೆ ಬಂದಿತ್ತು. ನೌಕಾ ಪಡೆಯ ರಕ್ಷಣಾ ಕೇಂದ್ರಗಳು ಮತ್ತು ಸಬ್‌ಮೆರಿನ್(ಜಲಂತರ್ಗಾಮಿ)ಗಳು ಇಳಿಯುವ ತಾಣವನ್ನು ಗುರುತಿಸಿಕೊಳ್ಳುವುದು ಈ ತಂಡದ ಉದ್ದೇಶವಾಗಿದ್ದಿರಬೇಕು.

ಸಿಪಿಐ(ಎಂ) ಕೇರಳ ರಾಜ್ಯ ಸಮಿತಿಯ ದಿನಪತ್ರಿಕೆ 'ದೇಶಾಭಿಮಾನಿ' ಈ ಬೇಹುಗಾರಿಕೆ ಪ್ರಕರಣವನ್ನು ಮೊದಲಿಗೆ ಬೆಳಕಿಗೆ ತಂದಿತು. ರಾಜ್ಯ ಪೋಲೀಸರ ತನಿಖೆಯ ನಂತರ ಕೇರಳ ಸರಕಾರದ ಮಧ್ಯಪ್ರವೇಶದಿಂದಾಗಿ ಕೇಂದ್ರೀಯ ತನಿಖಾ ದಳ(ಸಿಬಿಐ)ಕ್ಕೆ ಹಸ್ತಾಂತರಗೊಂಡಿತು.

ಇದೀಗ ಹಲವು ತಿಂಗಳ ವಿಳಂಬದ ನಂತರ ನ್ಯಾಯಾಲಯಕ್ಕೆ ಸಿಬಿಐ ವರದಿ ಸಲ್ಲಿಸಿದೆ. ಕೊಚ್ಚಿ ಬಂದರಿನಲ್ಲಿ ವಿದೇಶಿ ಗೂಢಚಾರರು ಚಟುವಟಿಕೆಗಳನ್ನು ನಡೆಸಲು ಪ್ರೊ.ಥಾಮಸ್ ಎಲ್ಲಾ ರೀತಿಯ ನೆರವನ್ನು ಹಾಗೂ ಸೌಲಭ್ಯವನ್ನು ಕಲ್ಪಿಸಿದ್ದರು ಎಂದು ಈ ವರದಿಯಲ್ಲಿ ಹೇಳಲಾಗಿದೆ.

ಚುನಾವಣಾ ಸಮಯದಲ್ಲಿ ಕಾಂಗ್ರೆಸ್(ಐ) ಪಕ್ಷಕ್ಕೆ ಮುಜುಗರ ಆಗುವುದನ್ನು ತಪ್ಪಿಸುವುದಕ್ಕಾಗಿ ಆಗ ಕೇರಳದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಸಂಯುಕ್ತ ರಂಗ(ಯುಡಿಎಫ್) ಥಾಮಸ್‌ರನ್ನು ಬಚಾವು ಮಾಡಲು ಸಫಲವಾಗಿತ್ತು. ಆದರೆ ಕೇರಳ ಮತ್ತು ಕೇಂದ್ರದಲ್ಲಿ ಸರಕಾರಗಳು ಬದಲಾಗಿವೆ. ಅಲ್ಲದೆ ಸಾರ್ವಜನಿಕ ಒತ್ತಡವೂ ಬಲವಾಗಿದೆ. ಹೀಗಾಗಿ ಈ ಪ್ರಕರಣ ಮತ್ತೆ ನ್ಯಾಯಾಲಯದ ಮುಂದೆ ಬಂತು.

ಈ ಪ್ರಕರಣ ಸಾಮಾನ್ಯವಾದುದಲ್ಲ. ಇದಕ್ಕೆ ಗಂಭೀರ ಆಯಾಮಗಳಿವೆ. ಫ್ರೆಂಚ್ ಬೇಹುಗಾರರ ತಂಡ ರಕ್ಷಣಾ ಮಹತ್ವದ ಹಲವು ಸಮೀಕ್ಷೆಗಳನ್ನು ನಡೆಸಿದೆ ಹಾಗೂ ಸ್ಕೆಚ್‌ಗಳನ್ನು ತಯಾರಿಸಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ತಯಾರಿಸಲಾದ ಹೆಚ್ಚಿನ ಎಲ್ಲಾ ಸಮೀಕ್ಷೆ-ನಕ್ಷೆಗಳನ್ನು ಬೇಹುಗಾರಿಕೆ ತಂಡ ಫ್ರಾನ್ಸ್ ಸರಕಾರಕ್ಕೆ ರವಾನಿಸಿದೆ.

ಮಾರ್ಚ್ 22ರಂದು ಕಾಶ್ಮೀರ ಕಣಿವೆಯ ಚಿಕ್ಕ ಗ್ರಾಮ ಸಂಗ್ರಾಂಪುರ್‌ನಲ್ಲಿ ನಡೆದ ಉಗ್ರಗಾಮಿಗಳ ಧಾಳಿಗೆ 7 ಮಂದಿ ಬಲಿಯಾದರು. ಈ ಧಾಳಿಯ ವಿಶಿಷ್ಟತೆಯೆಂದರೆ ಹತರಾದವರು ಎಲ್ಲರೂ ಕಾಶ್ಮೀರಿ ಪಂಡಿತ ಕೋಮಿನವರು. ಸುಧಾರಿಸುತ್ತಿರುವ ಪರಿಸ್ಥಿತಿಯನ್ನು ಕಲುಷಿತಗೊಳಿಸುವ ದುರುದ್ದೇಶಪೂರ್ಣ ಧಾಳಿ ಇದು ಎಂದು ಎಲ್ಲರೂ ಹೇಳುತ್ತಿದ್ದಾರೆ. ಚಿತ್ರದಲ್ಲಿ ಹತರಾದವರ ಕುಟುಂಬದ ಒಬ್ಬ ಮಹಿಳೆಯನ್ನು ಮತ್ತೊಬ್ಬ ಮಹಿಳೆಯರು ಸಂತೈಸುತ್ತಿದ್ದಾರೆ. ರಾಷ್ಟ್ರಾದ್ಯಂತ ಎಲ್ಲರೂ ಈ ಧಾಳಿಯನ್ನು ಖಂಡಿಸಿದ್ದಾರೆ.



# ಪ್ರತಿದಿನವೂ ಹೊಸ ವಿಷಯ ಅರಿವಿಗೆ ಬಂತು............

ಪುಟ 2ರಿಂದ

ವಿದ್ಯಾರ್ಥಿ ಮುಖಂಡರು, ಎಸ್‌ಎಫ್‌ಐನ ಪದಾಧಿಕಾರಿಗಳು ಹಾಜರಿದ್ದರು. ನಾಲ್ಕುದಿನ ನಡೆದ ಈ ಸಮ್ಮೇಳನದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ 'ಮೇಳ' ಅಚ್ಚುಕಟ್ಟಾಗಿ ಸಂಘಟಿಸಲ್ಪಟ್ಟಿತ್ತು.

ಒಟ್ಟಿನಲ್ಲಿ ಎಸ್‌ಎಫ್‌ಐ ನ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಿದ ನನಗೆ ಕೆಲವೊಂದು ಅನಿಸಿಕೆ, ವಿಚಾರ, ಅನುಭವ, ಜವಾಬ್ದಾರಿಯ ಅರಿವು ಮೂಡಿತು. ಒಟ್ಟಾರೆ ವಿಚಾರವನ್ನು ಕ್ರೋಢೀಕರಿಸಿ ಹೇಳಬೇಕೆಂದರೆ "ಯಾವುದೇ ಸಾಮಾಜಿಕ ಹಾಗೂ ರಾಜಕೀಯ ಕ್ರಾಂತಿಯು ಆರಂಭವಾಗುವುದಿದ್ದರೂ ಅದು ವಿಚಾರ ಕ್ರಾಂತಿ ಹಾಗೂ ಹೋರಾಟದಿಂದ ಶಕ್ಯ ಎಂದು ಎಲ್ಲ ಬುದ್ಧಿಜೀವಿಗಳು ಒಪ್ಪುತ್ತಾರೆ. ಏಕೆಂದರೆ ದಬ್ಬಾಳಿಕೆ ಅನ್ಯಾಯ, ಭ್ರಷ್ಟಾಚಾರ ಇರುವಲ್ಲಿ ಹೋರಾಟ ಅನಿವಾರ್ಯ. ಸುಶಿಕ್ಷಿತ ವಿದ್ಯಾರ್ಥಿಗಳಾದ ನಾವು ನಮ್ಮ ಸುತ್ತಲಿನ ಸಮಾಜದ ಪರಿವರ್ತನೆಗೆ ದುಡಿಯಬೇಕು. ಓದಿದ ನಾಲಿಗೆ ಸುಪುಷ್ಪಿತ ಹೃದಯವಂತಿಕೆಯ ಕಾರಂಜಿ ಎಂದರೆ ತಪ್ಪಿಲ್ಲ. ಓದು ಮತ್ತು ಹೋರಾಟ ಸಮಾನವಾಗಿ ಸಾಗಬೇಕಾದರೆ ಕೌಟುಂಬಿಕ ಅಡೆತಡೆಗಳು ಬಂದರೂ, ಮೂಲಭೂತವಾದಿಗಳು ಪ್ರಗತಿಗೆ ಅಡ್ಡಗೋಡೆಗಳಾದರೂ, ಹಳೆಯದು ಹೊಸದಕ್ಕೆ ದಾರಿ ಮಾಡಿ ಕೊಡಬೇಕಾದರೆ ನಾವು, ನಮ್ಮ ಮನಸ್ಸು ಎರಡೂ ನಿಶ್ಚಿತ ಗುರಿ ತಲುಪುವ ತನಕವೂ ಹೋರಾಡಬೇಕು. ಮೊಣಕಾಲುದ್ದದ ನೀರಿನಲ್ಲಿಳಿದರೆ ಮುತ್ತು ಸಿಗಬಲ್ಲದೆ? ಹಾಗೆಯೇ ದೇಶದಲ್ಲಿ ತಕ್ಷಣ ಬದಲಾವಣೆ ಜಾರಿದಿದ್ದರೂ ಹಂತಹಂತವಾಗಿ ಯಾದರೂ ನಾವು ಬಯಸಿದ ವ್ಯವಸ್ಥೆ, ರಾಜಕೀಯ ಸ್ಥಾನಮಾನ ಬಂದೇ ಬರುತ್ತದೆ ಎಂಬ ಆಶಾಭಾವ ಇಟ್ಟುಕೊಂಡು ನಮ್ಮ ಜವಾಬ್ದಾರಿಯನ್ನು ನಿಶ್ಚಿತ ನೆಲೆಯಲ್ಲಿ ಕಂಡುಕೊಳ್ಳಬೇಕು.

ಎಸ್‌ಎಫ್‌ಐ ವೈಜ್ಞಾನಿಕ ಸಮಾಜವಾದಕ್ಕಾಗಿ ಶ್ರಮಿಸುತ್ತಿದೆ. ಶಿಕ್ಷಣದ ನಿರ್ದಯ ವ್ಯಾಪಾರವನ್ನು, ಖಾಸಗೀ ಕರಣವನ್ನು ವಿರೋಧಿಸುತ್ತದೆ. ಜಾಗತೀಕರಣ, ಉದಾರೀಕರಣದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ವಿರೋಧಿ ಸುತ್ತದೆ. ದೇಶದ ಅಭಿವೃದ್ಧಿಯಲ್ಲಿ ಜನರ ಪಾಲಿದೆ ಎಂದು ಎಸ್‌ಎಫ್‌ಐ ಚೆನ್ನಾಗಿ ಅರಿತಿದೆ. ಹಲವಾರು ಜಾತಿ- ಜನಾಂಗ, ಭಾಷೆಯಿದ್ದರೂ ಬದುಕು ಇರುವುದು ಕಟ್ಟುವುದಕ್ಕೆ ವಿನಃ ಒಡೆಯುವುದಕ್ಕಲ್ಲ ಎಂದು ಗೊತ್ತಿದೆ. ಈ ದೇಶ ಕಟ್ಟಿದ ದುಡಿಯುವ ಕೈಗಳೇ ದೇಶದ ಪ್ರಗತಿಯ ಆಧಾರ, ಜೀವಾಳ ಎಂದು ಎಸ್‌ಎಫ್‌ಐ ಅಭ್ಯಸಿಸಿದೆ. ನ್ಯಾಯಯುತ ಬೇಡಿಕೆಗಳನ್ನಿಟ್ಟು ಹೋರಾಡಿ ಸಾಯುವುದು, ಗುಲಾಮನಾಗಿ ಬಾಳುವುದಕ್ಕಿಂತ ಯೋಗ್ಯ ಎಂದು ಈ 26 ವರ್ಷಗಳಲ್ಲಿ ರಾಷ್ಟ್ರಕ್ಕೆ ತಿಳಿಸಿಕೊಟ್ಟ ಭವ್ಯ ಪರಂಪರೆ ಎಸ್‌ಎಫ್‌ಐಗೆ ಇದೆ. ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ, ಜಾತಿ-ಧರ್ಮ, ಭಾಷೆ-ಪ್ರಾಂತಗಳೆಂಬ ಭೇದ ಮನಸ್ಸಿನ ಸೀಮೆ ದಾಟಿ ಸಮಾನತೆಗಾಗಿ, ಪ್ರಗತಿಗಾಗಿ ಎಸ್‌ಎಫ್‌ಐ ಹೋರಾಡುತ್ತಿದೆ.

564 ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ಕರ್ನಾಟಕದಿಂದ ಒಟ್ಟಾರೆಯಾಗಿ 25 ಜನ ಸಂಗಾತಿಗಳು ಭಾಗವಹಿಸಿದ್ದರು. 1993ರ ತಿರುವನಂತಪುರದಲ್ಲಿ ನಡೆದ 8ನೇ ಅ.ಭಾ. ಸಮ್ಮೇಳನದಿಂದ ಈ ಸಮ್ಮೇಳನಕ್ಕೆ 2,56,967 ಸದಸ್ಯತ್ವ ಹೆಚ್ಚಾಗಿದ್ದು 24,95,194 ಸದಸ್ಯತ್ವಕ್ಕೆ ಈ ಸಮ್ಮೇಳನದಲ್ಲಿ ಅಂತಿಮಗೊಳಿಸಲಾಯಿತು. 12 ವಿದ್ಯಾರ್ಥಿನಿಯರೂ ಸೇರಿದಂತೆ 69 ಪ್ರತಿನಿಧಿಗಳು ಸುಮಾರು 8 ಗಂಟೆಗಳ ಕಾಲ ವರದಿ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದರು.

**ಸೌಹಾರ್ದ ಅತಿಥಿಗಳು**

ಬರ್ಮಾದ ಮೂರು ಸಂಘಟನೆಗಳ 9 ಪ್ರತಿನಿಧಿಗಳು ಮತ್ತು ಬಾಂಗ್ಲಾದೇಶದ ಇಬ್ಬರು ಪ್ರತ್ಯೇಕ ಅಧಿವೇಶನದಲ್ಲಿ ಮಾತನಾಡಿದರು. ತುನ್ ತುನ್ ಲಿ(ಆಲ್ ಬರ್ಮಾ ಸ್ಟೂಡೆಂಟ್ಸ್ ಯೂನಿಯನ್) ಅಬು ರೆಹಮಾನ್ ಮಾಸೂದ್(ಸ್ಟೂಡೆಂಟ್ಸ್ ಯೂನಿಟಿ ಆಫ್ ಬಾಂಗ್ಲಾದೇಶ್) ಅಲಿ ರುಸ್ತುಂ ಕೋಕನ್(ಬಾಂಗ್ಲಾದೇಶ್ ಸ್ಟೂಡೆಂಟ್ಸ್ ಯೂನಿಯನ್)ಇವರು ತಮ್ಮ ದೇಶಗಳ ವಿದ್ಯಾರ್ಥಿ ಚಳುವಳಿಯ ಕುರಿತು ಮಾತನಾಡಿದರು.

ಮತ್ತೊಂದು ಅಧಿವೇಶನದಲ್ಲಿ ಎಐಎಸ್‌ಎಫ್‌ನ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸರಾವ್, ಎಐಎಸ್‌ಬಿಯ ಪ್ರಧಾನ ಕಾರ್ಯದರ್ಶಿ ಜಿ.ದೇವರಾಜನ್ ಶುಭಕೋರಿ ಮಾತನಾಡಿದರು.

**ಕರ್ನಾಟಕದಿಂದ ಕೇಂದ್ರ ಕಾರ್ಯಕಾರಿ ಸಮಿತಿಗೆ ಆಯ್ಕೆಯಾದವರು**

1. ಪ್ರಕಾಶ್.ಕೆ., 2.ಉಮೇಶ್ ಕೆ.ಎಸ್, 3. ಚಂದ್ರಪ್ಪ ಹೊಸ್ಕೇರಾ, 4. ಯುವರಾಜ್ ಕಂಬಾಳಿ ಮಠ್.

ಪ್ರಕಾಶ್‌ಕೆ. ಇವರು ಅಖಿಲ ಭಾರತ ಸಹ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ.

- ಯಮುನಾ ಗಾಂವ್ಕರ್

# ಕೆಇಬಿ ಅರೆಕಾಲಿಕ ನೌಕರರನ್ನು ಖಾಯಂಗೊಳಿಸಲು ಒತ್ತಾಯಿಸಿ ಕೋಲಾರದಲ್ಲಿ ಪ್ರತಿಭಟನಾ ಪ್ರದರ್ಶನ

ಕೆಇಬಿ ಅರೆಕಾಲಿಕ ನೌಕರರನ್ನು ಸೇವೆಯಿಂದ ತೆಗೆಯುವುದನ್ನು ಕೈ ಬಿಟ್ಟು ಪೂರ್ಣ ಸೇವೆಗೆ ಕೆಲಸದಲ್ಲಿ ಮುಂದುವರಿಸಬೇಕು, ನೌಕರರಿಗೆ ಸೇವಾ ಭದ್ರತೆ ನೀಡಿ ಖಾಯಂಗೊಳಿಸಬೇಕು ಹಾಗೂ ಉದ್ಯೋಗ ವಿನಿಮಯ ಕೇಂದ್ರದಿಂದ ಅರೆಕಾಲಿಕ ನೌಕರರ ಸ್ಥಾನದಲ್ಲಿ ಹೊಸ ಸಂದರ್ಶನ ನೀಡುವುದನ್ನು ಕೈ ಬಿಡಬೇಕೆಂದು ಒತ್ತಾಯಿಸಿ ಮಾರ್ಚ್ 2 ರಂದು ಕೋಲಾರ ಜಿಲ್ಲಾ ಕೇಂದ್ರದಲ್ಲಿ ಪ್ರವಾಸಿಮಂದಿರದಿಂದ ಜಿಲ್ಲಾಧಿಕಾರಿ ಕಛೇರಿಯವರೆಗೆ ನೂರಕ್ಕೂ ಹೆಚ್ಚಿನ ನೌಕರರು ಪ್ರತಿಭಟನಾ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ವಿವಿಧ ತುರ್ತು ಕೆಲಸಗಳಿಗಾಗಿ 1992 ರಿಂದ ಮಾನ್‌ಸೂನ್ ಗ್ಯಾಂಗ್, ಸ್ಟಾರಂ ಗ್ಯಾಂಗ್, ಎಂ.ಯು.ಎಸ್.ಎಸ್.ಸ್ಟೇಶನ್ ಕಾರ್ಮಿಕರಾಗಿ ನೌಕರರನ್ನು ನೇಮಕ ಮಾಡಿಕೊಂಡು ಇವರನ್ನು ಪೂರ್ಣ ಸೇವೆಯಲ್ಲಿ ಮುಂದುವರಿಸುವುದನ್ನು ಕೈ ಬಿಟ್ಟು, ಕಾರ್ಮಿಕರ ಕಾನೂನು ಕಾಯ್ದೆಯಿಂದ ಇವರಿಗೆ ಸೌಲಭ್ಯಗಳು ಸಿಗದಂತೆ 90 ದಿನಗಳಿಗಿಂತ ಮುಂಚಿತವಾಗಿಯೇ ಕೆಲಸದಿಂದ ಕೈ ಬಿಡುವ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು.

ಈಗಾಗಲೇ 5 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಅರೆಕಾಲಿಕರನ್ನು ಖಾಯಂಗೊಳಿಸದೇ ಅವರನ್ನು ತೆಗೆದು ಹಾಕಿ ಆ ಸ್ಥಾನಗಳನ್ನು ತುಂಬಲು ವಿದ್ಯುಚ್ಛಕ್ತಿ ಮಂಡಳಿ ಮತ್ತು ಸರಕಾರ ಉದ್ಯೋಗ ವಿನಿಮಯ ಕೇಂದ್ರದಿಂದ ನೇರ ನೇಮಕಾತಿಗಾಗಿ ಸಂದರ್ಶನ ನೀಡುತ್ತಿರುವುದನ್ನು ಕೈ ಬಿಟ್ಟು ವಯೋಮಿತಿ ಮೀರಿ ಬೇರೆಲ್ಲೂ ಕೆಲಸ ಸಿಗದೆ ತ್ರಿಶಂಕು ಸ್ಥಿತಿಯಲ್ಲಿರುವ ಅರೆಕಾಲಿಕ ನೌಕರರನ್ನು ಸೇವೆಯಲ್ಲಿಮುಂದುವರಿಸಿಖಾಯಂಗೊಳಿಸಲು ಪ್ರತಿಭಟನಾಕಾರರು ಸರಕಾರವನ್ನು ಒತ್ತಾಯಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ಮುಖಂಡರಾದ ಗಾಂಧಿನಗರ ನಾರಾಯಣಸ್ವಾಮಿ, ಅರೆಕಾಲಿಕ ನೌಕರರ ಸಂಘದ ಜಿಲ್ಲಾ ಗೌರವಾಧ್ಯಕ್ಷರಾದ ಬಿ.ಆಂಜನೇಯಲು, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಹ ಕಾರ್ಯದರ್ಶಿಗಳಾದ ಪಿ.ಆರ್.ಸೂರ್ಯನಾರಾಯಣ, ಹೋಳೂರು ಶಂಕರ್, ಎಸ್‌ಎಫ್‌ಐ ಜಿಲ್ಲಾ ಮುಖಂಡರುಗಳಾದ ಕೆ.ಎಸ್.ನಾರಾಯಣಸ್ವಾಮಿ, ರೊಜೇರಹಳ್ಳಿ ನಾಗಭೂಷಣ ಮಾತನಾಡಿದರು.

ಸಿಐಟಿಯುಗೆ ಸೇರಿದ ಕರ್ನಾಟಕ ರಾಜ್ಯ ಕೆಇಬಿ ಅರೆಕಾಲಿಕ ನೌಕರರ ಸಂಘದ ನೂತನ ಕೋಲಾರ ಜಿಲ್ಲಾಸಮಿತಿಯ ಅಧ್ಯಕ್ಷರಾಗಿ ಎಂ.ಗೋಪಾಲ್ ಹಾಗೂ ಕಾರ್ಯದರ್ಶಿಯಾಗಿ ಲಕ್ಷ್ಮೀಕಾಂತ್ ಆರಿಸಲ್ಪಟ್ಟರು. 17 ಸದಸ್ಯರಿರುವ ಜಿಲ್ಲಾ ಸಮಿತಿಯನ್ನೂ ಆರಿಸಲಾಯಿತು.

# ವಿಶ್ವಸಂಸ್ಥೆಯಲ್ಲಿ ಇಸ್ರೇಲಿಗೆ ಬೆಂಬಲದಲ್ಲಿ ಅಮೆರಿಕಾ ಏಕಾಕಿ

ವಿಶ್ವಸಂಸ್ಥೆಯಲ್ಲಿ ಅಮೆರಿಕದ 'ಏಕಮಾತ್ರ ಸೂಪರ್ ಪವರ್' ಧೋರಣೆಯಿಂದ ಹಲವು ವಿಷಯಗಳಲ್ಲಿ ಏಕಾಂಗಿಯಾಗುತ್ತಿದೆ. ಅಮೆರಿಕ ಬೆಂಬಲಿತ ಅಭ್ಯರ್ಥಿಯಾದರೂ ಹೊಸ ಪ್ರಧಾನ ಕಾರ್ಯದರ್ಶಿ ಈಗಾಗಲೇ ಅಮೆರಿಕದ ವಂತಿಗೆ ಬಾಕಿ ಬಗ್ಗೆ ಸಾರ್ವಜನಿಕವಾಗಿಯೂ ತಗಾದೆಗೆ ತೆಗೆದುಕೊಂಡಿದ್ದಾರೆ. ಇತ್ತೀಚೆಗೆ ಇಸ್ರೇಲ್ ಶಾಂತಿ ಒಪ್ಪಂದವನ್ನು ಉಲ್ಲಂಘಿಸಿ, ಪೂರ್ವ ಜೆರೂಸಲಂನಲ್ಲಿ ಹೊಸ ಯಹೂದಿ ಕಾಲೋನಿಗಳನ್ನು ಕಟ್ಟಿ, ಹೊಸ ಶಾಂತಿ ಭಂಗ ಆರಂಭವಾಗಿದೆ. ಪ್ಯಾಲೆಸ್ಟೇನಿಯನ್ ಅಧ್ಯಕ್ಷ ಅರಾಫತ್ ಇದನ್ನು ತೀವ್ರವಾಗಿ ಪ್ರತಿಭಟಿಸಿದ್ದರೂ, ಇಸ್ರೇಲ್ ಇದನ್ನು ಮುಂದುವರಿಸಿದೆ. ಈ ಬಗ್ಗೆ ಯುರೋಪಿಯನ್ ದೇಶಗಳು ಇಸ್ರೇಲಿ ನೀತಿಯನ್ನು ಖಂಡಿಸಿ ಭದ್ರತಾ ಸಮಿತಿಯ ಮುಂದೆ ಒಂದು ನಿರ್ಣಯವನ್ನು ತಂದಿತ್ತು. ಇಸ್ರೇಲಿ ನೀತಿಯನ್ನು ಬಾಯಲ್ಲಿ ಖಂಡಿಸಿದರೂ, ಅಮೆರಿಕ ಈ ನಿರ್ಣಯ ಅಂಗೀಕೃತವಾಗದಂತೆ ವಿಟೋ ಚಲಾಯಿಸಿತು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮುಂದೆಯೂ ಇಂತಹ ನಿರ್ಣಯವನ್ನು ಯುರೋಪ್, ಏಶ್ಯಾ, ಆಫ್ರಿಕಾಗಳ 43 ದೇಶಗಳು ಮಂಡಿಸಿದವು. ಇಸ್ರೇಲಿನ ಕ್ರಮ ಖಂಡಿಸಿ, ಹೊಸ ಕಾಲೋನಿಗಳನ್ನು ತತ್‌ಕ್ಷಣ ನಿಲ್ಲಿಸಬೇಕೆನ್ನುವ ನಿರ್ಣಯವನ್ನು ಸಾಮಾನ್ಯ ಸಭೆ ಭಾರಿ ಬಹುಮತದಿಂದ ಅಂಗೀಕರಿಸಿತು. ನಿರ್ಣಯ 130 ದೇಶಗಳ ಬೆಂಬಲ ಗಳಿಸಿದರೆ, ಕೇವಲ ಎರಡು ದೇಶಗಳು ಈ ನಿರ್ಣಯದ ವಿರುದ್ಧ ಮತದಾನ ನೀಡಿದ್ದವು. ಒಂದು ಇಸ್ರೇಲ್ ಇನ್ನೊಂದು ಅಮೆರಿಕಾ. ಇಂತಹ ಮುಖಭಂಗ ಅಮೆರಿಕದ ಇಸ್ರೇಲಿ, ಕ್ಯೂಬಾ ನೀತಿಗೆ ಬಾರಿ ಬಾರಿಗೆ ಆಗುತ್ತಿದೆ. ಅಮೆರಿಕ 'ಅಂತಾರ್ರಾಷ್ಟ್ರೀಯ ಅಭಿಪ್ರಾಯ'ದಿಂದ ಎಷ್ಟು ಪ್ರತ್ಯೇಕವಾಗಿದೆ, ಏಕಾಕಿಯಾಗುತ್ತಿದೆ ಎಂದು ಇದೇ ತೋರಿಸುತ್ತದೆ.

ಇದೇ ಸಮಯದಲ್ಲಿ ವಿಶ್ವಸಂಸ್ಥೆ ಇನ್ನೊಂದು ನಿರ್ಣಯದಲ್ಲಿ ಜೋರ್ಡಾನ್‌ನ ಸೈನಿಕನೊಬ್ಬ ಏಳು ಇಸ್ರೇಲಿ ಸ್ಕೂಲ್ ಹುಡುಗಿಯರನ್ನು ಗುಂಡು ಹೊಡೆದು ಸಾಯಿಸಿದ್ದನ್ನು ಖಂಡಿಸಿದೆ. ಅಮೆರಿಕಾ ಈ ಘಟನೆ ಬಗ್ಗೆ ಸಾಕಷ್ಟು ಗದ್ದಲ ಮಾಡಿ, ತನ್ನ ಗೋಸುಂಬೆತನವನ್ನು ಪ್ರದರ್ಶಿಸಿದೆ. ಈ ಘಟನೆ ನಡೆದದ್ದು ಜೋರ್ಡಾನ್‌ನ ರಾಜಮನೆತನದ ಬಗ್ಗೆ ಇಸ್ರೇಲಿ ಮಂತ್ರಿಯೊಬ್ಬ ಸಾರ್ವಜನಿಕವಾಗಿ ಅವಮಾನಕಾರಿಯಾಗಿ ಮಾತನಾಡಿದ್ದು, ಹಾಗೂ ಜೋರ್ಡಾನ್‌ನ ಒಳಗೆ ಇರುವ ಒಂದು ವಿವಾದಿತ ಪ್ರದೇಶಕ್ಕೆ ಇಸ್ರೇಲಿ ಅಧಿಕಾರಿಗಳು ಪ್ರಚೋದನಕಾರಿಯಾಗಿ ಸ್ಕೂಲ್ ಹುಡುಗಿಯರ ಪಿಕ್‌ನಿಕ್ ಏರ್ಪಡಿಸಿದ್ದರ ಹಿನ್ನೆಲೆಯಲ್ಲಿ ಎಂಬುದನ್ನು ಅಮೆರಿಕನ್ ವಕ್ತಾರರು, ಸಾಮ್ರಾಜ್ಯಶಾಹಿ ಮಾಧ್ಯಮ ಮರೆಮಾಚಲು ಪ್ರಯತ್ನಿಸಿವೆ.

ಇದು ಸಾಲದೆಂಬಂತೆ ಇಸ್ರೇಲಿನ ತಪ್ಪುಗಳು ಅರಬರನ್ನು ರೊಚ್ಚಿಗೆಬ್ಬಿಸಿದರೂ ಅದು ಇಸ್ರೇಲಿನ ವಿರುದ್ಧ ಘರ್ಷಣೆ, ರಕ್ತಪಾತಕ್ಕೆ ನೆಪವಾಗಬಾರದು ಎಂದು ಅರಬರನ್ನು ಎಚ್ಚರಿಸಿದ್ದಾರೆ. ಅರಬ್ ಶಾಂತಿ ಸೂತ್ರ ಅಮೆರಿಕದ ದಲ್ಲಾಳಿತನದಲ್ಲಿ ದಿಕ್ಕುಗೆಡುತ್ತಿರುವುದರ ಬಗ್ಗೆ ಅರಿವಿದ್ದರೂ ಅಮೆರಿಕ ಇನ್ನೂ ಇಸ್ರೇಲಿನ ಪಾಪಗಳಿಗೆ ಕುರುಡಾಗಿ ಕೂತಿದೆ. ಇದು ಹೆಚ್ಚು ದಿನ ನಡೆಯಲಿಕ್ಕಿಲ್ಲ ಎಂಬುದು ಪ್ಯಾಲೆಸ್ಟೀನ್ PLOದ ಹಾಗೂ ಇತರ ಅರಾಫತ್-ವಿರೋಧಿ ಗುಂಪುಗಳು ಈ 'ಶಾಂತಿ' ಬಗ್ಗೆ ಪ್ರತಿಕ್ರಿಯೆಗಳನ್ನು ಯೋಜಿಸುತ್ತಿರುವುದು ಸೂಚಿಸುತ್ತದೆ. ಇಸ್ರೇಲಿನ ಜತೆ ಅಮೆರಿಕನ್ ಒತ್ತಡದ ಮೇಲೆ ಅದರ ಮೂಗಿನ ನೇರಕ್ಕೆ ಶಾಂತಿ ಕ್ರಮಗಳಿಗೆ ಒಪ್ಪುವುದರ ವಿರುದ್ಧ ಜೋರ್ಡಾನ್, ಸಿರಿಯಾ ಮುಂತಾದ ದೇಶದ ಮುಖ್ಯಸ್ಥರೂ ಜನರ ಕೋಪ ಎದುರಿಸುತ್ತಿದ್ದಾರೆ.

## ಲೋಕಸಂಚಾರ



ಶರತ್‌ಚಂದ್ರ

### 80% ಬಳಕೆ ವಸ್ತು ಆಮದು ಮಾಡುತ್ತಿರುವ ರಶ್ಯಾ

ಸೋವಿಯತ್ ವಿಘಟನೆಯ ನಂತರದ ಆರ್ಥಿಕ ಸ್ಥಿತಿಯಲ್ಲಿ ಕಳೆದ ಆರು ವರ್ಷದಲ್ಲಿ ರಶ್ಯಾ ಕೈಗಾರಿಕೆ ಇಳಿಮುಖವಾಗುತ್ತಿದೆ. ರಶ್ಯದ ಆರ್ಥಿಕ ಆರು ವರ್ಷಗಳಲ್ಲಿ ಸತತವಾಗಿ ಇಳಿಯುತ್ತಿದೆ. ಸೋವಿಯತ್ ಒಕ್ಕೂಟದ ಆ ದಿನಗಳಲ್ಲಿ ಎರಡನೇ ದೊಡ್ಡ ಆರ್ಥಿಕ, ಕೈಗಾರಿಕಾ ದೇಶವಾಗಿದ್ದ ದೇಶಕ್ಕೆ ಈ ಸ್ಥಿತಿಯ ಕಾರಣಗಳು ಎಲ್ಲರಿಗೂ ಸ್ಪಷ್ಟವಾಗುತ್ತಿದೆ.

ರಶ್ಯ ತನ್ನ ಬಳಕೆ ವಸ್ತುಗಳ ಶೇಕಡಾ 80 ರಷ್ಟನ್ನು ಆಮದು ಮಾಡುತ್ತಿದೆ. ರಶ್ಯಕ್ಕೆ ಈ ಬಳಕೆ ವಸ್ತುಗಳನ್ನು ಸುಮಾರು 160 ದೇಶಗಳು ರಫ್ತು ಮಾಡುತ್ತಿವೆ. ರಶ್ಯಾ ಈ ಬಳಕೆ ವಸ್ತು ಆಮದಿನ ಮೇಲೆ ತೀವ್ರವಾಗಿ ಅವಲಂಬಿಸಿದೆ. ರಶ್ಯನ್ ಆರ್ಥಿಕ ಸಚಿವಾಲಯ ಕೆಲವು ಬಳಕೆ ವಸ್ತುಗಳ ಆಮದಿನ ಮೇಲೆ ನಿಷೇಧ ಹಾಗೂ ಆಮದು ಶುಲ್ಕಹೇರಲು ಯೋಚಿಸುತ್ತಿದೆ ಎಂದು ರಶ್ಯದ ಉಪ ಆರ್ಥಿಕ ಮಂತ್ರಿ ಹೇಳಿದ್ದಾರೆ.

## ಕಾಬೂಲ್ ವಿಶ್ವವಿದ್ಯಾಲಯ ಪುನಃ ತೆರೆದಿದೆ ವಿದ್ಯಾರ್ಥಿನಿಯರಿಲ್ಲದೆ

ತಾಲಿಬಾನ್ ಸರಕಾರ ಅಧಿಕಾರ ವಹಿಸಿದ ನಂತರ ಮೊದಲ ಬಾರಿಗೆ ಕಾಬೂಲ್ ವಿಶ್ವವಿದ್ಯಾಲಯ ಪುನಃ ತೆರೆದಿದೆ. ಆದರೆ ಪುನರಾರಂಭವಾದ ಕಾಬೂಲ್ ವಿಶ್ವ ವಿದ್ಯಾಲಯದಲ್ಲಿ ಒಬ್ಬಳೇ ಒಬ್ಬ ವಿದ್ಯಾರ್ಥಿನಿ ಕಂಡು ಬರಲಿಲ್ಲ. ಅಧಿಕೃತವಾಗಿ ಕಾಬೂಲ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮುಂದು ವರಿಸಲು ನಿಷೇಧ ಇಲ್ಲವಾದರೂ ಈ ಪರಿಸ್ಥಿತಿ.

ವಿಶ್ವವಿದ್ಯಾಲಯ ಆರಂಭವಾದಾಗ ನಡೆದ ತಾಲಿಬಾನ್ ವ್ಯವಸ್ಥೆ ಮಾಡಿದ ಧಾರ್ಮಿಕ ಸಮಾರಂಭದಲ್ಲಿ ಮಾತನಾಡಿದ ಸರ್ಕಾರಿ ಅಧಿಕಾರಿಗಳು ಮಹಿಳೆಯರಿಗೆ ಪ್ರತ್ಯೇಕ ಅಧ್ಯಾಪಕರು, ಪ್ರತ್ಯೇಕ ಶಿಕ್ಷಣ ವ್ಯವಸ್ಥೆ ಮಾಡುವುದಾಗಿ ಭರವಸೆ ಇತ್ತರು. ಇದರರ್ಥ ಮಹಿಳೆಯರಿಗೆ ಪ್ರತ್ಯೇಕ ಕೋರ್ಸುಗಳು, ಅಧ್ಯಾಪಕಿಯರೂ ಮಾತ್ರ ಅನ್ನುವುದಾದರೆ ಹೆಚ್ಚು ಕಡಿಮೆ ಮಹಿಳೆಯರ ಉಚ್ಚ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದಂತೆ, ಈ ವ್ಯವಸ್ಥೆ ಆಗುವ ವರೆಗಂತೂ ಅವರ ಉನ್ನತ ವ್ಯಾಸಂಗ ನಿಷೇಧಿಸಿದ.

ಸದ್ಯಕ್ಕೆ ತಾಲಿಬಾನ್ ಸರಕಾರದ ನೀತಿಯ ಪ್ರಕಾರ ಮಹಿಳೆಯರು ವೈದ್ಯಕೀಯ, ಅಧ್ಯಾಪನ ವೃತ್ತಿಯಲ್ಲಿ ಮಾತ್ರ ಕೆಲಸ ಮಾಡಲು ಸಾಧ್ಯವಿಲ್ಲ.

## ಹತ್ತರಲ್ಲಿ ಎಂಟು ಜರ್ಮನರಿಗೆ ನಿರುದ್ಯೋಗದ ಭಯ

ಜರ್ಮನಿಯಲ್ಲಿ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ನೂರರಲ್ಲಿ 88 ಜರ್ಮನರ ಮುಖ್ಯ ಆತಂಕವೆಂದರೆ ಈ ವರ್ಷ ತಾವು ಉದ್ಯೋಗ ಕಳೆದುಕೊಳ್ಳಬಹುದು ಅಂತ. ಜರ್ಮನಿಯಲ್ಲಿ ಈಗಾಗಲೇ 10.6 ಶೇಕಡಾ(ಅಂದರೆ 46.6 ಲಕ್ಷ) ನಿರುದ್ಯೋಗಿಗಳಿದ್ದು ಈ ಸಂಖ್ಯೆ ಹೆಚ್ಚುತ್ತಿದೆ ಎಂಬುದು ಈ ಆತಂಕಕ್ಕೆ ಕಾರಣವಾಗಿದೆ. 1933 ರಲ್ಲಿ ಹಿಟ್ಲರನನ್ನು ಅಧಿಕಾರಕ್ಕೆ ತಂದ ಭಾರಿ ನಿರುದ್ಯೋಗದ ಸಂಖ್ಯೆಯನ್ನು ಇದು ಮೊದಲ ಬಾರಿಗೆ ಮೀರಿಸಿದೆ. ಪಶ್ಚಿಮ ಜರ್ಮನಿಯೊಂದಿಗೆ ವಿಲೀನವಾದ ಪೂರ್ವ ಜರ್ಮನಿಯ ನಿರುದ್ಯೋಗ ಶೇಕಡಾ 15 ಕ್ಕಿಂತಲೂ ಹೆಚ್ಚು.

ಈ ಸಮೀಕ್ಷೆಯ ಪ್ರಕಾರ ಜರ್ಮನರ ಇತರ ಅತಿ ಮುಖ್ಯ ಆತಂಕಗಳೆಂದರೆ ವೈದ್ಯಕೀಯ ವಿಮೆಯಲ್ಲಿ ಭಾರಿ ಕಡಿತ, ಪೆನ್‌ಶನ್‌ನಲ್ಲಿ ಕಡಿತ, ಮಾದಕದ್ರವ್ಯ ಸೇವನೆ, ಅಪರಾಧದಲ್ಲಿ ಭಾರಿ ಹೆಚ್ಚಳ ಹಾಗೂ ಪರಿಸರ ಮಾಲಿನ್ಯ.

## ರಶ್ಯಾ ಕ್ಯಾಬಿನೆಟ್‌ನಲ್ಲಿ ಬದಲಾವಣೆ ಜನತೆಯನ್ನು ಮೋಸಗೊಳಿಸುವ ತಂತ್ರ

ನ್ಯೂಮೋನಿಯಾದಿಂದ, ಹೃದಯ ಚಿಕಿತ್ಸಾ ನಂತರದ ತೀವ್ರ ಆರೋಗ್ಯ ಸಮಸ್ಯೆಗಳ ನಂತರ ವಾಪಾಸಾಗಿರುವ ರಶ್ಯದ ಅಧ್ಯಕ್ಷ ಯೆಲ್ಸಿನ್ ಪುನಃ ಜನತೆಯನ್ನು ಮೋಸಗೊಳಿಸುವ ನಾಟಕದಲ್ಲಿ ತೊಡಗಿದ್ದಾರೆ.

ಸುಮಾರು 9 ತಿಂಗಳ ನಂತರ ಅಧಿಕಾರ ಪುನಃ ವಹಿಸಿಕೊಂಡ ಯೆಲ್ಸಿನ್ ಕೆಲವು ಹೊಸ, ಹಲವು ಹಳೆಯ ಆಶ್ವಾಸನೆಗಳನ್ನು ನೀಡಿದ್ದಾರೆ. ಕಳೆದ ಒಂಭತ್ತು ತಿಂಗಳಲ್ಲಿ ಸರಕಾರ ನಿಷ್ಕ್ರಿಯವಾಗಿದೆ ಎಂದು ಟೀಕಿಸಿದ್ದಾರೆ. ಪ್ರಧಾನಮಂತ್ರಿ ಸೇರಿ ಇಡೀ ಮಂತ್ರಿಮಂಡಳಿಯನ್ನು ಪುನರಚಿಸುವುದಾಗಿ ಹೇಳಿದ್ದಾರೆ. ಪುನರ್ರಚನೆಯಾದಾಗ ಹೊಸ 'ಶಕ್ತಿಯುತ ಹಾಗೂ ಕಾರ್ಯದಕ್ಷ ಮಂತ್ರಿಗಳನ್ನು ನೇಮಿಸುತ್ತಾರಂತೆ. ಆದರೆ ಈಗಿನ ಅದಕ್ಷ ಮಂತ್ರಿಗಳನ್ನು ನೇಮಿಸಿದ್ದು ಯಾರು? ಏಕೆ ಎಂಬ ಪ್ರಶ್ನೆಗೆ ಇಂದಿನ ರಶ್ಯಾದಲ್ಲಿ ಉತ್ತರವಿಲ್ಲ. ಹೆಚ್ಚಿನ ಸರಕಾರಿ ಸಂಸ್ಥೆ, ಕಾರ್ಖಾನೆಗಳಲ್ಲಿ ಖಾಸಗಿ ಕಂಪನಿಗಳಲ್ಲಿ ತಿಂಗಳುಗಟ್ಟಲೆ ಸಂಬಳ ಕೊಡದಿರುವುದು ಹಾಗೂ ಪೆನ್‌ಶನ್ ಪಾವತಿ ಮಾಡದಿರುವುದರ ಬಗ್ಗೆ ಸರಕಾರವನ್ನು ತೀವ್ರವಾಗಿ ಅವರು ಟೀಕಿಸಿದ್ದಾರೆ. ಈ ಬಾರಿಯ ಬಜೆಟ್ ಬೇಕಾಬಿಟ್ಟಿಯಾಗಿರುವುದನ್ನು ಟೀಕಿಸಿದ್ದಾರೆ. ಇವೆಲ್ಲಾ ಯೆಲ್ಸಿನ್ ಪುನರಾಯ್ಕೆಗೆ ಬೇಕಾಬಿಟ್ಟಿ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಂಡದ್ದರ ಫಲ ಮಾತ್ರ ಎಂದು ಒಪ್ಪಿಕೊಂಡಿಲ್ಲ. ಅಪರಾಧ ಹಾಗೂ ಭ್ರಷ್ಟಾಚಾರವನ್ನು ತೊಡೆದುಹಾಕುವ, ನಾಟೋ ಪೂರ್ವದತ್ತ ಹರಡುವುದರ ವಿರುದ್ಧ, ಇತರ ಮಾಜಿ ಸೋವಿಯತ್ ಗಣರಾಜ್ಯಗಳ ಜತೆ ಸಂಬಂಧ ಗಟ್ಟಿಗೊಳಿಸುವ ಬಗ್ಗೆ ಪುನಃ ಮಾತನಾಡಿದ್ದಾರೆ.

ಆದರೆ ಆ ಮೇಲ ಮಾಡಲಾದ ಮಂತ್ರಿಮಂಡಲ ಬದಲಾವಣೆಗಳನ್ನು ನೋಡಿದರೆ ಇಂತಹ ಯಾವುದೇ ಜನ-ಪರ ಬದಲಾವಣೆ ಕಂಡಿಲ್ಲ. ಚೆರ್ನೋಮೆರ್ಡಿನ್ ಪ್ರಧಾನ ಮಂತ್ರಿಯಾಗಿ ಮುಂದುವರಿದಿದ್ದಾರೆ. ಆತನ ಅಧಿಕಾರಗಳನ್ನು ಮೊಟಕುಗೊಳಿಸಲಾಗಿದೆ. ಈಗಿನ ಎಲ್ಲಾ ಆರ್ಥಿಕ ಗೊಂದಲ ದುಸ್ಥಿತಿಗೆ ಕಾರಣವಾದ ಖಾಸಗೀಕರಣ ಮುಂತಾದ ಜನ-ವಿರೋಧಿ ನೀತಿಗಳನ್ನು ತರಾತುರಿಯಲ್ಲಿ ಜಾರಿಮಾಡಿ ಎಲ್ಲರ ಕೋಪಕ್ಕೆ ತುತ್ತಾಗಿ ಮಂತ್ರಿಮಂಡಲದ ಹೊರಗೆ ಹೋಗಿದ್ದ ಅನಾತೋಲಿ ಚುಬಿಯಾಸ್ ವಾಪಸು ಬಂದಿದ್ದಾರೆ. ಆತ ಮೊದಲ-ಉಪಪ್ರಧಾನಿ ಆಗಿರುತ್ತಾರೆ. ಆದರೆ ಪ್ರಧಾನ ಮಂತ್ರಿಯ ಹೆಚ್ಚಿನ ಅಧಿಕಾರಗಳನ್ನು ಆತ ಚಲಾಯಿಸುತ್ತಾರೆ. ಆರ್ಥಿಕ, ಸಾಮಾಜಿಕ, ಆಂತರಿಕ ಹಾಗೂ ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ನಾಲ್ಕು ಪ್ರಮುಖ ಉಪಪ್ರಧಾನಿಗಳೂ ಹೊಸ ಮಂತ್ರಿಮಂಡಲದಲ್ಲಿದ್ದಾರೆ. ಹಾಗಾದರೆ ಮಂತ್ರಿಮಂಡಲದಲ್ಲಿ ಬದಲಾವಣೆಯಾದರೂ ಏನು? ಜನರನ್ನು ಮೊದ್ದು ಮಾಡುವುದು ಹಾಗೂ ಯೆಲ್ಸಿನ್ ಸರಕಾರದ 'ಬಾಸ್' ಪುನರ್‌ಸ್ಥಾಪಿಸುವುದು, ಯಾರಾದರೂ ಮಂತ್ರಿಗಳು ಆತನಿಗೆ ಸವಾಲು ಹಾಕದಂತೆ ಹೆದರಿಸುವುದು ಅಷ್ಟೆ.

## ಮತದಾನ ಹಕ್ಕನ್ನು ಕಳೆದುಕೊಳ್ಳುತ್ತಿರುವ ಅಮೆರಿಕನ್ ಕರಿಯರು

ಇಡೀ ಜಗತ್ತಿಗೆ 'ಪ್ರಜಾಪ್ರಭುತ್ವ'ದ ಬಗ್ಗೆ ಭಾಷಣ ಬಿಗಿಯುವ ಅಮೆರಿಕದಲ್ಲಿ, ಒಂದು ವಿಭಾಗದ ನಾಗರೀಕರ ಮತದಾನದ ಹಕ್ಕನ್ನು ವ್ಯವಸ್ಥಿತವಾಗಿ ಕಸಿಯಲಾಗುತ್ತಿದೆ. ಇಂದು ಏಳರಲ್ಲಿ ಒಬ್ಬ ಕರಿಯ ವಯಸ್ಕ ತನ್ನ ಮತದಾನದ ಹಕ್ಕು ಕಳೆದುಕೊಂಡಿದ್ದಾನೆ. ಕಾರಣ? ಅಮೆರಿಕದ ಕಾನೂನಿನ ಪ್ರಕಾರ ಕ್ರಿಮಿನಲ್ ಕಾನೂನು ಪ್ರಕಾರ ಯಾರಾದರೂ ಆಪಾದಿತನಾದರೆ, ಆತ ತನ್ನ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಶಿಕ್ಷೆ ಅನುಭವಿಸಿ ಹೊರ ಬಂದ ಮೇಲೂ. ಈ ರೀತಿ ಮತದಾನದ ಅಥವಾ ಪ್ರಜೆಯ ಮೂಲಭೂತ ಹಕ್ಕನ್ನು ಕಳೆದುಕೊಂಡವರ ಸಂಖ್ಯೆ 14.6 ಲಕ್ಷ. ಈ ಸಂಖ್ಯೆ ಇದೇ ಕಾನೂನಿನ ಪ್ರಕಾರ ಮತಧಾನದ ಹಕ್ಕು ಕಳೆದು ಕೊಳ್ಳುತ್ತಿರುವ ಬಿಳಿಯರ ಎಂಟು ಪಟ್ಟು. ಕಳೆದವರ್ಷ ಇದು ಏಳು ಪಟ್ಟಾಗಿತ್ತು.

ಮೂವರಲ್ಲಿ ಒಬ್ಬ ಕರಿಯ ವಯಸ್ಕ ಜೈಲಿನಲ್ಲಿದ್ದಾನೆ. ಹಾಗೂ ಇತ್ತೀಚೆಗೆ ಮಾದಕ ದ್ರವ್ಯಗಳ ಸೇವನೆ, ಸರಬರಾಜಿನ ಸುಳ್ಳು ಆಪಾದನೆಯ ಮೇಲೆ ಕರಿಯರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವ ಒಂದು ಭಾರಿ ಪಿತೂರಿ ಬೆಳಕಿಗೆ ಬಂದಿತ್ತು. ಕರಿಯರ ಮೇಲೆ ಆಪಾದನೆ ಸಂಖ್ಯೆ ಐದು ಪಟ್ಟು ಏರಿದೆ.

ಈ ಹಿನ್ನೆಲೆಯಲ್ಲಿ ಕರಿಯರು ಮತದಾನದ ಹಕ್ಕು ಕಳೆದುಕೊಳ್ಳುತ್ತಿರುವುದು, ರಾಜಕೀಯ-ವರ್ಣಬೇಧ ನೀತಿಯಂತೆ ಕಾಣುತ್ತದೆ. ಕರಿಯರ ಮೇಲೆ ಸುಳ್ಳು ಕ್ರಿಮಿನಲ್ ಆಪಾದನೆ ಹಾಕುವುದು, ಹಾಗೂ ಕ್ರಿಮಿನಲ್ ಆಪಾದನೆ ಶಿಕ್ಷೆ ಅನುಭವಿಸಿದ ಮೇಲೂ ಮತದಾನದ ಹಕ್ಕು ಕಸಿದುಕೊಳ್ಳುವ ಕಾನೂನು ಬದಲಾಯಿಸುವುದು ಅತಿ ಅಗತ್ಯ ಎಂದು ಈ ಅಧ್ಯಯನ ನಡೆಸಿದ ಸಂಸ್ಥೆ ವಾದಿಸಿದೆ.

# ಜನರ ನೋವಿಗೆ ಸ್ಪಂದಿಸುವ 'ನಿರಂತರ' ಗೋಡೆಪತ್ರಿಕೆ ..............

ಪುಟ 4 ರಿಂದ

ಅವರಿಗೆ ಅತ್ಯುತ್ತಮ ಸಂಸದೀಯ ಪಟು ಎಂಬ ಪ್ರಶಸ್ತಿ ಬಂದದ್ದು, ನೆಲ್ಸನ್ ಮಂಡೇಲಾರನ್ನು ಬಿಡುಗಡೆ ಮಾಡಿ ಎಂದು ಹೇಳಿ ಗಾಳಿಪಟದಲ್ಲಿ ಸಂದೇಶ ನೀಡಿದ್ದರ ಬಗ್ಗೆ ಚಿತ್ರ ಮಾಲಿಕೆಯಂತಹ ಆಸಕ್ತಿ ವಿಷಯಗಳು ಓದುಗರನ್ನು 'ನಿರಂತರ' ದ ಮುಂದೆ ಬಂದು ನಿಲ್ಲುವಂತೆ ಮಾಡುತ್ತವೆ.

ಪತ್ರಿಕೆಯ ಓದುಗರು ಹೆಚ್ಚಾಗಿ ಸಮೂಹ ಸಂಘಟನೆಗಳಲ್ಲೇ ಇರುವವರಾದ್ದರಿಂದ ಮುಷ್ಕರ, ಪ್ರತಿಭಟನೆ, ಅರೆಸ್ಟ್ ಇತ್ಯಾದಿ ಸದಾ ನಡೆಯುವುದರಿಂದ 'ನಿರಂತರ' ಕಾನೂನು ಮಾಲಿಕೆಯನ್ನು ಪ್ರಕಟಿಸುತ್ತಿದೆ. ಅರೆಸ್ಟ್ ಎಂದರೆ ಏನು? ಅರೆಸ್ಟ್ ಆದ ನಂತರ ಇರುವ ಹಕ್ಕುಗಳೇನು, ಜಾಮೀನು ಎಂದರೇನು? ಪೋಲೀಸರು ಏನನ್ನು ಮಾಡ ಬಾರದು ಇತ್ಯಾದಿ ವಿಷಯ ಗಳ ಬಗ್ಗೆ ಚಿತ್ರ ಸಮೇತ ತಿಳಿಸುತ್ತದೆ.

ಪತ್ರಿಕೋದ್ಯಮ ಎಂದರೆ ಹೇಗಿರಬೇಕು ಎಂಬುದು 'ನಿರಂತರ'ದ ಪ್ರಮುಖ ಗುರಿ. ಪತ್ರಿಕೆಗಳು ಜನಪರವಾಗಿರಬೇಕು. ಈಗ ಅದು ಹಾಗಿಲ್ಲ ಎಂಬುದರ ಬಗ್ಗೆ ಆಗ್ಗಿಂದಾಗ್ಗೆ ವಿಮರ್ಶೆ ನಡೆಸುತ್ತಿರುತ್ತದೆ. ಗಣಶಕ್ತಿ ಯಶಸ್ವಿಯಾಗಿ 30 ವರ್ಷ ಪೂರೈಸಿದ್ದರ ಬಗ್ಗೆ, ಕಾವಿ ಪತ್ರಿಕೋದ್ಯಮ ಹರಡುತ್ತಿರುವ ಬಗ್ಗೆ, ದೂರದರ್ಶನದ ಜನ ವಿರೋಧಿ ನೀತಿಯ ಬಗ್ಗೆ ಅರಿವು ಮೂಡಿಸುತ್ತದೆ.

'ನಿರಂತರ' ಅಂದಿನ ಹೋರಾಟದ ನೆನಪುಗಳನ್ನೂ ಆಗೀಗ ಇಂದಿನ ಓದುಗರಿಗೆ ನೀಡುತ್ತದೆ. ಕಳೆದ 10 ವರ್ಷಗಳ ಹಿಂದೆ ಧರ್ಮಸ್ಥಳದ ಹೆಗ್ಗಡೆಗಳಿಗೆ ಬಲಿಯಾದ ಅವರ ಆಯ್ಕೆಯ ಅಭ್ಯರ್ಥಿಯ ವಿರುದ್ಧ ಚುನಾವಣೆಗೆ ನಿಂತರು ಎಂಬ ಕಾರಣಕ್ಕೆ ರೈತ ಸಂಘದ ಸಂಗಾತಿಯ ಮಗಳು ಪದ್ಮಲತಾಳನ್ನು ಕೊಲೆ ಮಾಡಿದ್ದರ ಬಗ್ಗೆ, ಆಗ ನಡೆಸಿದ ಹೋರಾಟದ ಬಗ್ಗೆ 'ಅಂದು ಪದ್ಮಲತಾ.... ಇಂದು' ಎಂದು ಪರಿಚಯ ನೀಡುತ್ತದೆ.

'ನಿರಂತರ' ಪತ್ರಿಕೆಯ ಪಕ್ಕದಲ್ಲಿಯೇ ಸುದ್ದಿ ಪೆಟ್ಟಿಗೆಯನ್ನು ಇರಿಸಲಾಗಿದೆ. ಹೀಗಾಗಿ ಕ್ವಿಜ್‌ಗೆ ಉತ್ತರ ಕೊಡುವವರು, ಪತ್ರಿಕೆ ಬಗ್ಗೆ ತಮ್ಮ ವಿಮರ್ಶೆಯನ್ನು ಬರೆಯುವವರು, ಹೊರ ಜಿಲ್ಲೆಗಳಿಂದ ಬಂದ ನಾಯಕರ ಅಭಿಪ್ರಾಯ, ಲೇಖಕರು ಬರೆದ ಹೊಸ ಲೇಖನ ಎಲ್ಲವೂ ಇಲ್ಲಿ ಬಂದು ಬೀಳುತ್ತದೆ.

'ನಿರಂತರ' ಈಗ ಉತ್ಸಾಹಕರ ಪ್ರತಿಕ್ರಿಯೆಯನ್ನು ಪಡೆದಿದೆ. ನಿರಂತರವನ್ನು ನೋಡಿದ ಕೇರಳದ ಸಂಗಾತಿಯೊಬ್ಬರು ತಮ್ಮ ಬಳಿ ಚಿತ್ರಗಳು, ಹಲವಾರು ಲೇಖನಗಳು, ಪಕ್ಷದ ನಾಯಕರ ಛಾಯಾ ಚಿತ್ರಗಳನ್ನು ಪೆಟ್ಟಿಗೆಗೆ ಹಾಕಿದ್ದಾರೆ. ವಸಂತ ಆಚಾರಿ ಹತ್ತು ವರ್ಷಗಳ ಹಿಂದಿನ ಪತ್ರಿಕೆಯಲ್ಲಿ ಪದ್ಮಲತಾ ಪ್ರಕರಣದ ಸಂಚಿಕೆಯನ್ನು ಕೊಟ್ಟಿದ್ದಾರೆ. ಹೀಗೆ 'ನಿರಂತರ' ಕ್ಕೆ ಹಲವು ದಿಕ್ಕಿನಿಂದ ಕೊಡುಗೆ ಹರಿದು ಬರುತ್ತಿದೆ.

'ನಿರಂತರ' ಪ್ರಕಟಣೆಯ ಖರ್ಚು. ಹೌದು ಇದನ್ನು ಸಂಭಾಳಿಸಲು ನಿರಂತರದಲ್ಲಿ ಜಾಹಿರಾತಿಗೂ ಜಾಗವಿದೆ. ಓದುವವರೇ ಈ ಪತ್ರಿಕೆಯ ಜಾಹಿರಾತುದಾರರೂ ಕೂಡ. ಒಂದು ಜಾಹಿರಾತಿಗೆ 100 ರೂ. ನಿರಂತರದಲ್ಲಿ ಜಾಹಿರಾತು ಇಲ್ಲ ಎನ್ನುವಂತೆಯೇ ಇಲ್ಲ. ಅಷ್ಟು ಉತ್ಸಾಹಕರ ಪ್ರತಿಕ್ರಿಯೆ ಇದೆ.

ಅದೆಲ್ಲಾ ಸರಿ ಈ ಪತ್ರಿಕೆ ಏಕೆಬೇಕು? -ಜಿಲ್ಲೆಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಬಿ.ಮಾಧವ ಇತ್ತೀಚೆಗೆ 'ನಿರಂತರ' ಕಾರ್ಯಕ್ರಮದಲ್ಲಿ ಹೇಳಿದ್ದನ್ನು ಹೇಳೋಣವೇ? - "ರಾಜ್ಯದ ಅನೇಕ ಪತ್ರಿಕೆ ಗಳು ವರ್ಗ ಹಿತಾಸಕ್ತಿಯನ್ನು ಕಾಪಾಡುತ್ತಿವೆ. ಜನರ ನೋವಿಗೆ ಸ್ಪಂದಿಸುವ ಪತ್ರಿಕೋದ್ಯಮ ಮರೆಯಾಗಿದೆ. ಅಂತಹ ಸಂದರ್ಭದಲ್ಲಿ 'ನಿರಂತರ' ಜನರ ನೋವಿಗೆ ಸ್ಪಂದಿಸಿ, ಜನರಿಗೆ ಬೇಕಾದ ಸುದ್ಧಿಯನ್ನು ಕೊಡುತ್ತಿದೆ. ಯಾವ ಪತ್ರಿಕೆಗಳಲ್ಲೂ ಬರದ ಸುದ್ಧಿಗಳು ಜನರಿಗೆ ಬೇಕಾದ ಸುದ್ಧಿಗಳು 'ನಿರಂತರ' ದಲ್ಲಿ ಕಾಣಸಿಕೊಂಡಿವೆ. ಒಬ್ಬ ನೇಯ್ಗೆಯವರಾಗಿದ್ದೂ ಹಂಚು ಕಾರ್ಖಾನೆಯ ಮಾಲೀಕರ ಗೂಂಡಾಗಿರಿ ವಿರುದ್ಧ ಹೋರಾಡಿ ತಮ್ಮ ತಪ್ಪು ಏನೂ ಇಲ್ಲದಿದ್ದರೂ ವಾಸಿ ಶಿಕ್ಷೆಗೆ ಗುರಿಯಾಗಿ ಕೊನೆಗೆ ಕೋರ್ಟ್‌ನಿಂದ ನಿರ್ದೋಷಿಯೆಂದು ಬಿಡುಗಡೆಯಾದ ಮುತ್ತಪ್ಪನವರ ಕಥೆಯನ್ನು 'ನಿರಂತರ' ದಲ್ಲಿ ಮಾತ್ರವಲ್ಲದೆ ಇನ್ನೆಲ್ಲಿ ಓದಲು ಸಾಧ್ಯ?"

ಜನರ ನೋವಿಗೆ ಸ್ಪಂದಿಸುವ ಪತ್ರಿಕೆ - ನಿರಂತರ. ಪತ್ರಿಕೋದ್ಯಮ ಲಾಭದ ಮೇಲೆ ಕಣ್ಣಿಟ್ಟಿರುವ ಮತ್ತೊಂದು ಉದ್ಯಮ ಮಾತ್ರವಾಗಿರುವಾಗ, ಸಂಘ ಪರಿವಾರದ ಕೋಮು ವಿಷ ಪತ್ರಿಕೆಗಳಲ್ಲಿಯೂ ಕಾಣಿಸಿಕೊಳ್ಳುತ್ತಿರುವಾಗ ಅದರ ರೀತಿಗಳನ್ನು ಬಯಲು ಮಾಡಲು ಜನ ಪರವಾದ ನೋಟ ನೀಡಲು 'ನಿರಂತರ' ಅನಿವಾರ್ಯ.

ಬಂಡವಾಳಶಾಹಿಗಳು ಕೋಟಿಗಟ್ಟಲೆ ಹಣ ಸುರಿದು ಮಣಗಟ್ಟಲೆ ಸುಳ್ಳು ಹರಡುತ್ತಿರುವ ಸಂದರ್ಭದಲ್ಲಿ ಕೆಲವೇ ರೂಪಾಯಿಗಳಲ್ಲಿ, ಜನರ ದೇಣಿಗೆಯಲ್ಲಿ ಜನರಿಗೆ ಬೇಕಾದ ಸುದ್ದಿಯನ್ನು ನೀಡುತ್ತಿರುವ ಬಡ ಜನರ ಪತ್ರಿಕೆ. ಉಳ್ಳಾಲ, ಬಜಾಲ್, ತೊಕ್ಕೊಟ್ಟು, ಕೊಂಚಾಡಿ, ಪೇರೇಬೈಲ್, ಕೈಕಂಬ, ಕೂಕಾಜೆ, ಬೆಳ್ತಂಗಡಿ, ಬಂಟ್ವಾಳಗಳಿಂದ ಜನ ಈ. ಪತ್ರಿಕೆ ಓದಲೆಂದೇ ಬರುವಾಗ 'ನಿರಂತರ' ಜನರ ಪತ್ರಿಕೆ ಅಲ್ಲ ಎನ್ನಲು ಯಾರಿಗೆ ಸಾಧ್ಯ?

○



# ಆಗಸದಲ್ಲಿ ಮತ್ತೊಂದು ಸಡಗರ

# 'ಹೇಲ್‌ಬಾಪ್' ಧೂಮಕೇತು

ಈ ಏಪ್ರಿಲ್ ಮೊದಲ ವಾರದಲ್ಲಿ ಸೂರ್ಯಾಸ್ತದ ನಂತರ ಆಗಸದಲ್ಲಿ ವಾಯುವ್ಯ ದಿಕ್ಕಿನತ್ತ ತಲೆಯೆತ್ತಿ ನೋಡಿದರೆ ಒಂದು ಹೊಳಪಿನ ಆಕಾಶಕಾಯ ಕಾಣುತ್ತದೆ. ಇದು ಹೇಲ್-ಬಾಪ್ ಧೂಮಕೇತು ಎಂದು ಖಗೋಳ ಶಾಸ್ತ್ರಜ್ಞರು ಹೇಳಿದ್ದಾರೆ.

1995 ಜುಲೈ 23ರಂದು ಅಧ್ಯಯನದಲ್ಲಿ ತೊಡಗಿದ್ದ ಖಗೋಲವಿಜ್ಞಾನಿಗಳಾದ ಆಲನ್ ಹೇಲ್ ಮತ್ತು ಥಾಮಸ್ ಬಾಪ್ ಅವರಿಗೆ ದೂರದರ್ಶಕದಲ್ಲಿ ಧೂಮಕೇತುವೊಂದು ಕಾಣಿಸಿಕೊಂಡಿತು. ಅವರು ಅದನ್ನು ಎರಡು ಪ್ರತ್ಯೇಕ ಸ್ಥಳಗಳಲ್ಲಿ ಒಂದೇ ಬಾರಿಗೆ ಪತ್ತೆ ಮಾಡಿದ್ದರಿಂದ ಅವರಿಬ್ಬರ ಹೆಸರನ್ನು ಈ ಧೂಮಕೇತುವಿಗೆ ಇಡಲಾಗಿದೆ.

**ಧೂಮಕೇತು ಎಂದರೇನು?**

ಅದೊಂದು ಆಕಾಶಕಾಯ. ಆದರೆ ಗ್ರಹ, ನಕ್ಷತ್ರಗಳಂತೆ ಅದು ಸದಾ ಗೋಚರಿಸುವಂತಹದ್ದಲ್ಲ. ಅಪರೂಪಕ್ಕೊಮ್ಮೆ ಕಾಣಸಿಗುವಂತದ್ದು. ಆದ್ದರಿಂದಲೇ ಅವುಗಳ ಸುತ್ತ ಸೂರ್ಯಗ್ರಹಣ, ಚಂದ್ರಗ್ರಹಣಗಳಂತೆ ಜಗತ್ತಿನ ವಿವಿಧ ನಾಗರೀಕತೆಗಳು ವಿವಿಧ ಕಥೆಗಳನ್ನು ಕಟ್ಟಿವೆ. ಅವನ್ನು ಅನಿಷ್ಟ ಸೂಚಕಗಳೆಂದೂ ವರ್ಣಿಸಲಾಗಿದೆ. ಧೂಮಕೇತು ಎಂಬ ಹೆಸರೇ ಅದನ್ನು ಸೂಚಿಸುತ್ತದೆಯಲ್ಲವೇ? ಆದರೆ ಇವೆಲ್ಲಾ ಕೇವಲ ಕಪೋಲಕಲ್ಪನೆ ಎಂಬ ಬಗ್ಗೆಈಗೇನೂಸಂದೇಹಉಳಿದಿಲ್ಲ.

ಸೌರಮಂಡಲ ಜನಿಸಿದಾಗ ಗ್ರಹ, ಉಪಗ್ರಹಗಳು ನಕ್ಷತ್ರದ ಬಿಸಿ ರಾಶಿಯಿಂದ ಹೊರಸಿಡಿದು ಘನೀಭವಿಸಿದವು. ಕೆಲವು ಸೌರ ಚೂರುಗಳು ಘನೀಭವಿಸದೆ ಸೌರ ಮಂಡಲದಾಚೆ ಎಸೆಯಲ್ಪಟ್ಟವು. ಇವೆಲ್ಲಾ ಸೇರಿ ಮೋಡದಂತೆ ರಾಶಿಯಾದವು. 1900ರಲ್ಲಿ ಹಾಲೆಂಡಿನ ಖಗೋಳಜ್ಞ ಜಾನ್.ಹೆಚ್. ಲೂರ್ಥ್ ಈ ಮೋಡವನ್ನು ಮೊದಲು ಪತ್ತೆ ಮಾಡಿದ್ದರಿಂದ ಇದನ್ನು 'ಲೂರ್ಥ್ ಮೋಡ' ಎನ್ನುತ್ತಾರೆ. ಧೂಮಕೇತುಗಳ ಮನೆ ಈ ಲೂರ್ಥ್ ಮೋಡ ಎನ್ನಲಾಗಿದೆ. ಸೂರ್ಯನಿಂದ ಸುಮಾರು 9 ಲಕ್ಷ ಕೋಟಿ ಕಿಲೋಮೀಟರ್ ಗಿಂತ ಹೆಚ್ಚು ದೂರದಲ್ಲಿರುವ ಈ ಲೂರ್ಥ್ ಮೋಡದಲ್ಲಿ 20 ಸಾವಿರ ಧೂಮಕೇತುಗಳಿರಬಹುದೆಂದು ಅಂದಾಜು ಮಾಡಲಾಗಿದೆ.

ಈ ಲೂರ್ಥ್ ಮೋಡದ ರಾಶಿ ಬಹಳ ನಿಧಾನವಾಗಿ ಚಲಿಸುತ್ತಿರುತ್ತದೆ. ಯಾವುದಾದರೂ ನಕ್ಷತ್ರ ಸಮೀಪದಿಂದ ಹಾದು ಹೋದಾಗ ಕೆಲವು ಧೂಮಕೇತುಗಳು ಗುರುತ್ವಾಕರ್ಷಣೆಕ್ಕೆ ಒಳಗಾಗಿ ಮೋಡದಿಂದ ಹೊರಬಂದು ಸೂರ್ಯನತ್ತ ಚಲಿಸತೊಡಗುತ್ತವೆ. ಆರಂಭದಲ್ಲಿ ಇದು ಚಿಕ್ಕ ಧೂಳಿನ ಮುದ್ದೆಯಂತಿರುತ್ತದೆ. ಸೂರ್ಯನ ಸಮೀಪ ಬಂದ ಹಾಗೆ ಉಬ್ಬಿ ಅದರ ಆಕಾರ ಬೆಳೆಯಲಾರಂಭಿಸುತ್ತದೆ - ಕೆಲವೊಮ್ಮೆ ಭೂಮಿಗಿಂತಲೂ ದೊಡ್ಡದಾಗಿ, ಧೂಮಕೇತು ಸೂರ್ಯನಿಗೆ ಎರಡು ಖಗೋಳಮಾನದಷ್ಟು(ಒಂದು ಖಗೋಳ ಮಾನ ಎಂದರೆ ಸೂರ್ಯನಿಗೂ ಭೂಮಿಗೂ ಇರುವ ಅಂತರ) ಸಮೀಪ ಬಂದಾಗ ಅದರ ತಾಪ ವಿಪರೀತ ಏರಿ ಅನಿಲ, ಧೂಳುಗಳು ಬಿಡುಗಡೆಯಾಗುತ್ತವೆ. ಒಂದು ಕಡೆ ಅನಿಲಗಳ ಪೂರ ಉಬ್ಬಿಕೊಂಡು ತಲೆಯಂತೆ ಹಾಗೂ ಬಿಡುಗಡೆಯಾದ ಅನಿಲ, ಧೂಳು ಸೂರ್ಯನ ವಿರುದ್ಧ ದಿಕ್ಕಿಗೆ ಬಾಲದಂತೆ ಚಾಚಿಕೊಳ್ಳುತ್ತವೆ. ಈಗ ಇದು ಭೂಮಿಯ ಮೇಲೆ ನಮಗೆ ಪರಿಚಿತವಾಗಿರುವ ಧೂಮಕೇತು - ತಲೆ ಮತ್ತು ಬಾಲಗಳಿರುವ ಒಂದು ಪ್ರಕಾಶಮಾನವಾಗಿ ಕಾಣುವ ಆಕಾಶಕಾಯ - ಇವುಗಳಲ್ಲಿ ಕೆಲವು ಗುರುತ್ವಾಕರ್ಷಣ ನಿಯಮದ ಪ್ರಕಾರ ನಿರ್ದಿಷ್ಟ ಪಥದಲ್ಲಿ ಸುತ್ತುತ್ತಿರುತ್ತವೆ. ನಮ್ಮ ಬಳಿ ಬಂದಾಗ ಮಾತ್ರ ಪ್ರಕಾಶ ಮಾನವಾಗಿ ನಮಗೆ ಕಾಣುತ್ತವೆ. ಈ ಪರಿಭ್ರಮಣೆಯ ಅವಧಿ 3.3 ವರ್ಷದಿಂದ 20000 ಸಾವಿರ ವರ್ಷದವರೆಗೂ ಇದೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ.

ಈಗ ಗೋಚರಿಸುತ್ತಿರುವ ಹೇಲ್-ಬಾಪ್ ಧೂಮಕೇತುವಿನ ವ್ಯಾಸ 40 ಕಿ.ಮೀಗಳಷ್ಟು. ಏಪ್ರಿಲ್ 1ರಂದು ಭೂಮಿಗೆ ಅತಿ ಸಮೀಪ ಎಂದರೆ 137 ದಶಲಕ್ಷ ಕಿ.ಮೀ. ದೂರದಲ್ಲಿರುತ್ತದೆ. ಏಪ್ರಿಲ್ 14ರ ವರೆಗೂ ಇದನ್ನು ಬರಿಗಣ್ಣಿನಿಂದ ನೋಡಬಹುದು. ಏಪ್ರಿಲ್ ಅಂತ್ಯದಲ್ಲಿ ಅದು ಸೂರ್ಯನ ಸಮೀಪ ಹೋಗುವುದರಿಂದ ಕಾಣುವುದಿಲ್ಲ. ಮೇ-ಜೂನ್ ತಿಂಗಳಲ್ಲಿ ಅದು ಸೂರ್ಯನನ್ನು ಬಳಸಿ ದೂರ ಹೋಗಲಾರಂಭಿಸುತ್ತದೆ. ಇದಕ್ಕೆ ಸೂರ್ಯನ ಒಂದು ಸುತ್ತು ಬರಲು ಸುಮಾರು 3000 ವರ್ಷಗಳು ಹಿಡಿಸಬಹುದೆಂದು ಅಂದಾಜು ಮಾಡ ಲಾಗಿದೆ. ಇದುವರೆಗೆ ಕಂಡ ಧೂಮಕೇತು ಗಳಿಗಿಂತ ಹೆಚ್ಚು ಹೊಳಪನ್ನು ಇದು ಹೊಂದಿದ್ದು ಆಸಕ್ತರಿಗೆ ಸಡಗರವನ್ನುಂಟು ಮಾಡುವಂತದ್ದು ಎಂದು ಖಗೋಳಜ್ಞರು ಹೇಳುತ್ತಿದ್ದಾರೆ.

ಈ ಧೂಮಕೇತು ಹಾಗೂ ಇತರ ಧೂಮಕೇತುಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ಓದಿ -

> "ಆಕಾಶದ ನವಿಲು ಗರಿ ಹೇಲ್‌ಬಾಪ್ ಧೂಮಕೇತು"
>
> ಲೇ: ಶೇಖರ ಗೌಳೇರ್
>
> ಬೆಲೆ ರೂ. 4.00
>
> ಪ್ರಕಟಣೆ: ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ರಾಜ್ಯ

ಅಣಕ — ಶರತ್‌ಚಂದ್ರ

# ಆರು ತಿಂಗಳ ಮದುವೆ

ಮದುವೆ ರಿಜಿಸ್ಟರ್ ಆಫೀಸರ್ ಶೇಷಣ್ಣ ಬರುತ್ತಿದ್ದಂತೆ, ಅವರ ಅಸಿಸ್ಟೆಂಟ್ ಕೃಷ್ಣಪ್ಪ ಕಿವಿಯಲ್ಲಿ, "ಇವತ್ತು ಭಾರಿ ವಿಶೇಷ ಮದುವೆ ಇದೆ ಸಾರ್" ಎಂದು ಉಸುರಿದ.

ಶೇಷಣ್ಣ(ಕೃಷ್ಣಪ್ಪನಿಗೆ) "ಹುಡುಗ, ಹುಡುಗೀನ ಕರೀರಿ"

ಕೃಷ್ಣಪ್ಪ "ಅದಕ್ಕಿಂತ ಮೊದಲು ಸ್ವಲ್ಪ ಹಿನ್ನೆಲೆ ಕೇಳ್ಕೊಳ್ಳಿ ಸಾರ್"

ಶೇಷಣ್ಣ "ಸುಮ್ಮನೆ ಹುಡುಗ ಹುಡುಗೀನ ಕರೀರಿ. ಅವರ ಹತ್ರನೆ ಕೇಳೋಣ(ಹುಡುಗ ಹುಡುಗಿ ಬಂದರು) ಏನ್ ನಿಮ್ಮ ಹೆಸರು? ನಿಮ್ಮಿಬ್ಬರನ್ನೂ ಎಲ್ಲೋ ನೋಡಿದ ಹಾಗೆ ಇದ್ಯಲ್ಲ. ಏನಾದ್ರೂ ಮೊದ್ಲೇ ಮದ್ವೆ ಮಾಡ್ಕಂಡಿದ್ರಾ?"

ಹುಡುಗಿ"ನನ್ನ ಹೆಸರು ಮಾಯವ್ವ ಅಂತ್ರೀ, ಇವರ ಹೆಸರು ಕಾಶಿನಾಥ ಅಂತ. ನಾವು ಹಿಂದೆ ಮದ್ವೆ ಮಾಡಿಕೊಂಡಿದ್ವಿ. ಆಗ ನೀವು ನೋಡಿರ್ಬೇಕು"

ಕೃಷ್ಣಪ್ಪ (ಶೇಷಣ್ಣನವರ ಕಿವಿಯಲ್ಲಿ)"ಅದೇ ಹಿನ್ನೆಲೆ ಕೇಳಿಕೊಳ್ಳಿ ಅಂತ ಹೇಳಿದ್ದು"

ಶೇಷಣ್ಣ(ಕೃಷ್ಣಪ್ಪನಿಗೆ ಸುಮ್ನಿರ್ರಿ ಅನ್ನುತ್ತಾ) "ಮತ್ತೆ ತಿರ್‍ಗಾ ಯಾಕೆ ಮದ್ವೆ ಮಾಡಿಕೊಳ್ತಾ ಇದ್ದೀರಿ"

ಮಾಯವ್ವ "ಕಾಶಿನಾಥ ನಾಲ್ಕು ತಿಂಗಳು ಚೆನ್ನಾಗೇ ಇದ್ದ. ಆಮೇಲೆ ಇದ್ದಕಿದ್ದ ಹಾಗೆ ನಮ್ಮ-ನಿಮ್ಮ ಕುಲಗೋತ್ರ ಸರಿ ಬೀಳುವುದಿಲ್ಲ ಅಂತ ಸೋಡ ಚೀಟಿ ಕೊಟ್ಟುಬಿಟ್ಟ"

ಶೇಷಣ್ಣ "ಹಾಗಾದ್ರೆ ಯಾಕಮ್ಮ ತಿರ್‍ಗಾ ಅವನ ಜತೆ ಮದ್ವೆ ಮಾಡ್ಕೊಳ್ತಾ ಇದ್ದೀ. ಈಗ ಕುಲ ಗೋತ್ರ, ಎಲ್ಲಾ ಸರಿ ಹೋಯ್ತಾ?ಹೋಗ್ಲಿ ನಿಮ್ಮಿಬ್ಬರ ಕುಲ ಗೋತ್ರ ಏನು?"

ಕಾಶಿನಾಥ್ "ನಮ್ಮದು ಮನುಕುಲ ಸಾರ್, ನಾವು ಅಪ್ಪಟ ಬ್ರಾಹ್ಮಣರು, ಇವರದ್ದು ಬಹುಕುಲ ಸಾರ್, ಸಂಪ್ರದಾಯ ಪ್ರಕಾರ ಮದ್ವೆ ಸಾಧ್ಯನೇ ಇಲ್ಲ"

ಕೃಷ್ಣಪ್ಪ (ಶೇಷಣ್ಣನಿಗೆ ಕಿವಿಯಲ್ಲಿ)"ಈ ಹುಡ್ಗಿ ಭಾರಿ ಘಾಟಿ ಸಾರ್, ಹಿಂದೆ ಇನ್ನೊಂದು ಹುಡುಗನ ಜತೆ ಮದ್ವೆ ಆಗಿತ್ತು ಸಾರ್, ಮಲಯಣ್ಣ ಅಂತ. ಅವನ ಜತೆ ಒಂದೆರಡು ವರ್ಷ ಸಂಸಾರ ಮಾಡಿ ಸೋಡಾಚೀಟಿ ಕೊಟ್ಟು ಬಿಟ್ಟಿದ್ದಾಳೆ"

ಶೇಷಣ್ಣ "ನಮ್ಮ ರೆಕಾರ್ಡ್ಸ್ ಪ್ರಕಾರ ನಿಮಗೆ ಹಿಂದೊಂದು ಮದ್ವೆ ಆಗಿತ್ತಲ್ಲ. ಮಲಯಣ್ಣ ಅಂತ ಅವರ ಜತೆ. ರಿಜಿಸ್ಟರ್ ಮದ್ವೆ ಮಾಡ್ಕೊಳ್ಳೋದು ಅಂದ್ರೆ ಸೈಟು ಕೊಂಡಾಂಗೆ, ಮಾರಿದಾಂಗೆ ಅಂದ್ಕೊಂಡ್ರಾ ಏನು? ಕುಲಗೋತ್ರದಲ್ಲಿ ನಂಬಿಕೆ ಇರುವವರು ರಿಜಿಸ್ಟರ್ಡ್ ಮದ್ವೆಯಾಕೆ ಮಾಡ್ಕೊಳ್ತೀರಾ?

ಮಾಯವ್ವ: "ಇಲ್ಲಾ ಸಾರ್ ಈ ಬಾರಿ ಸರಿಯಾಗಿ ಮಾತನಾಡಿಕೊಂಡಿದ್ದೀವಿ, ಆರು ತಿಂಗಳು ನಾನು ಕೇಳಿದ ಹಾಗೆ ಅವನು ಕೇಳ್ತಾನೆ. ಇನ್ನಾರು ತಿಂಗಳು ಅವನು ಹೇಳಿದ ಹಾಗೆ ನಾನು ಕೇಳ್ತೀನಿ. ಕುಲಗೋತ್ರ ಎಲ್ಲಾ ಹಾಸ್ಗೆ ಅಡಿ ಇಲ್ಲಾ ಅಟ್ಟದ ಮೇಲೆ ಇಟ್ಟಿರ್ತೀನಿ"

ಶೇಷಣ್ಣ "ಸರಿ ಈ ಮಲಯಣ್ಣನ ಜತೆ ಏನು ತಾಪತ್ರಯ ಆಗಿತ್ತು?"

ಮಾಯವ್ವ "ಅವ್ನ ಹೆಸ್ರ ಎತ್ಬೇಡಿ. ಭಾರಿ ಕೆಟ್ಟ ಮನುಷ್ಯ ಅವನು ಹೇಳಿದ ಹಾಗೆ ಕೇಳದಿದ್ರೆ ಚೆನ್ನಾಗಿ ಹೊಡಿತಿದ್ದ ಬಿಡಿ. ಈಗ್಩ೂ ನನ್ಗೆ ಹೆದರಿಸ್ತಾನೆ. ಅದ್ಕೆ ಈ ಮದ್ವೆ ಮಾಡ್ಕೊಳ್ತಾ ಇರೋದು. ಅಲ್ದೆ ಈ ಬಾರಿ ಕಾಶಿನಾಥ ಅವ್ನ ಎಲ್ಲಾ ಸಂಬಳ, ಆರು ತಿಂಗಳು ನನಗೆ ತಂದುಕೊಡ್ತೀನಿ ಅಂತ ಒಪ್ಕೊಂಡಿದ್ದಾನೆ"

ಕೃಷ್ಣಪ್ಪ "ಸಾರ್ ಇವಳ ತಂದೆ ತಾಯಿ ಸೀತಾರಾಂ ಅಂತ ಹುಡುಗನ ಜತೆ ಮದ್ವೆ ನಿಶ್ಚಿತಾರ್ಥ ಬೇರೆ ಮಾಡಿದ್ದಾರಂತೆ.

ಶೇಷಣ್ಣ "ನಿಮ್ಮ ಮದುವೆಗೆ ಸೀತಾರಾಂ ಅನ್ನುವವನಿಂದ ಆಕ್ಷೇಪ ಬಂದಿದೆ. ಆತನ ಜತೆ ನಿಮ್ಮ ಮದುವೆ ನಿಶ್ಚಿತಾರ್ಥ ಆಗಿತ್ತಂತೆ. ಇದಕ್ಕೆ ಏನು ಹೇಳ್ತೀರಾ?"

ಮಾಯವ್ವ "ನಿಶ್ಚಿತಾರ್ಥ ಆಗಿದ್ದೇನೋ ನಿಜ. ಆದರೆ ಮದ್ವೆ ಮಾಡ್ಕೋಬೇಕು ಅಂತ ಏನಾದ್ರೂ ಕಾನೂನು ಇದ್ಯಾ. ಅವನೂ ನನಗೆ ಮೋಸನೇ ಮಾಡಿದ್ದು, ದೊಡ್ಡ ಸರಕಾರಿ ಆಫಿಸರ್ ಕೆಲ್ಸ ಸಿಕ್ತಾ ಇದೆ ಅಂತ ಹೇಳಿದ. ನಿಶ್ಚಿತಾರ್ಥ ಆಯಿತು. ಈಗ ಏನೂ ಕೆಲ್ಸ ಇಲ್ದೆ ಲಾಟ್ರಿ ಹೊಡಿತಾ ಇದ್ದಾನೆ. ಮಲಯಣ್ಣ ಬೇರೆ ಎಲ್ಲಾ ಕಡೆ ಹೆದರಿಸ್ತಾ ಇರ್ತಾನೆ. ಅದ್ಕೆ ಈ ಕಾಶೀನಾಥನ ಜತೆ ಇರೋಣ ಅಂತ"

ಶೇಷಣ್ಣ "ಸರಿಯಮ್ಮ ನಂದೇನಿಲ್ಲ. ನಾನು ನಿನ್ನ ಒಳ್ಳೆದಕ್ಕೆ ಹೇಳಿದೆ ಅಷ್ಟೆ. ನೀನು ನಾಲ್ಕು ತಿಂಗಳಿಗೊಮ್ಮೆ ಮದ್ವೆ ಮಾಡ್ಕೋ, ಮೂರು ತಿಂಗಳಿಗೊಮ್ಮೆ ಮದ್ವೆ ಮಾಡ್ಕೋ ನನಗೇನೂ ತೊಂದ್ರೆ ಇಲ್ಲ"

ಮಾಯವ್ವ ಕಾಶಿನಾಥ "ಇಲ್ಲಾ ಸಾರ್, ಕನಿಷ್ಟ ಆರು ತಿಂಗಳು ನಿಮ್ಗೆ ತೊಂದ್ರೆ ಕೊಡಲ್ಲ ಸಾರ್"

# ನೇಣುಗಂಬದ ನೆರಳಲ್ಲಿ......

## ಕಾಂ. ಮುತ್ತಪ್ಪನವರ ಅಪೂರ್ವ ನೆನಪು

ಬಾಲಕೃಷ್ಣ ಅಡೆಂಡ

ಕಾಂ.ಮುತ್ತಪ್ಪನವರೊಂದಿಗೆ ನಾಗೇಶ್ ಕುಮಾರ್ ಮತ್ತು ಬಾಲಕೃಷ್ಣ ಅಡೆಂಡ



ಇತ್ತೀಚೆಗೆ ತೊಕ್ಕೊಟ್ಟುವಿನಲ್ಲಿ ನಡೆದ ಸಿಐಟಿಯು ಜಿಲ್ಲಾ ಸಮ್ಮೇಳನದ ಧ್ವಜ ಪಥ ಸಂಚಲನ ಸಮ್ಮೇಳನಕ್ಕೆ ಸ್ಫೂರ್ತಿಯ ಆರಂಭ ನೀಡಿತ್ತು. ಪಥ ಸಂಚಲನದ ಮುಂದೆ ಹಿರಿಯ ವ್ಯಕ್ತಿಯೋರ್ವರು ಕೆಂಬಾವುಟಯುಕ್ತ ಭಾರವಾದ ಧ್ವಜಕೋಲನ್ನು ಎತ್ತಿಕೊಂಡು ದಿಟ್ಟ ಹೆಜ್ಜೆಗಳನ್ನಿಡುತ್ತಾ ಮುನ್ನಡೆ ದಿದ್ದರು. ಇಳಿವಯಸ್ಸಿನಲ್ಲೂ ಕುಗ್ಗದೆ, ಜಗ್ಗದೆ ಮುನ್ನಡೆ ಯುತ್ತಿದ್ದ ಅವರು ಕಿರಿಯ ಸಂಗಾತಿಗಳಿಗೆ ಸ್ಫೂರ್ತಿ, ಹುರುಪು ನೀಡಿದ್ದರು. ಈ ವ್ಯಕ್ತಿಯೇ - ಕಾಂ ಮುತ್ತಪ್ಪ ಕರ್ಕೇರ.

ಕಾಂ॥ ಮುತ್ತಪ್ಪರ ಬದುಕು ಹೋರಾಟ-ತ್ಯಾಗ ಬಲಿದಾನಗಳ ರೋಮಾಂಚಕೇತಿಹಾಸ.

ತೀರಾ ಬಡ ಕುಟುಂಬದಲ್ಲಿ ಜನಿಸಿದ ಮುತ್ತಪ್ಪರಿಗೆ ಬಾಲ್ಯದಲ್ಲೇ ಬಡ ಬಗ್ಗರ ಬಗ್ಗೆ ಒಲವು-ಅನುಕಂಪ. ಅವರಿ ಗಾಗಿ ಏನಾದರೂ ಮಾಡಬೇಕೆಂಬ ಹಂಬಲ. ಪ್ರಗತಿಪರ ದೃಷ್ಟಿಕೋನವಿದ್ದ ತಂದೆತಾಯಿಗಳಿಗೆ ಪೂರಕವಾಗಿ ಮಗನೂ ನೊಂದ ಜನರ ಪರವಾಗಿ ದನಿ ಎತ್ತತೊಡಗಿದ್ದ.

ಹೊಟ್ಟೆಪಾಡಿಗಾಗಿ ನೇಕಾರ ವೃತ್ತಿ ಹಿಡಿದ ಮುತ್ತಪ್ಪರು ಆಗಿನ ಎಐಟಿಯುಸಿ ನ ಸಕ್ರಿಯ ಕಾರ್ಯಕರ್ತರಾದರು. ಕಾರ್ಮಿಕರ ಶೋಷಣೆಯ ವಿರುದ್ಧದ ಹೋರಾಟದ ನೇತೃತ್ವ ವಹಿಸಿಕೊಂಡರು. ಕಾರ್ಮಿಕ ವರ್ಗದ ಪಕ್ಷ ಕಮ್ಯುನಿಸ್ಟ್ ಪಕ್ಷವನ್ನು ಸೇರಿಕೊಂಡರು.

1954-ಮುತ್ತಪ್ಪರಿಗೆ ಆಗ 18 ರ ಹರೆಯ. ಮಂಗಳೂರು ನಗರವು ಕಾರ್ಮಿಕ ಚಳುವಳಿಗೆ ಮಹತ್ತರ ತಿರುವು ನೀಡಿದ ವರ್ಷವದು. ಹೆಂಚಿನ ಕಾರ್ಮಿಕರು ಕನಿಷ್ಟ ಕೂಲಿ ಗಾಗಿ ಸಮರ ಶೀಲ ಹೋರಾಟ ನಡೆಸಿದ್ದರು. ನೇಯ್ಗೆಗಾರರ ಸಂಘಟನೆಯು ಹೋರಾಟಕ್ಕೆ ಬೆನ್ನಿಗೆ ಬೆನ್ನು ಕೊಟ್ಟು ಕಾರ್ಮಿಕ ವರ್ಗದ ವರ್ಗಪ್ರಜ್ಞೆಯನ್ನು ತೋರಿಸಿಕೊಟ್ಟಿತು. ಹೋರಾಟವನ್ನು ಹತ್ತಿಕ್ಕಲು ಮಾಲಕರು ಎಂತಹ ನೀಚತನಕ್ಕೂ ತಯಾರಾಗಿದ್ದರು. ಲೋಕನಾಥನೆಂಬ ಕುಖ್ಯಾತ ಗೂಂಡಾ ಮಾಲಕರುಗಳ ಬಲಗೈ ಬಂಟನಾಗಿದ್ದ. ದುರ್ವರ್ತನೆಗಾಗಿ ಸೈನ್ಯದಿಂದ ಅಮಾನತಾಗಿದ್ದ ಈ ಗೂಂಡಾ ವಿಲಕ್ಷಣ ವ್ಯಕ್ತಿ. ಕಾರ್ಮಿಕರ ಸಭೆ, ಮೆರವಣಿಗೆಗಳ ಮೇಲೆ ಧಾಳಿ ಮಾಡುವುದು, ಮುಖಂಡರ ಮೇಲೆ ಹಲ್ಲೆ ಮಾಡು ವುದು ಈತನ ಪ್ರಿಯವಾದ ಕೆಲಸ. ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕಲು ಮಾಲಕರು ಈತನಿಗೆ ಪಿಸ್ತೂಲನ್ನು ಉಡುಗೊರೆಯಾಗಿ ನೀಡಿದ್ದರು. ಒಟ್ಟಿನಲ್ಲಿ ಕಾರ್ಮಿಕ ಚಳುವಳಿಗೆ ಲೋಕನಾಥ ದೊಡ್ಡ ಕಂಟಕನಾಗಿದ್ದ.

ಅಂದು ಕಾರ್ಮಿಕರು ತಮ್ಮ ಹೋರಾಟ ಮುಂದುವರಿಸಿ ಕಾರ್ಖಾನೆ ಮುಂದೆ ಬೆಳಿಗ್ಗೆಯೇ ಜಮಾಯಿಸಿದ್ದರು. ಇತ್ತ ಕಾರ್ಮಿಕರನ್ನು ಮುಗಿಸಲು ಗೂಂಡಾ ಲೋಕನಾಥ ಹೊಂಚು ಹಾಕಿ ಸ್ಥಳದತ್ತ ಧಾವಿಸುತ್ತಿದ್ದ. ಆತನ ಪ್ರಯತ್ನ ವೇನಾದರೂ ಫಲಿಸಿದ್ದರೆ ಅನೇಕ ಸಂಗಾತಿಗಳು ಹುತಾತ್ಮರಾಗಬೇಕಿತ್ತು. ಕಾರ್ಮಿಕ ಚಳುವಳಿಗೆ ಬಲವಾದ ಹೊಡೆತ ಬೀಳುತ್ತಿತ್ತು.

ಆದರೆ ಹಾಗಾಗಲಿಲ್ಲ, ಲೋಕನಾಥನ ನಿರ್ನಾಮ ಲೋಕ ಕಲ್ಯಾಣಕ್ಕೇ ಅನಿವಾರ್ಯವಾಗಿತ್ತೆಂದು ಕಾಣುತ್ತದೆ. ಕಾರ್ಮಿಕರನ್ನು ಮುಗಿಸಿ ಬಿಡುವ ಲೋಕನಾಥನ ಕಾರ್ಯ ತಂತ್ರ ಕೈ ಕೊಟ್ಟಿತು. ಬದಲಾಗಿ ಕಾರ್ಮಿಕರನ್ನು ನಿರಂತರವಾಗಿ ಪೀಡಿಸುತ್ತಿದ್ದ ಗೂಂಡಾ ತಾನೇ ಬಲಿಯಾದ. ಕಾರ್ಮಿಕ ಚಳುವಳಿಗೆ ಎದುರಾಗಿದ್ದ ಗಂಡಾಂತರವೊಂದು ತಪ್ಪಿ ಕಾರ್ಮಿಕ ವರ್ಗ ನಿಟ್ಟುಸಿರುಬಿಟ್ಟಿತು.

ಗೂಂಡಾನ ಅಂತ್ಯಕ್ಕೆ ಕಾರಣವೆಂದು ಕಾಂ॥ ಮುತ್ತಪ್ಪ ಮತ್ತು ಇತರ ಸಂಗಾತಿಗಳ ಮೇಲೆ ಪೋಲೀಸರ ಧಾಳಿ- ಅಮಾನುಷ ಚಿತ್ರಹಿಂಸೆ. ಕಾರ್ಮಿಕ ವರ್ಗದ ಹಿತಕ್ಕಾಗಿ ಮುತ್ತಪ್ಪನವರು ಎಲ್ಲವನ್ನೂ ಸಹಿಸಿಕೊಂಡರು. ತನಗಾದ ನೋವಿಗೆ ಪಶ್ಚಾತಾಪ ಪಡಲಿಲ್ಲ. ಅವರ ಕಣ್ಣಲ್ಲಿ ನೀರು ಬರಲಿಲ್ಲ. ಕೊನೆಗೆ ಜಿಲ್ಲಾ ನ್ಯಾಯಾಲಯದಿಂದ ಮುತ್ತಪ್ಪ ಮತ್ತು ಇತರ ಮೂವರು ಸಂಗಾತಿಗಳಿಗೆ ಗಲ್ಲು ಶಿಕ್ಷೆಯ ತೀರ್ಪು!

ಮುತ್ತಪ್ಪರ ನಗುಮುಖ ಬಾಡಲಿಲ್ಲ. ಹುತಾತ್ಮನಾಗುವೆನೆಂಬ ಸಂತಸ. ಆದರೂ ಗೆದ್ದೇ ಗೆಲ್ಲುವೆನೆಂಬ ಆಶಾವಾದ. ಕೊನೆಗೂ ವಿಜಯ ಮುಡಿವ ಜನರದಾಯಿತು. ಆಗಿನ ಮದ್ರಾಸು ಹೈಕೋರ್ಟ್‌ನಿಂದ ಮುತ್ತಪ್ಪರು ನಿರ್ದೋಷಿಯೆಂದು ತೀರ್ಪು.

ಮರಳಿ ಬಂದಾಗ ವಿರೋಚಿತ ಸ್ವಾಗತ. ಕಾರ್ಮಿಕ ಚಳುವಳಿಗೆ ಸಂಭ್ರಮದ ದಿನ ಅಂದು. ಮುತ್ತಪ್ಪರು ವಿರಮಿ ಸಲಿಲ್ಲ ಮತ್ತೆ ಕಾರ್ಮಿಕ ಚಳುವಳಿಯಲ್ಲಿ ತೊಡಗಿಸಿಕೊಂಡರು. ಹಿಂದೊಮ್ಮೆ ದ.ಕ. ನೇಯ್ಗೆಗಾರರ ಸಂಘದ ಉಪಾಧ್ಯಕ್ಷರಾಗಿದ್ದ ಅವರು ಈಗಲೂ ಆ ಸಂಘಟನೆಯಲ್ಲಿ ಸಕ್ರಿಯವಾಗಿದ್ದಾರೆ. ಅದಮ್ಯ ವಿಶ್ವಾಸದಿಂದ ಅಂದಿನಿಂದ ಇಂದಿನವರೆಗೂ ದುಡಿಯುವ ಜನರ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸಿಐಟಿಯು ಸಮ್ಮೇಳನದ ಸಂದರ್ಭದಲ್ಲಿ 'ನಿರಂತರ' ಬಳಗ ಮುತ್ತಪ್ಪನವರನ್ನು ಭೇಟಿಯಾಗಿ, ಅವರ ರೋಮಾಂಚಕಾರಿ ಬದುಕಿನ ಅನುಭವಗಳನ್ನು ಪಡೆದುಕೊಂಡಿತು.

**ಕಾರ್ಮಿಕ ವರ್ಗದ ಅಂದಿನ ಮತ್ತು ಇಂದಿನ ಶತ್ರುಗಳ ಬಗ್ಗೆ ಕೇಳಿದಾಗ**

■ *ಅಂದು ಕಾಂಗ್ರೆಸ್ಸಿಗರು ನಮ್ಮ ಚಳುವಳಿಗೆ ಸವಾಲಾಗಿದ್ದರೆ ಇಂದು ಕೋಮುವಾದಿಗಳು (ಬಿಜೆಪಿ, ಸಂಘಪರಿವಾರ) ನಮ್ಮ ಮುಖ್ಯ ಶತ್ರುಗಳು. ಕೋಮುವಾದಿಗಳು ಕಾರ್ಮಿಕರ ಐಕ್ಯತೆಗೆ ಮಾರಕವಾಗಿದ್ದಾರೆ.*

**ಗಲ್ಲು ಶಿಕ್ಷೆ ವಿಧಿಸಿದಾಗ ಆಘಾತವಾಗಲಿಲ್ಲವೇ?**

■ *ಇಲ್ಲವೇ ಇಲ್ಲ. ಕಾರ್ಮಿಕರ ಹಿತಕ್ಕಾಗಿ ಗಲ್ಲಿಗೇರುವುದು ಅದೃಷ್ಟ ಎಂದು ಭಾವಿಸಿದ್ದೆ. ನನ್ನ ಸಾವಿನಿಂದ ಕಾರ್ಮಿಕ ಚಳುವಳಿಗೆ ಪೆಟ್ಟು ಬೀಳದು ಮತ್ತಷ್ಟು ಮುಂದಕ್ಕೆ ಹೋದೀತೆಂಬ ಭಾವನೆಯಿತ್ತು. ಆದರೂ ಗೆದ್ದೇ ಗೆಲ್ಲುವೆನೆಂಬ ಭರವಸೆಯಿತ್ತು.*

**ಕಾರ್ಮಿಕ ಚಳುವಳಿ ಸೇರಲು ಸ್ಫೂರ್ತಿ.**

■ *ತಂದೆ ತಾಯಿಗಳೇ, ತೀರ ಬಡಕುಟುಂಬದಲ್ಲಿ ಜನಿಸಿದ ನನಗೆ ತಂದೆ ತಾಯಿಗಳು ಬಡಜನರ, ನೊಂದವರ ಪರ ಹೋರಾಡಲು ಸ್ಫೂರ್ತಿ ನೀಡಿದರು.*

**ಕಾರ್ಮಿಕ ಚಳುವಳಿಯ ಭವಿಷ್ಯತ್ತಿನ ಬಗ್ಗೆ**

■ *ಖಂಡಿತಾ ಆಶಾವಾದವಿದೆ. ಇಂದಿನ ಯುವಕರು ನಮ್ಮ ಕೆಲಸವನ್ನು ಇನ್ನಷ್ಟು ಸ್ಫೂರ್ತಿಯಿಂದ ಮುಂದುವರಿಸುತ್ತಾರೆಂಬ ಭರವಸೆಯಿದೆ. ಯುವಕರು ಪಾಲ್ಗೊಳ್ಳುವಿಕೆ ನೋಡಿದಾಗ ಖುಷಿಯಾಗುತ್ತದೆ.* □

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು